compose.kerala.gov.in
egazette.kerala.gov.in
printing.kerala.gov.in

Regn.No. KERBIL/2012/45073
dated 2012-09-05 with RNI
Reg No.KL/TV(N)/634/2021-2023

കേരള സർക്കാർ
GOVERNMENT OF KERALA

കേരള ഗസറ്റ്
KERALA GAZETTE

ആധികാരികമായി പ്രസിദ്ധപ്പെടുത്തുന്നത്
PUBLISHED BY AUTHORITY

ചൊവ്വ, 2025 നവംബർ 18
Tuesday, 18th November 2025

1201 വൃശ്ചികം 2
2nd Vrischikam 1201

1947 കാർത്തികം 27
27th Karthika 1947

വാല്യം 14
Vol. XIV

നമ്പർ / **No.** **46**

Part I -Section (iii)

Law Department

©
കേരള സർക്കാർ
GOVERNMENT OF KERALA
2025

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 81/ಲೆಗ್. ಸಿ3/2024/ಕಾನೂನು. ತಿರುವನಂತಪುರಂ, *2025* ಏಪ್ರಿಲ್ *16,* / *1200* ಮೇಷ *3* / *1947* ಚೈತ್ರ *26.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2025 ಏಪ್ರಿಲ್ 16ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್‌ಕುಮಾರ್,

ಕಾನೂನು ಕಾರ್ಯದರ್ಶಿ.

2025ರ 4ನೇ ಅಧಿನಿಯಮ

2025ರ ಕೇರಳ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ

1993ರ ಕೇರಳ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1993ರ ಕೇರಳ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ ಅಧಿನಿಯಮವನ್ನು ಈ ಕೆಳಗಿನ ಅಗತ್ಯಗಳಿಗಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2025ರ ಕೇರಳ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 22ನೇ ವಿಭಾಗದ ತಿದ್ದುಪಡಿ.—1993ರ ಕೇರಳ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ಅಧಿನಿಯಮದಲ್ಲಿ (1993ರ 3) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು) 22ನೇ ವಿಭಾಗದ (6)ನೇ ಉಪ-ವಿಭಾಗದ ನಂತರವೂ ವಿವರಣೆಯ ಮೊದಲೂ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(7) (5)ನೇ ಉಪ-ವಿಭಾಗದ ಪ್ರಕಾರ ಸಕ್ಷಮ ಪ್ರಾಧಿಕಾರವು ಪರಿಸರವನ್ನು ಸ್ವಾಧೀನಪಡಿಸಿಯೂ ಕಾರ್ಪರೇಷನಲ್ಲಿ ಯಾವುದಾದರೂ ಬಾಕಿಯನ್ನೂ ಪಾವತಿಸುವುದರಲ್ಲಿಯೂ ಆತ ಲೋಪವೆಸಗುವುದಾದರೆ, ಹಣವನ್ನು ಪಾವತಿಸಲು ಆತನಲ್ಲಿ ಸೂಚಿಸುತಾ ಸಕ್ಷಮ ಪ್ರಾಧಿಕಾರವು ಒಂದು ನೋಟೀಸನ್ನು ನೀಡತಕ್ಕದ್ದು ಹಾಗೂ ಸಕ್ಷಮ ಪ್ರಾಧಿಕಾರವು ಅನುಮತಿಸಿದ ಸಮಯದೊಳಗೆ ಆತನು ಆ ರೀತಿಯಲ್ಲಿ ಪಾವತಿಸುವಲ್ಲಿ ಲೋಪವೆಸಗುವ ಸಂಗತಿಯಲ್ಲಿ, ಕೇರಳ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ಕಾರ್ಪರೇಷನ್ ಒಂದು ಸ್ವತಂತ್ರ ಅನುಮೋದಿತ

This is a digitally signed Gazette.
Authenticity may be verified through https://compose.kerala.gov.in/

ಮೌಲ್ಯಮಾಪನ ಮಾಡುವವನಿಂದ ಆಸ್ತಿಗಳ ಮೌಲ್ಯಮಾಪನ ಮಾಡಿದನಂತರ ಖರೀದಿಸಲು ಸಿದ್ಧವಿರುವ ಮತ್ತೊಬ್ಬನಿಗೆ ಆಸ್ತಿಗಳ ಸಹಿತ ಉದ್ಯಮವನ್ನು ವರ್ಗಾವಣೆಗೊಳಿಸುವುದೊಳಪಟ್ಟವು ಅಗತ್ಯವಾದುದೆಂದು ಭಾವಿಸುವ ಅಂತಹ ಕ್ರಮಗಳನ್ನು ಕೈಗಾರಿಕಾ ಯೂನಿಟಿನ ಆಸ್ತಿಗಳ ಮೇಲೆ ಸ್ವೀಕರಿಸತಕ್ಕದ್ದು ಹಾಗೂ ಕಾರ್ಪರೇಷನಿಗಿರುವ ಬಾಕಿಗಳನ್ನು ವಸೂಲಿಮಾಡುವುದಕ್ಕಾಗಿ ಆಸ್ತಿಗಳನ್ನು ಮಾರಾಟಮಾಡತಕ್ಕದ್ದು.''.

ಟಿಪ್ಪಣಿ 1:—ಈ ಉಪ-ವಿಭಾಗದ ಅಗತ್ಯಕ್ಕಾಗಿ, ''ಕೈಗಾರಿಕಾ ಯೂನಿಟ್'' ಎಂಬ ಪದಕ್ಕೆ ಕಾರ್ಪರೇಷನಿನ ಒಡೆತನದಲ್ಲಿರುವ ಭೂಮಿಯಲ್ಲಿ ಕಾರ್ಪರೇಷನೊಂದಿಗೆ ಒಪ್ಪಂದದಲ್ಲಿ ಏರ್ಪಟ್ಟು ಉದ್ಯಮಿಯೋ ಅಲೋಟ್ ಮಾಡಿ ಲಭಿಸಿದಾತನೋ ಸ್ಥಾಪಿಸಿದ ಯಾವುದಾದರೂ ಕೈಗಾರಿಕಾ ಯೂನಿಟ್ ಎಂದರ್ಥ.

ಟಿಪ್ಪಣಿ 2:—ಈ ಉಪ-ವಿಭಾಗದ ಅಗತ್ಯಕ್ಕಾಗಿ, ''ಉದ್ಯಮ'' ಎಂಬ ಪದಕ್ಕೆ ಕಾರ್ಪರೇಷನಿನ ಒಡೆತನದಲ್ಲಿರುವ ಭೂಮಿಯಲ್ಲಿ ಕಾರ್ಪರೇಷನ್‌ನೊಂದಿಗೆ ಒಪ್ಪಂದದಲ್ಲಿ ಏರ್ಪಟ್ಟು ಉದ್ಯಮಿಯೋ ಅಲೋಟ್ ಮಾಡಿ ಲಭಿಸಿದಾತನೋ ಸ್ಥಾಪಿಸಿರುವ ಕೈಗಾರಿಕಾ ಯೂನಿಟಿನ ಯಾವುದಾದರೂ ಕಟ್ಟಡವೋ ಪ್ಲಾಂಟ್ ಅಥವಾ ಯಂತ್ರಗಳೋ ಬೇರೆ ಯಾವುದಾದರೂ ಆಸ್ತಿಗಳೋ ಎಂದರ್ಥ.

3. 30ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 30ನೇ ವಿಭಾಗದಲ್ಲಿ,—

(i) (1)ನೇ ಉಪ-ವಿಭಾಗದಲ್ಲಿ ''ಆತನಿಗೆ ಅಪರಾಧ ನಿರ್ಣಯದ ಮೇರೆಗೆ ಹತ್ತು ಸಾವಿರ ರೂಪಾಯಿ ವರೆಗಿನ ಜುಲ್ಮಾನೆಯನ್ನು ನೀಡತಕ್ಕದ್ದು'' ಎಂಬ ಪದಗಳಿಗೆ ಬದಲು ''ಆತನು ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಹತ್ತುಸಾವಿರ ರೂಪಾಯಿಯಲ್ಲಿ ಕಡಿಮೆಯಾಗದ ಹಾಗೂ ಐವತ್ತು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಒಂದು ಜುಲ್ಮಾನೆಗೆ ಹೊಣೆಗಾರನಾಗಿರುತ್ತಾನೆ'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪ-ವಿಭಾಗದಲ್ಲಿ ''ಯಾವುದೇ ವ್ಯಕ್ತಿಗೂ ಐದು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ನೀಡತಕ್ಕದ್ದು'' ಎಂಬ ಪದಗಳಿಗೆ ಬದಲು ''ಯಾವುದೇ ವ್ಯಕ್ತಿಯೂ, ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಹತ್ತುಸಾವಿರ ರೂಪಾಯಿಯಲ್ಲಿ ಕಡಿಮೆಯಾಗದ ಹಾಗೂ ಐವತ್ತು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಒಂದು ಜುಲ್ಮಾನೆಗೆ ಹೊಣೆಗಾರನಾಗಿರುತ್ತಾನೆ'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

4. 42ನೇ ವಿಭಾಗದ ಬಿಟ್ಟುಬಿಡುವಿಕೆ.—ಪ್ರಧಾನ ಅಧಿನಿಯಮದ 42ನೇ ವಿಭಾಗವನ್ನು ಬಿಟ್ಟುಬಿಡತಕ್ಕದ್ದು.

5. 43ನೇ ವಿಭಾಗದ ಬಿಟ್ಟುಬಿಡುವಿಕೆ.—ಪ್ರಧಾನ ಅಧಿನಿಯಮದ 43ನೇ ವಿಭಾಗವನ್ನು ಬಿಟ್ಟುಬಿಡತಕ್ಕದ್ದು.

6. 45ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 45ನೇ ವಿಭಾಗದಲ್ಲಿ ''ವ್ಯಕ್ತಿಗೆ ಅಪರಾಧ ನಿರ್ಣಯಿಸಲ್ಪಡುವುದಾದರೆ ಮೂರು ತಿಂಗಳ ವರೆಗಿನ ಸರಳ ಕಾರಾವಾಸವೋ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೋ ಅಥವಾ ಎರಡೂ ಸೇರಿರುವ ಶಿಕ್ಷೆಯೋ ನೀಡಬಹುದಾಗಿದೆ'' ಎಂಬ ಪದಗಳಿಗೆ ಬದಲು ''ವ್ಯಕ್ತಿ ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಹತ್ತುಸಾವಿರ ರೂಪಾಯಿಯಲ್ಲಿ ಕಡಿಮೆಯಾಗದ ಹಾಗೂ ಐವತ್ತು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಒಂದು ಜುಲ್ಮಾನೆಗೆ ಹೊಣೆಗಾರನಾಗಿರುತ್ತಾನೆ'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

7. 46ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 46ನೇ ವಿಭಾಗದಲ್ಲಿ, ''ವ್ಯಕ್ತಿಗೆ ಅಪರಾಧ ನಿರ್ಣಯಿಸಲ್ಪಡುವುದಾದರೆ ಮೂರು ತಿಂಗಳ ವರೆಗೆ ವಿಸ್ತರಿಸಬಹುದಾದ ಕಾರಾವಾಸವೋ ಮೂರು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೋ ಅಥವಾ ಎರಡೂ ಸೇರಿರುವ ಶಿಕ್ಷೆಯೋ ನೀಡಬಹುದಾಗಿದೆ'' ಎಂಬ ಪದಗಳಿಗೆ ಮತ್ತು ಚಿಹ್ನೆಗಳಿಗೆ ಬದಲು ''ವ್ಯಕ್ತಿ ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಹತ್ತುಸಾವಿರ ರೂಪಾಯಿಯಲ್ಲಿ ಕಡಿಮೆಯಾಗದ ಮತ್ತು ಐವತ್ತು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಒಂದು ಜುಲ್ಮಾನೆಗೆ ಹೊಣೆಗಾರನಾಗಿರುತ್ತಾನೆ'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

8. 47ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ, 47ನೇ ವಿಭಾಗದಲ್ಲಿ ''ವ್ಯಕ್ತಿಗೆ, ಅಪರಾಧ ನಿರ್ಣಯಿಸಲ್ಪಡುವುದಾದರೆ, ಮೂರು ತಿಂಗಳು ವರೆಗೆ ವಿಸ್ತರಿಸಬಹುದಾದ ಸರಳ ಕಾರಾವಾಸವೋ ಐನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೋ ಅಥವಾ ಎರಡೂ ಸೇರಿರುವ ಶಿಕ್ಷೆಯೋ ನೀಡಬಹುದಾಗಿದೆ'' ಎಂಬ ಪದಗಳಿಗೆ ಮತ್ತು ಚಿಹ್ನೆಗಳಿಗೆ ಬದಲು ''ವ್ಯಕ್ತಿ, ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಹತ್ತುಸಾವಿರ ರೂಪಾಯಿಯಲ್ಲಿ ಕಡಿಮೆಯಾಗದ ಮತ್ತು ಐವತ್ತು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಒಂದು ಜುಲ್ಮಾನೆಗೆ ಹೊಣೆಗಾರನಾಗಿರುತ್ತಾನೆ'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

9. 48ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 48ನೇ ವಿಭಾಗದಲ್ಲಿ, ''ವ್ಯಕ್ತಿಗೆ, ಅಪರಾಧ ನಿರ್ಣಯಿಸಲ್ಪಡುವುದಾದರೆ ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ನೀಡಬಹುದಾಗಿದೆ'' ಎಂಬ ಪದಗಳಿಗೆ ಮತ್ತು ಚಿಹ್ನೆಗಳಿಗೆ ಬದಲು ''ವ್ಯಕ್ತಿ, ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಹತ್ತುಸಾವಿರ ರೂಪಾಯಿಯಲ್ಲಿ ಕಡಿಮೆಯಾಗದ ಮತ್ತು ಐವತ್ತು ಸಾವಿರ ರೂಪಾಯಿ ವರೆಗೆ ವಿಸ್ತರಿಸಬಹುದಾದ ಒಂದು ಜುಲ್ಮಾನೆಗೆ ಹೊಣೆಗಾರನಾಗಿರುತ್ತಾನೆ'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

10. 48ಎ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ, 48ನೇ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"48 ಎ. ದಂಡ ವಿಧಿಸಲು ಅಧಿಕಾರಿಗಳಿಗಿರುವ ಅಧಿಕಾರ.—(1) ಈ ಅಧಿನಿಯಮದ 30, 45, 46, 47, 48 ಎಂಬೀ ವಿಭಾಗಗಳ ಅಡಿಯಲ್ಲಿ ದಂಡ ವಿಧಿಸುವ ಉದ್ದೇಶಕ್ಕಾಗಿ ಸರಕಾರಕ್ಕೆ, ಗಜೆಟ್ ಅಧಿಸೂಚನೆಯ ಮುಖೇನ, ಕಾರ್ಪರೇಷನಿನ ಪ್ರಧಾನ ವ್ಯವಸ್ಥಾಪಕರ ಶ್ರೇಣಿಗಿಂತ ಕಡಿಮೆಯಿಲ್ಲದ ಒಂದು ಅಧಿಕಾರಿಯನ್ನು ನಿಯಮಿಸಬಹುದಾಗಿದ್ದು, ಅವರು, ನಿಗದಿಪಡಿಸಬಹುದಾದ ರೀತಿಯಲ್ಲಿ ಒಂದು ವಿಚಾರಣೆಯನ್ನು ನಡೆಸಿದ ನಂತರ, ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದ ಒಂದು ದಂಡವನ್ನು ವಿಧಿಸತಕ್ಕದ್ದು.

(2) (1)ನೇ ಉಪ-ವಿಭಾಗದ ಪ್ರಕಾರ ವಿಚಾರಣೆ ನಡೆಸುವಾಗ, ಅಧಿಕಾರಿಯು ವಿಷಯದ ವಾಸ್ತವಾಂಶಗಳೊಂದಿಗೆ ಮತ್ತು ಸನ್ನಿವೇಶಗಳೊಂದಿಗೆ ನೇರವಾಗಿ ಪರಿಚಯವಿರುವ ಯಾವುದೇ ವ್ಯಕ್ತಿಯನ್ನು ಸಾಕ್ಷ್ಯ ನೀಡುವುದಕ್ಕಾಗಿಯೋ ಅಧಿಕಾರಿಯ ಅಭಿಪ್ರಾಯದಲ್ಲಿ ವಿಚಾರಣೆಗೆ ಸಂಬಂಧಿಸಿದ ವಿಷಯಕ್ಕೆ ಪ್ರಯೋಜನಕಾರಿಯೋ ಉಪಯುಕ್ತವೋ ಆಗಬಹುದಾದ, ಯಾವುದಾದಲೂ ದಾಖಲೆಯನ್ನು ಹಾಜರು ಪಡಿಸುವುದಕ್ಕಾಗಿಯೋ ಕರೆಸುವುದಕ್ಕೂ ಹಾಜರಾಗಲು ಒತ್ತಾಯಿಸುವುದಕ್ಕೂ ಅಧಿಕಾರ ಇರುವುದಾಗಿದೆ ಮತ್ತು ಅಂತಹ ವಿಚಾರಣೆಯಲ್ಲಿ ಆತನು ಅಪರಾಧವನ್ನು ಎಸಗಿದ್ದಾನೆ ಎಂದು ಮನವರಿಕೆಯಾದಲ್ಲಿ, ಅವರು ಈ ಅಧಿನಿಯಮದಲ್ಲಿ ಉಪಬಂಧಿಸಿರುವ ಒಂದು ದಂಡವನ್ನು ವಿಧಿಸತಕ್ಕದ್ದು.

(3) (2)ನೇ ಉಪ-ವಿಭಾಗದ ಅಡಿಯಲ್ಲಿ ಅಧಿಕಾರಿಯು ಹೊರಡಿಸಿದ ಒಂದು ಆದೇಶದಲ್ಲಿ ಭಾದಿತನಾಗಿರುವ ಯಾವುದೇ ವ್ಯಕ್ತಿಗೂ, ಅಂತಹ ಆದೇಶವನ್ನು ಆತನನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಾರ್ಪರೇಷನಿನ ವ್ಯವಸ್ಥಾಪಕ ನಿರ್ದೇಶಕರಾಗಿರುವ ಮೇಲ್ಮನವಿ ಪ್ರಾಧಿಕಾರದ ಮುಂದೆ, ನಿಗದಿಪಡಿಸಬಹುದಾದ ಅಂತಹ ನಮೂನೆಯಲ್ಲೂ ಮತ್ತು ಅಂತಹ ರೀತಿಯಲ್ಲೂ ಅಂತಹ ಶುಲ್ಕದೊಂದಿಗೆಯೂ ಒಂದು ಮೇಲ್ಮನವಿಯನ್ನು ಸಲ್ಲಿಸಬಹುದಾಗಿದೆ.

ಆದರೆ, ಸಕಾಲದಲ್ಲಿ ಮೇಲ್ಮನವಿ ನೀಡುವುದರಲ್ಲಿಂದ ಸಾಕಷ್ಟು ಕಾರಣದಿಂದಾಗಿ ಮೇಲ್ಮನವಿದಾರ ತಡೆಯಲ್ಪಟ್ಟಿರುವನೆಂದು ಮೇಲ್ಮನವಿ ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ, ನಿಶ್ಚಿತ ಸಮಯವಾದ ಮೂವತ್ತು ದಿನಗಳ ಅವಧಿ ಮುಗಿದ ನಂತರವೂ ಸಲ್ಲಿಸುವ ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರಕ್ಕೆ ಪರಿಗಣಿಸಬಹುದಾಗಿದೆ.

(4) ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಪಕ್ಷಗಳನ್ನು ಕೇಳುವುದಕ್ಕಿರುವ ಅವಕಾಶವನ್ನು ನೀಡಿದ ನಂತರ, ಮೇಲ್ಮನವಿ ಸ್ವೀಕರಿಸಿದ ದಿನಾಂಕದಿಂದ ಅರುವತ್ತು ದಿನಗಳೊಳಗೆ, ಯಾವ ಆದೇಶಕ್ಕೆದುರಾಗಿದೆಯೋ ಮೇಲ್ಮನವಿ ಸಲ್ಲಿಸಿರುವುದು ಆ ಆದೇಶವನ್ನು ದೃಢೀಕರಿಸುವುದೋ ಮಾರ್ಪಡಿಸುವುದೋ ರದ್ದುಗೊಳಿಸುವುದೋ ಮಾಡುವುದು ಸೂಕ್ತವಾದುದೆಂದು ಅವರು ಭಾವಿಸುವ ಅಂತಹ ಆದೇಶವನ್ನು ಅಂಗೀಕರಿಸಬಹುದಾಗಿದೆ.".

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 41/ಲೆಗ್. ಸಿ3/2022/ಕಾನೂನು. 2024 ಜುಲೈ, 18

ತಿರುವನಂತಪುರಂ, *1199 ಕರ್ಕಾಟಕ 3/*
1946 ಆಷಾಢ 27.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 5ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2024ರ 16ನೇ ಅಧಿನಿಯಮ

2022ರ ಕೇರಳ ಗೇರುಬೀಜ ಕಾರ್ಖಾನೆಗಳ (ಆರ್ಜನೆ) ತಿದ್ದುಪಡಿ ಅಧಿನಿಯಮ

1974ರ ಕೇರಳ ಗೇರುಬೀಜ ಕಾರ್ಖಾನೆಗಳ (ಆರ್ಜನೆ) ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ—1974ರ ಗೇರುಬೀಜ ಕಾರ್ಖಾನೆಗಳ (ಆರ್ಜನೆ) ಅಧಿನಿಯಮ (1974ರ 29ನೇ ಅಧಿನಿಯಮ)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತಮೂರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2022ರ ಕೇರಳ ಗೇರುಬೀಜ ಕಾರ್ಖಾನೆಗಳ (ಆರ್ಜನೆ) ತಿದ್ದುಪಡಿ ಅಧಿನಿಯಮವೆಂದು ಕರೆಯಬಹುದು.

(2) ಇದು 2009 ಆಗಸ್ಟ್ 1ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಅನುಸೂಚಿಯ ತಿದ್ದುಪಡಿ.—1974ರ ಕೇರಳ ಗೇರುಬೀಜ ಕಾರ್ಖಾನೆಗಳ (ಆರ್ಜನೆ) ಅಧಿನಿಯಮದ ಅನುಸೂಚಿ IIರ ಕ್ರಮನಂಬ್ರ 14ರಲ್ಲಿ,—

This is a digitally signed Gazette.
Authenticity may be verified through https://compose.kerala.gov.in/

2

(i) ಕಾಲಂ ನಂಬ್ರ 3ರಲ್ಲಿ ''13-3-1974 ರಂದು ಗುತ್ತಿಗೆಗೆ ಪಡೆದಿರುವುದು'' ಎಂಬ ಅಂಕೆಗಳ, ಚಿಹ್ನೆಗಳ ಮತ್ತು ಪದಗಳ ಬದಲು ''13-3-1974 ರಂದು ಮತ್ತು 1-2-1975 ರಂದು ಗುತ್ತಿಗೆಗೆ ಪಡೆದಿರುವುದು'' ಎಂಬ ಅಂಕೆಗಳನ್ನು, ಚಿಹ್ನೆಗಳನ್ನು ಮತ್ತು ಪದಗಳನ್ನು ಸೇರಿಸತಕ್ಕದ್ದು;

(ii) ಕಾಲಂ ನಂಬ್ರ 4ರಲ್ಲಿ ''ಎಂ/ಎಸ್. ರಾಂಸನ್ಸ್ & ಕಂಪನಿ, ಕೊಲ್ಲಂ-4'' ಎಂಬ ಪದಗಳ, ಚಿಹ್ನೆಗಳ ಮತ್ತು ಅಂಕೆಯ ನಂತರ, ''ಮತ್ತು ಶ್ರೀಮತಿ ಡಿ. ಸುಮತಿ, W/o ಶಿವದಾಸನ್, ಶ್ರೀಮತಿ ರಾಜಶ್ರೀ ಶಿವದಾಸನ್, D/o ಶಿವದಾಸನ್ ಮತ್ತು ಶ್ರೀಮತಿ ಜಯಶ್ರೀ ಶಿವದಾಸನ್ D/o ಶಿವದಾಸನ್, ಜಯಂತಿ ಹೌಸ್, ನಡಕ್ಕಾವ್, ಕಚ್ಚೇರಿ, ಕೋಝಿಕ್ಕೋಡ್'' ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಬಿ) ಇಲಾಖೆ

ಅಧಿಸೂಚನೆ

ನಂಬ್ರ 32/ಲೆಗ್. ಬಿ2/2024/ಕಾನೂನು. ತಿರುವನಂತಪುರಂ, *2024 ಜುಲೈ 26, 1199 ಕರ್ಕಟಕ 11/ 1946 ಶ್ರಾವಣ 4.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 25ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 17ನೇ ಅಧಿನಿಯಮ

2024ರ ಕೇರಳ ಕಂದಾಯ ವಸೂಲಿ (ತಿದ್ದುಪಡಿ) ಅಧಿನಿಯಮ

1968ರ ಕೇರಳ ಕಂದಾಯ ವಸೂಲಿ ಅಧಿನಿಯಮವನ್ನು ಮತ್ತಷ್ಟೂ ತಿದ್ದುಪಡಿಮಾಡುವುದಕ್ಕಿರುವ
ಒಂದು
ಅಧಿನಿಯಮ

ಪೀಠಿಕೆ.—1968ರ ಕೇರಳ ಕಂದಾಯ ವಸೂಲಿ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟೂ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತ ಐದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕಂದಾಯ ವಸೂಲಿ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 2ನೇ ವಿಭಾಗದ ತಿದ್ದುಪಡಿ.—1968ರ ಕೇರಳ ಕಂದಾಯ ವಸೂಲಿ ಅಧಿನಿಯಮ (1968ರ 15) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದಲ್ಲಿ,—

(i) (ಬ) ಖಂಡದ ನಂತರ, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬಎ) "ಬೋಟ್-ಇನ್-ಲ್ಯಾಂಡ್ ಅಂದರೆ ಈ ಅಧಿನಿಯಮದ 50ನೇ ವಿಭಾಗದ (2)ನೇ ಉಪ-ವಿಭಾಗದ ಕೆಳಗೆ ಸರಕಾರಕ್ಕೋ ಸಂಸ್ಥೆಗಳಿಗೋ ಬೇಕಾಗಿ ಖರೀದಿಸಿದ ಯಾವುದಾದರೂ ಸ್ಥಿರ ಆಸ್ತಿ ಎಂದರ್ಥ ಮತ್ತು ಅದರಲ್ಲಿ ಅವು ಒಳಗೊಳ್ಳುವುದು;

This is a digitally signed Gazette.
Authenticity may be verified through https://compose.kerala.gov.in/

2

(ಬಬ) ''ಸಂಗ್ರಹಣಾ ಚಾರ್ಜುಗಳು'' ಅಂದರೆ ಈ ಅಧಿನಿಯಮದ ಉಪಬಂಧಗಳ ಕೆಳಗೆ ಬಾಕಿಯಾದ ಮೊತ್ತಗಳನ್ನು ವಸೂಲಿ ಮಾಡುವುದಕ್ಕಾಗಿ, ಸರಕಾರ ನಿಗದಿಪಡಿಸಿದ ಅಂತಹ ದರದಲ್ಲಿ, ಲೋಪಬರಿಸಿದವನು ಸರಕಾರಕ್ಕೆ ಪಾವತಿಸಬೇಕಾದ ಯಾವುದಾದರೂ ಮೊತ್ತ ಎಂದರ್ಥ ಮತ್ತು ಅದರಲ್ಲಿ ಅವು ಒಳಗೊಳ್ಳುವುದು;'';

(ii) (ಡಿ) ಖಂಡದ ಐಟಿಮ್ (ii)ರಲ್ಲಿ ''ಉಂಟಾಗುವ ಖರ್ಚುಗಳು'' ಎಂಬ ಪದಗಳ ನಂತರ ''ನೋಟೀಸಿನ ಸೇವೆಗಿರುವ ಅಂಚೆವೆಚ್ಚ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) (ಎಫ್) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(ಎಫ್ಎ) ''ಇ-ಹರಾಜು'' ಅಂದರೆ ಆನ್ ಲೈನ್ ಮೋಡ್ ಮುಖೇನ ನಡೆಸುವ ಹರಾಜು ಎಂದರ್ಥ;'';

(iv) (ಐ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(ಐಎ) ''ಪ್ರೋಸೆಸಿಂಗ್ ಚಾರ್ಜ್'' ಅಂದರೆ ಕಂದಾಯ ವಸೂಲಿ ವ್ಯವಹರಣೆಗಳನ್ನು ಆರಂಭಿಸಿದ ನಂತರ ಕೋರಿಕೆ ಪ್ರಾಧಿಕಾರವು ನೇರವಾಗಿ ಬಾಕಿ ವಸೂಲಿ ಮಾಡುವ ವಿಷಯಗಳಲ್ಲಿ, ಇದಕ್ಕಾಗಿ ಸರಕಾರ ನಿಗದಿಪಡಿಸಬಹುದಾದ ಅಂತಹ ದರದಲ್ಲಿ, ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚನೆ ಮಾಡಿದ ಒಂದು ಸಂಸ್ಥೆ ಸರಕಾರಕ್ಕೆ ಪಾವತಿಸಬೇಕಾದ ಮೊತ್ತ ಎಂದರ್ಥ;'';

3. 6ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 6ನೇ ವಿಭಾಗದಲ್ಲಿ,—

(i) ''ಹನ್ನೆರಡು ಶೇಕಡಾ'' ಎಂಬ ಪದಗಳಿಗೆ ಬದಲು ''ಒಂಭತ್ತು ಶೇಕಡಾ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಅಸ್ತಿತ್ವದಲ್ಲಿರುವ ಉಪಬಂಧದ ನಂತರ, ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಆದರೆ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚನೆ ಮಾಡಲ್ಪಟ್ಟ ಸಂಸ್ಥೆಯ ಮನವಿಯ ಮೇಲೆ ವಸೂಲಿ ಕ್ರಮಗಳನ್ನು ಆರಂಭಿಸುವ ವಿಷಯಗಳಲ್ಲಿ, ಲೋಪಮಾಡಿದವನ ಮತ್ತು ಸಂಸ್ಥೆಯ ನಡುವೆ ಯಾವುದಾದರೂ ಒಪ್ಪಂದದಲ್ಲಿ ಏರ್ಪಟ್ಟಿರುವಲ್ಲಿ, ಅಂತಹ ಬಡ್ಡಿದರವು ಒಪ್ಪಂದದಲ್ಲಿರುವ ಬಡ್ಡಿ ದರವನ್ನು ಮೀರತಕ್ಕದ್ದಲ್ಲ.''.

4. 12ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 12ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ,—

(i) ''ಬಹಿರಂಗ ಹರಾಜಿನಲ್ಲಿ ಮಾರಬಹುದಾಗಿದೆ'' ಎಂಬ ಪದಗಳಿಗೆ ಮುಂದೆ, ''ಇ-ಹರಾಜು ಸೇರಿದಂತೆ'' ಎಂಬ ಪದಗಳನ್ನೂ ಚಿಹ್ನೆಯನ್ನೂ ಸೇರಿಸತಕ್ಕದ್ದು;

(ii) ''ಆಸ್ತಿಗೆ ಸಂಬಂಧಿಸಿದ ಪಟ್ಟಿಯ ಅಥವಾ ವಿವರಣ ಪಟ್ಟಿಯ ಒಂದು ಪ್ರತಿಯೂ, ನೋಟೀಸಿನ ಒಂದು ಪ್ರತಿಯೂ ಕೂಡ ಪ್ರಕಟಿಸತಕ್ಕದ್ದು'' ಎಂಬ ಪದಗಳಿಗೆ ಬದಲು, ''ಆಸ್ತಿಗೆ ಸಂಬಂಧಿಸಿದ ಪಟ್ಟಿಯ ಅಥವಾ ವಿವರಣ ಪಟ್ಟಿಯ ಪ್ರತಿಯೂ ನೋಟೀಸಿನ ಪ್ರತಿಯೂ ಕೂಡಾ ಮುಟ್ಟುಗೋಲೋ ಮಾರಾಟವೋ ನಡೆಯುವ ಪ್ರದೇಶದಲ್ಲಿ ಅಥವಾ ಎರಡೂ ಕಡೆಗಳಲ್ಲೂ ಸಂಬಂಧಪಟ್ಟ ಜಿಲ್ಲಾ ಆಡಳಿತ ವೆಬ್‌ಸೈಟಿನಲ್ಲೂ ಪ್ರಕಟಿಸತಕ್ಕದ್ದು'' ಎಂಬ ವಾಕ್ಯವನ್ನು ಸೇರಿಸತಕ್ಕದ್ದು.

5. 36ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 36ನೇ ವಿಭಾಗದಲ್ಲಿ (2)ನೇ ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(3) ಸ್ಥಿರ ಆಸ್ತಿಯ ನ್ಯಾಯಬೆಲೆಯ ಮತ್ತು ಅದರಲ್ಲಿನ ಅಭಿವೃದ್ಧಿ ಬೆಲೆಯ ಒಟ್ಟು ಮೊತ್ತ ಬಾಕಿ ಮೊತ್ತಕ್ಕಿಂತ ಹೆಚ್ಚುವುದೆಂದು ಕಾಣುವಲ್ಲಿ ಲೋಪಬರಿಸಿದವನಿಗೆ ಮುಟ್ಟುಗೋಲು ಹಾಕುವ ಸ್ಥಿರ ಆಸ್ತಿಯ ಒಂದು ಭಾಗದಲ್ಲಿ ಮಾತ್ರವಾಗಿ ಮುಟ್ಟುಗೋಲು ಪರಿಮಿತಿಗೊಳಿಸಬೇಕೆಂದು ಜಿಲ್ಲಾಧಿಕಾರಿಯಲ್ಲಿ ಕೋರಬಹುದಾಗಿದೆ. ಅಂತಹ ಕೋರಿಕೆ ಲಭಿಸುವಾಗ ಆಸ್ತಿಯ ಅಂತಹ ಭಾಗದ ಮಾರಾಟದ ಮೂಲಕ ಬಾಕಿ ವಸೂಲಿ ಮಾಡಲು ಸಾಧ್ಯವಾಗುವುದೆಂದು ಜಿಲ್ಲಾ ಅಧಿಕಾರಿಗೆ ತೃಪ್ತಿ ಬರುವಲ್ಲಿ, ಅಂತಹ ಆಸ್ತಿಯ ಒಂದು ಭಾಗದಲ್ಲಿ ಮಾತ್ರವಾಗಿ ಅವರಿಗೆ ಮುಟ್ಟುಗೋಲು ಪರಿಮಿತಿಗೊಳಿಸಬಹುದು.

ವಿವರಣೆ.—ಈ ಉಪ-ವಿಭಾಗದ ಉದ್ದೇಶಕ್ಕಾಗಿ, ನ್ಯಾಯಬೆಲೆ ಅಂದರೆ 1959ರ ಕೇರಳ ಮುದ್ರಾಂಕ ಅಧಿನಿಯಮದ (1959ರ 17) ಕೆಳಗೆ ನಿರ್ಧರಿಸಿದ ನ್ಯಾಯಬೆಲೆ ಎಂದರ್ಥ.''.

This is a digitally signed Gazette.
Authenticity may be verified through https://compose.kerala.gov.in/

3

6. 44ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 44ನೇ ವಿಭಾಗದ (3)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಲೂ, ಲೋಪಬರಿಸಿದವನು ಮತ್ತು ಆಸ್ತಿ ಖರೀದಿಸುವ ವ್ಯಕ್ತಿಯೂ ಸಂಯುಕ್ತವಾಗಿ ಸಲ್ಲಿಸುವ ಕೋರಿಕೆಯಲ್ಲಿ ಜಿಲ್ಲಾ ಅಧಿಕಾರಿಯಿಂದ ಅನುಮತಿ ಲಭಿಸಿದ ನಂತರ, ಮುಟ್ಟುಗೋಲು ಹಾಕಿದ ಸ್ಥಿರ ಆಸ್ತಿ ಪೂರ್ತಿಯಾಗಿ ಅಥವಾ ಭಾಗಶಃ ಮಾರುವುದಕ್ಕಿರುವ ಒಪ್ಪಂದ ಉಂಟುಮಾಡಲು ಲೋಪಬರಿಸಿದವನನ್ನು ಅನುಮತಿಸಬಹುದಾಗಿದೆ. ಖರೀದಿಸುವ ವ್ಯಕ್ತಿಯು ಕ್ರಯಪತ್ರದಲ್ಲಿ ಏರ್ಪಡುವ ಮೊದಲು, ಪ್ರಸ್ತುತ ಒಪ್ಪಂದದ ಪ್ರಕಾರವಿರುವ ಮಾರಾಟದ ಯುಕ್ತ ಪ್ರತಿಫಲದಿಂದ ಬಡ್ಡಿ ಸಹಿತವಿರುವ ತೆರಿಗೆ ಬಾಕಿಯನ್ನು ಇತರ ಚಾರ್ಜುಗಳನ್ನು ವಿಲ್ಲೇಜ್ ಆಫೀಸಿನಲ್ಲಿಯೋ ಟ್ರಜರಿಯಲ್ಲಿಯೋ ಚಲನ್ ಮುಖಾಂತರ ಪಾವತಿಸತಕ್ಕದ್ದು ಮತ್ತು ಅಸಲು ರಸೀದಿ ಜಿಲ್ಲಾ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.".

7. 49ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 49ನೇ ವಿಭಾಗದಲ್ಲಿ,—

(i) (1)ನೇ ಐಟಂನಲ್ಲಿ "ಬಹಿರಂಗ ಹರಾಜಿನಲ್ಲಿ" ಎಂಬ ಪದಗಳಿಗೆ ಮೊದಲು, "ಇ-ಹರಾಜು ಸೇರಿದಂತೆ" ಎಂಬ ಪದಗಳನ್ನು ಚಿಹ್ನೆಯನ್ನು ಸೇರಿಸತಕ್ಕದ್ದು;

(ii) (2)ನೇ ಐಟಮ್‌ನಲ್ಲಿ (iv)ನೇ ಉಪ ಐಟಮ್‌ನಲ್ಲಿ "ನೋಟೀಸನ್ನು, ಮಾರಾಟ ದಿನಾಂಕದ ಮೂವತ್ತು ದಿನ ಮುಂದೆಯಾದರೂ ಕ್ರಮಬದ್ಧವಾಗಿ ಜಾರಿಗೊಳಿಸಿ ಪ್ರಕಟಿಸತಕ್ಕದ್ದು" ಎಂಬ ವಾಕ್ಯದ ಬದಲು, "ನೋಟೀಸನ್ನು, ಮಾರಾಟ ದಿನಾಂಕದ ಮೂವತ್ತು ದಿನ ಮುಂದೆಯಾದರೂ ಕ್ರಮಬದ್ಧವಾಗಿ ಜಾರಿಗೊಳಿಸಿ ಪ್ರಕಟಿಸತಕ್ಕದ್ದು ಹಾಗೂ ಮುಟ್ಟುಗೋಲೋ ಮಾರಾಟವೋ ನಡೆಯುವ ಪ್ರದೇಶದಲ್ಲಿಯೂ ಅಥವಾ ಎರಡೂ ಕಡೆಯಲ್ಲಿಯೂ ಪ್ರಚಾರದಲ್ಲಿರುವ ಪತ್ರಿಕೆಯಲ್ಲಿಯೂ ಸಂಬಂಧಪಟ್ಟ ಜಿಲ್ಲಾ ಆಡಳಿತ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸತಕ್ಕದ್ದು" ಎಂಬ ವಾಕ್ಯವನ್ನು ಸೇರಿಸತಕ್ಕದ್ದು.

8. 50ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 50ನೇ ವಿಭಾಗದಲ್ಲಿ,—

(1) ಪಾರ್ಶ್ವ ಶೀರ್ಷಿಕೆಯ ಬದಲು ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚನೆ ಮಾಡಲ್ಪಟ್ಟ ಸಂಸ್ಥೆಗೋ ಬೇಕಾಗಿ ಹರಾಜಿನ ಆಹ್ವಾನ".

(2) (2)ನೇ ಉಪ-ವಿಭಾಗದಲ್ಲಿ,—

(ಎ) (i)ನೇ ಐಟಿಮ್‌ನಲ್ಲಿ "ಸರಕಾರಕ್ಕೆ ಬೇಕಾಗಿ ಆ ವಸ್ತು ಹತ್ತು ಪೈಸೆಗೆ" ಎಂಬ ಪದಗಳಿಗೆ ಬದಲು "ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗೋ ಬೇಕಾಗಿ ಆ ವಸ್ತು ಒಂದು ರೂಪಾಯಿಗೆ" ಎಂಬ ಪದಗಳನ್ನು ಅಂಕೆಯನ್ನು ಹಾಗೂ ಚಿಹ್ನೆಯನ್ನು ಸೇರಿಸತಕ್ಕದ್ದು;

(ಬ) (ii)ನೇ ಐಟಿಮ್‌ನಲ್ಲಿ,—

(i) "ಸರಕಾರಕ್ಕೆ ಬೇಕಾಗಿ ಹಾಗೆ ಇರುವ ಹರಾಜು ಮೊತ್ತಕ್ಕಿಂತ ಹತ್ತು ಪೈಸೆ" ಎಂಬ ಪದಗಳ ಮತ್ತು ಚಿಹ್ನೆಯ ಬದಲು, "ಆಯಾ ವಿಷಯಗಳಂತೆ, ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗೋ ಬೇಕಾಗಿ ಹಾಗೆ ಇರುವ ಹರಾಜು ಮೊತ್ತಕ್ಕಿಂತ ಒಂದು ರೂಪಾಯಿ" ಎಂಬ ಪದಗಳನ್ನು ಚಿಹ್ನೆಗಳನ್ನು ಅಂಕೆಯನ್ನು ಸೇರಿಸತಕ್ಕದ್ದು;

(ii) "ಸರಕಾರ" ಎಂಬ ಪದದ ನಂತರ, "ಅಥವಾ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆ" ಎಂಬ ಪದಗಳನ್ನು ಹಾಗೂ ಅಂಕೆಯನ್ನು ಸೇರಿಸತಕ್ಕದ್ದು.

(3) (3)ನೇ ಉಪ-ವಿಭಾಗದಲ್ಲಿ, "ಸರಕಾರಕ್ಕೆ ಬೇಕಾಗಿ" ಎಂಬ ಪದಗಳಿಗೆ ಬದಲು, "ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗೋ ಬೇಕಾಗಿ" ಎಂಬ ಪದಗಳನ್ನು ಚಿಹ್ನೆಯನ್ನು ಅಂಕೆಯನ್ನು ಸೇರಿಸತಕ್ಕದ್ದು;

(4) (4)ನೇ ಉಪ-ವಿಭಾಗದಲ್ಲಿ,—

(ಎ) "ಸರಕಾರಕ್ಕೆ ಬೇಕಾಗಿ" ಎಂಬ ಪದಗಳ ಬದಲು, "ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗೋ ಬೇಕಾಗಿ" ಎಂಬ ಪದಗಳನ್ನು ಅಂಕೆಯನ್ನು ಚಿಹ್ನೆಯನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

4

(ಬ) ''ಆಸ್ತಿ ಸ್ವಾಧೀನಪಡಿಸತಕ್ಕದ್ದು'' ಎಂಬ ಪದಗಳ ಬದಲು, ''ಆಸ್ತಿ ಸ್ವಾಧೀನಪಡಿಸತಕ್ಕದ್ದು ಮತ್ತು ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗೆ ಬೇಕಾಗಿಯಾಗಿದೆ ಈ ವಿಭಾಗದ ಕೆಳಗೆ ಆಸ್ತಿ ಖರೀದಿಸಿದುದೆಂದರೆ, ಆಯಾಯ ವಿಷಯಗಳಂತೆ, ಸಂಗ್ರಹಣಾ ಚಾರ್ಜುಗಳೋ, ಪ್ರೋಸೆಸಿಂಗ್ ಚಾರ್ಜೋ, ಅಂತಹ ಸಂಸ್ಥೆಯಿಂದ ವಸೂಲಿಮಾಡಿದ ನಂತರ ಆಸ್ತೀಯ ಸ್ವಾಧೀನ ಹಕ್ಕನ್ನು ಆ ಸಂಸ್ಥೆಗೆ ಹಸ್ತಾಂತರಿಸತಕ್ಕದ್ದು ಮತ್ತು ಕಂದಾಯ ದಾಖಲೆಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡತಕ್ಕದ್ದು'' ಎಂಬ ಪದಗಳನ್ನು ಅಂಕೆಯನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

(5) (4)ನೇ ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(5) ಒಂದು ಆಸ್ತಿ ಬೋಟ್-ಇನ್-ಲ್ಯಾಂಡ್ ಆಗಿ ಖರೀದಿಸುವಾಗ, ಕಂದಾಯ ದಾಖಲೆಗಳಲ್ಲಿ ಅಗತ್ಯವಾದ ಬದಲಾವಣೆಗಳನ್ನು ಮಾಡತಕ್ಕದ್ದು, ಮತ್ತು ಅದನ್ನು ನಿಗದಿಪಡಿಸಿದ ಫಾರಂನಲ್ಲಿ ಲೋಪಬರಿಸಿದವನನ್ನು ಮತ್ತು ಸಂಬಂಧಪಟ್ಟ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿಯೂ ತಿಳಿಸತಕ್ಕದ್ದು.

(6) ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಯಾವುದಾದರೂ ಸಂಸ್ಥೆಗೆ ಬೇಕಾಗಿ ಒಂದು ಸ್ಥಿರ ಆಸ್ತಿ ಖರೀದಿಸುವಾಗ, 2013ರ ರೈಟು ಟು ಫೇರ್ ಕೋಂಪನ್ಸೇಶನ್ ಆಂಡ್ ಟ್ರಾನ್ಸ್‌ಪರೆನ್ಸಿ ಇನ್‌ಲ್ಯಾಂಡ್ ಅಕ್ವಿಷಿಶನ್, ರಿಹಾಬಿಲಿಟೇಶನ್ ಆಂಡ್ ರಿಸೆಟ್ಟಲ್‌ಮೆಂಟ್ ಅಧಿನಿಯಮದ (2013ರ 30ನೇ ಕೇಂದ್ರ ಅಧಿನಿಯಮ) 26ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ (ಬ) ಖಂಡದ ಮತ್ತು 27ನೇ ವಿಭಾಗದ ಉಪಬಂಧಕ್ಕೆ ಅನುಸಾರವಾಗಿ ಜಿಲ್ಲಾ ಅಧಿಕಾರಿಯು ಆಸ್ತಿಯ ಬೆಲೆ ಲೆಕ್ಕಹಾಕತಕ್ಕದ್ದು. ಆ ರೀತಿ ಲೆಕ್ಕಹಾಕುವ ಬೆಲೆ ಬಾಕಿಯೂ ಅದಕ್ಕಿರುವ ಬಡ್ಡಿಯೂ ಇತರ ಚಾರ್ಜುಗಳು ತೀರಿಸಲು ಪರ್ಯಾಪ್ತವಲ್ಲದಿದ್ದಲ್ಲಿ ಅದು ಆ ರೀತಿಯಿರುವ ಬಾಕಿಯಿಂದ ಕಡಿಮೆಗೊಳಿಸತಕ್ಕದ್ದು. ಕಡಿಮೆಯಾಗಿರುವ ಮೊತ್ತ ಬಾಕಿಯಾಗಿ ಮುಂದುವರಿಯುವುದು, ಆ ರೀತಿ ಲೆಕ್ಕ ಹಾಕುವ ಮೊತ್ತ ಬಾಕಿಗಿಂತ ಹೆಚ್ಚಾಗುವಲ್ಲಿ ಬಾಕಿಯನ್ನು ಮುಗಿಸಿದ ನಂತರ ಉಳಿದ ಮೊತ್ತ ಲೋಪಬರಿಸಿದವನಿಗೆ, ನಿಗದಿಪಡಿಸಲಾದ ಅಂತಹ ರೀತಿಯಲ್ಲಿ ಕೊಡತಕ್ಕದ್ದು.'';

9. 50ಎ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 50ನೇ ವಿಭಾಗದ ನಂತರ, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''50 ಎ. ಬೋಟ್-ಇನ್-ಲ್ಯಾಂಡ್ ಮರಳಿ ವಹಿಸಿಕೊಡುವಿಕೆ.—(1) ಮಾರಾಟ ಸ್ಥಿರೀಕರಿಸಿದ ದಿನಾಂಕದಿಂದ ಐದು ವರ್ಷದೊಳಗೆ, ಬೋಟ್-ಇನ್-ಲ್ಯಾಂಡ್ ಮರಳಿ ಕೊಡಲು ಲೋಪಬರಿಸಿದವನು ಅರ್ಜಿ ಸಲ್ಲಿಸುವಲ್ಲಿ, ಜಿಲ್ಲಾ ಅಧಿಕಾರಿಯ ಅನುಮತಿಯೊಂದಿಗೆ, ಅರ್ಜಿ ಸಲ್ಲಿಸಿದ ದಿನಾಂಕದ ವರೆಗಿನ ಪ್ರೋಸೆಸಿಂಗ್ ಚಾರ್ಜು ಹಾಗೂ ಬಡ್ಡಿ ಸಹಿತ ಸಂಪೂರ್ಣ ಕಂದಾಯ ಬಾಕಿಯೂ ಸಂದಾಯಮಾಡಿದ ನಂತರ ಜಿಲ್ಲಾಧಿಕಾರಿಯು, ಆ ರೀತಿ ಹಣ ಸಂದಾಯ ಮಾಡಿದುದರ ಅಸಲು ರಸೀದಿ ಅಥವಾ ಟ್ರಜರಿ ಚಲನ್ ಸ್ವೀಕರಿಸಿ ಬಾಕಿ ಪೂರ್ತಿಯಾಗಿ ವಸೂಲಿ ಮಾಡಲ್ಪಟ್ಟಿದೆ ಎಂದು ಖಚಿತ ಪಡಿಸಿದ ನಂತರ, ಆ ರೀತಿಯಿರುವ ಬೋಟ್-ಇನ್-ಲ್ಯಾಂಡ್ ಲೋಪ ಬರಿಸಿದವನಿಗೆ ಮರಳಿ ನೀಡಲು ಆಜ್ಞೆ ನೀಡತಕ್ಕದ್ದು. ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗೆ ಬೇಕಾಗಿಯಾಗಿದೆ ಆಸ್ತಿ ಬೋಟ್-ಇನ್-ಲ್ಯಾಂಡ್ ಆಗಿ ಖರೀದಿಸಿದ ವಿಷಯಗಳಲ್ಲಿ ಮಾರಾಟ ಸ್ಥಿರೀಕರಿಸಿದ ದಿನಾಂಕದಿಂದ ಐದು ವರ್ಷ ಕಾಲಾವಧಿಯೊಳಗೆ, ಲೋಪ ಬರಿಸಿದವನು ಬೋಟ್-ಇನ್-ಲ್ಯಾಂಡ್ ಮರಳಿ ಕೊಡುವುದಕ್ಕೆ ಅರ್ಜಿಸಲ್ಲಿಸಿದರೆ ಜಿಲ್ಲಾ ಅಧಿಕಾರಿಯ ಅನುಮತಿಯೊಂದಿಗೆ ಅರ್ಜಿಸಲ್ಲಿಸುವ ದಿನಾಂಕದವರೆಗಿನ ಸಂಪೂರ್ಣ ಕಂದಾಯ ಬಾಕಿಯೂ ಬಡ್ಡಿಯೂ ಪ್ರೋಸೆಸಿಂಗ್ ಚಾರ್ಜು ಸಹಿತ ಸಂದಾಯಮಾಡಿದ ನಂತರ ಸಂಬಂಧಪಟ್ಟ ಸಂಸ್ಥೆಗೆ ತೃಪ್ತಿಬರುವಲ್ಲಿ, ಬೋಟ್-ಇನ್-ಲ್ಯಾಂಡ್ ಲೋಪ ಬರಿಸಿದವನಿಗೆ ಮರಳಿ ಕೊಡಬಹುದಾಗಿದೆ.

(2) ಬೋಟ್-ಇನ್-ಲ್ಯಾಂಡ್‌ನ ಅಂತಹ ಮಾರಾಟ ಸ್ಥಿರೀಕರಿಸಿದ ದಿನಾಂಕದಿಂದ ಐದು ವರ್ಷದ ನಂತರ ಅದು ಮರಳಿ ಕೊಡುವುದಕ್ಕಿರುವ ಯಾವುದೇ ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

(3) ಸರಕಾರವೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಯೋ ಪ್ರಸ್ತುತ ಐದು ವರ್ಷ ಕಾಲಾವಧಿಗೆ ಆಸ್ತಿ ಹಸ್ತಾಂತರಿಸುವುದೋ ಸಾರ್ವಜನಿಕ ಅಗತ್ಯಗಳಿಗಾಗಿ ಆಸ್ತಿಯನ್ನು ಮೀಸಲು ಇರಿಸುವುದೋ ಮಾಡತಕ್ಕದ್ದಲ್ಲ. ಅಂತಹ ಕಾಲಾವಧಿಯಲ್ಲಿ ಆಸ್ತಿಯಲ್ಲಿ ಯಾವುದೇ ಬದಲಾವಣೆಯನ್ನು ಉಂಟುಮಾಡತಕ್ಕದ್ದಲ್ಲ.

ವಿವರಣೆ.—ಈ ವಿಭಾಗದ ಅಗತ್ಯಗಳಿಗಾಗಿ, ಲೋಪ ಬರಿಸಿದವನು ಎಂಬುವುದರಲ್ಲಿ ಕಾನೂನುಬದ್ಧ ವಾರಸುದಾರರೂ ಒಳಗೊಳ್ಳುವುದಾಗಿದೆ.

10. 54ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 54ನೇ ವಿಭಾಗದ ಷರತ್ತಿನಲ್ಲಿ, ''ಜಿಲ್ಲಾಧಿಕಾರಿಗೆ ಕಾರಣವಿರುವುದಾದರೆ ಅವರಿಗೆ'' ಎಂಬ ಪದಗಳ ಬದಲು ''ಜಿಲ್ಲಾಧಿಕಾರಿಗೆ ಕಾರಣವಿರುವುದಾದರೆ ಅವರಿಗೆ, ಕೇಳುವುದಕ್ಕಿರುವ ನ್ಯಾಯವಾದ ಅವಕಾಶ ಸಂಬಂಧಪಟ್ಟ ಪಕ್ಷಗಳಿಗೆ ನೀಡಿಯೂ'' ಎಂಬ ಪದಗಳನ್ನು ಚಿಹ್ನೆಯನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

5

11. 57ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 57ನೇ ವಿಭಾಗದ (2)ನೇ ಉಪ-ವಿಭಾಗದ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಈ ಅಧಿನಿಯಮದ 56ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ನೀಡಿದ ಮಾರಾಟ ಪ್ರಮಾಣಪತ್ರ 1908ರ ಭಾರತ ನೋಂದಣಿ ಅಧಿನಿಯಮದ (1908ರ 16ನೇ ಕೇಂದ್ರ ಅಧಿನಿಯಮ) ಉಪಬಂಧಗಳ ಪ್ರಕಾರ ನೋಂದಣಿ ಮಾಡತಕ್ಕದ್ದು.";

12. 69ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 69ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ, "ಆ ಜಿಲ್ಲೆಯ ಜಿಲ್ಲಾಧಿಕಾರಿಗೆ" ಎಂಬ ಪದಗಳ ನಂತರ "1963ರ ಕಾಲ ಪರಿಮಿತಿ ಅಧಿನಿಯಮದ (1963ರ 36ನೇ ಕೇಂದ್ರ ಅಧಿನಿಯಮ) ಕೆಳಗೆ ಸಾಲ ಕಾಲಪರಿಮಿತಿಗೊಳಗಾಗುವುದಕ್ಕೆ ಮುಂದೆ" ಎಂಬ ಪದಗಳನ್ನು ಚಿಹ್ನೆಗಳನ್ನು ಮತ್ತು ಅಂಕೆಗಳನ್ನು ಸೇರಿಸತಕ್ಕದ್ದು.

13. 74ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 74ನೇ ವಿಭಾಗದಲ್ಲಿ,—

(1) (ಎ) ಐಟಮ್‌ನಲ್ಲಿ "ಪುರುಷನಿಗೆ" ಎಂಬ ಪದದ ಬದಲು "ಸದಸ್ಯನಿಗೆ" ಎಂಬ ಪದವನ್ನು ಸೇರಿಸತಕ್ಕದ್ದು;

(2) (ಬಿ) ಐಟಮ್‌ನಲ್ಲಿ "ಅಂಚೆ ಮೂಲಕವೋ ಆಗಿರತಕ್ಕದ್ದು" ಎಂಬ ಪದಗಳಿಗೆ ಬದಲು "ಅಂಚೆ ಮೂಲಕವೋ ಇ-ಮೈಲ್ ಮುಖಾಂತರವೋ ಆಗಿರತಕ್ಕದ್ದು" ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

14. 83ಎ, 83ಬಿ, 83ಸಿ, 83ಡಿ ಎಂಬೀ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 83ನೇ ವಿಭಾಗದ ನಂತರ, ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"83ಎ. ತಡೆಯಾಜ್ಞೆ ಮತ್ತು ಕಂತುಗಳನ್ನು ಹೊರಡಿಸಲಿರುವ ಸರಕಾರದ ವಿಶೇಷ ಅಧಿಕಾರ.—ಈ ಅಧಿನಿಯಮದಲ್ಲೋ ಅದರ ಕೆಳಗೆ ಉಂಟುಮಾಡಿದ ನಿಯಮಗಳಲ್ಲೋ ಏನೇ ಒಳಗೊಂಡಿದ್ದರೂ, 7ನೇ ವಿಭಾಗದ ಕೆಳಗೆ ಅಥವಾ 34ನೇ ವಿಭಾಗದ ಕೆಳಗೆ ಒಂದು ತಗಾದೆ ನೋಟೀಸು ನೀಡಿದ ನಂತರ, ಲೋಪಬರಿಸಿದವನ ಅರ್ಜಿಯ ಮೇರೆಗೆ, ಸರಕಾರಕ್ಕೆ, ಈ ಅಧಿನಿಯಮದ ಕೆಳಗಿರುವ ಮುಂದಿನ ವ್ಯವಹರಣೆ ಮುಂದೂಡಬಹುದು ಮತ್ತು ಸರಕಾರಕ್ಕೆ ಸರಕಾರವು ಯಥೋಚಿತವಾಗಿ ಅಧಿಸೂಚನೆ ಮಾಡುವ ಅಂತಹ ಇತರ ಅಧಿಕಾರಿಗೋ ಸರಕಾರ ನಿಗದಿಪಡಿಸಬಹುದಾದ ಪ್ರಕಾರವಿರುವ ಇರ ಷರತ್ತುಗಳಿಗೆ ಒಳಪಟ್ಟು 1923ರ ನೌಕರರ ನಷ್ಟ ಪರಿಹಾರ ಅಧಿನಿಯಮದ (1923ರ 8ನೇ ಕೇಂದ್ರ ಅಧಿನಿಯಮ) ಕೆಳಗಿರುವ ನಷ್ಟಪರಿಹಾರ ವಿಷಯಗಳು ಹಾಗೂ ಯಾವುದಾದರೂ ನ್ಯಾಯಾಲಯದ್ದೋ, ನ್ಯಾಯ ಮಂಡಳಿಯದ್ದೋ ಆಜ್ಞೆ ಪಾಲಿಸುವುದರ ಭಾಗವಾಗಿ ನೀಡಬೇಕಾದ ಉಪದಾನ ಪ್ರಯೋಜನ ಮೊತ್ತಗಳು ಹೊರತುಪಡಿಸಿ, ಅಂತಹ ಬಾಕಿಗಳು ಕಂತುಗಳಾಗಿ ಸಂದಾಯಮಾಡಲು ಅನುಮತಿಸಬಹುದಾಗಿದೆ.

83ಬಿ. ಮೊರಟೋರಿಯಂ ಹೊರಡಿಸಲಿರುವ ಸರಕಾರದ ಅಧಿಕಾರ.—ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸರಕಾರ ಕಾಲಕಾಲಗಳಲ್ಲಿ ಅಧಿಸೂಚನೆ ಮಾಡುವ ಷರತ್ತಿಗೆ ಮತ್ತು ಮಾರ್ಗದರ್ಶಕಗಳಿಗೆ ಒಳಪಟ್ಟು ಸಂಪೂರ್ಣ ತೆರಿಗೆ ವಸೂಲಿ ವ್ಯವಹರಣೆಗಳಿಗೂ ಮೊರಟೋರಿಯಂ ಹೊರಡಿಸಲು ಸರಕಾರಕ್ಕೆ ಅಧಿಕಾರವಿರುವುದಾಗಿದೆ.

83ಸಿ. ಬೋಟ್-ಇನ್-ಲ್ಯಾಂಡ್‌ಗಿರುವ ತೀರಿಕೆ ಸ್ಕೀಂ.—ಸರಕಾರಕ್ಕೋ ಈ ಅಧಿನಿಯಮದ 71ನೇ ವಿಭಾಗದ ಕೆಳಗೆ ಅಧಿಸೂಚಿಸಲ್ಪಟ್ಟ ಸಂಸ್ಥೆಗಳ ಕೋರಿಕೆ ಪ್ರಾಧಿಕಾರಕ್ಕೋ ಬಾಕಿ ವಸೂಲಿಮಾಡುವುದಕ್ಕಾಗಿ ಈ ಅಧಿನಿಯಮದ 50ಎ ವಿಭಾಗದ ಕೆಳಗಿರುವ ಗೊತ್ತುಪಡಿಸಿದಂತಹ ಕಾಲಾವಧಿಗೆ ಮುಂದಾಗಿ ಬೋಟ್-ಇನ್-ಲ್ಯಾಂಡ್ ಮರಳಿ ನೀಡುವುದಕ್ಕಿರುವ ತೀರಿಕೆ ಸ್ಕೀಂನ್ನು ಆರಂಭಿಸಬಹುದು. ಕಂದಾಯ ವಸೂಲಿ ವ್ಯವಹರಣೆಗಳು ಆರಂಭಿಸಿದ ನಂತರ, ಲೋಪಬರಿಸಿದವನು ಮತ್ತು ಕೋರಿಕೆ ಪ್ರಾಧಿಕಾರದ ನಡುವೆ ಏರ್ಪಡುವ ತೀರಿಕೆ ಜಿಲ್ಲಾ ಅಧಿಕಾರಿಯನ್ನೋ ಅಧಿಕಾರ ನೀಡಿರುವ ಸಂಬಂಧಪಟ್ಟ ಅಧಿಕಾರಿಯನ್ನೋ ಮುಂಚಿತವಾಗಿ ತಿಳಿಸಿಕೊಂಡು ನಡೆಸತಕ್ಕದ್ದು.

83ಡಿ. ತೀರಿಕೆ ಸ್ಕೀಂನ ತಿಳುವಳಿಕೆ.—ಕಂದಾಯ ವಸೂಲಿ ವ್ಯವಹರಣೆಗಳು ಆರಂಭಿಸಿದ ನಂತರ, ಬಾಕಿ ವಸೂಲಿ ಮಾಡುವುದಕ್ಕಾಗಿ ಕೋರಿಕೆ ಪ್ರಾಧಿಕಾರವು ಯಾವುದಾದರೂ ತೀರಿಕೆ ಸ್ಕೀಂನ್ನು ಆರಂಭಿಸುವುದೋ ಅಥವಾ ಲೋಪಬರಿಸಿದವನು ಹಾಗೂ ಸಂಬಂಧಪಟ್ಟ ಕೋರಿಕೆ ಪ್ರಾಧಿಕಾರದ ನಡುವೆ ಯಾವುದಾದರೂ ತೀರಿಕೆಯಲ್ಲಿ ಏರ್ಪಡುವುದೋ ಇದ್ದಲ್ಲಿ ಅದು ಜಿಲ್ಲಾ ಅಧಿಕಾರಿಯನ್ನೋ ಅಧಿಕಾರ ನೀಡಿದ ಸಂಬಂಧಪಟ್ಟ ಅಧಿಕಾರಿಯನ್ನೋ ಮುಂಚಿತವಾಗಿ ತಿಳಿಸಿಕೊಂಡು ನಡೆಸತಕ್ಕದ್ದು:

ಆದರೆ, ತೀರಿಕೆ ಸ್ಕೀಂನ ಕೆಳಗೆ ಬಾಕಿಗಳನ್ನು ತೀರಿಕೆ ಮಾಡುವ ಅಂತಹ ಸಂದರ್ಭಗಳಲ್ಲಿ ವಸೂಲಿ ವ್ಯವಹರಣೆಗಳ ಭಾಗವಾಗಿ ಅಂತಹ ತೀರಿಕೆ ದಿನಾಂಕದವರೆಗೆ ಬಂದಿರುವ ಖರ್ಚುಗಳು, ಆಯಾಯ ವಿಷಯಗಳಂತೆ, ಪ್ರೋಸೆಸಿಂಗ್ ಚಾರ್ಜುಗಳು ಅಥವಾ ಸಂಗ್ರಹಣಾ ಚಾರ್ಜುಗಳು ಸಹಿತ ಸಂಬಂಧಪಟ್ಟ ಕೋರಿಕೆ ಪ್ರಾಧಿಕಾರವು ಸಂದಾಯ ಮಾಡಲು ಹೊಣೆಯಾಗಿರುವುದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಬಿ) ಇಲಾಖೆ

ಅಧಿಸೂಚನೆ

ನಂಬ್ರ 56/ಲೆಗ್. ಬಿ2/2023/ಕಾನೂನು. ತಿರುವನಂತಪುರಂ, *2024 ಜೂನ್ 7, 1199 ವೈಶಾಖ 24/ 1946 ಜ್ಯೇಷ್ಠ 17.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಏಪ್ರಿಲ್ 2ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 11ನೇ ಅಧಿನಿಯಮ

2023ರ ಕೇರಳ ಕಟ್ಟಡ ತೆರಿಗೆ (ತಿದ್ದುಪಡಿ) ಅಧಿನಿಯಮ

1975ರ ಕೇರಳ ಕಟ್ಟಡ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ
ಒಂದು
ಅಧಿನಿಯಮ

ಪೀಠಿಕೆ—1975ರ ಕೇರಳ ಕಟ್ಟಡ ತೆರಿಗೆ ಅಧಿನಿಯಮ (1975ರ 7) ಇನ್ನು ಮುಂದೆ ಕಂಡು ಬರುವ ಅವಶ್ಯಕತೆಗಳಿಗಾಗಿ ಮತ್ತೂ ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಕಟ್ಟಡ ತೆರಿಗೆ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು ಸರಕಾರ, ಗಜೆಟ್ ಅಧಿಸೂಚನೆಯ ಮೂಲಕ, ನಿಶ್ಚಯಿಸುವ ದಿನಾಂಕದಲ್ಲಿ ಜಾರಿಗೆ ಬರುವುದಾಗಿದೆ.

2. ಕೆಲವು ಪದಪ್ರಯೋಗದ ಬದಲು ಇತರ ಕೆಲವು ಪದಪ್ರಯೋಗದ ಸೇರ್ಪಡೆ.—1975ರ ಕೇರಳ ಕಟ್ಟಡ ತೆರಿಗೆ ಅಧಿನಿಯಮದ (1975ರ 7) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು) "ಐಷರಾಮಿ ತೆರಿಗೆ" ಎಂಬ ಪದಗಳು ಎಲ್ಲೆಲ್ಲಿ ಬರುವುದೋ ಅದರ ಬದಲು "ಅಧಿಕ ತೆರಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು

3. 2ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 2ನೇ ವಿಭಾಗದಲ್ಲಿ, ಖಂಡ (ಇ)ಯಲ್ಲಿನ ವಿವರಣೆ 2ರ ಬದಲು ಕೆಳಗಿನ ವಿವರಣೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

2

"വിവരണം 2.—(i) ഒന്നു കൂട്ടമായുള്ള, ഓരോ സംഗതിയിലും, വിഭിന്ന വ്യക്തികൾ കൈവശക്കാരായുള്ള വിവിധ അപ്പാർട്ട്മെന്റുകൾ അഥവാ ഫ്ലാറ്റുകൾ ഉൾക്കൊള്ളുന്നുവെങ്കിൽ അങ്ങനെയുള്ള ഓരോ അപ്പാർട്ട്മെന്റ് അഥവാ ഫ്ലാറ്റ് പ്രത്യേക കൂട്ടമായി പരിഗണിക്കേണ്ടതും, ഓരോ സംഗതിയിലും, അസസ്മെന്റ് കൈവശത്തിന്റെ അടിസ്ഥാനത്തിലും, മേൽപ്പറഞ്ഞ വിസ്തീർണ്ണം, ഓരോ സംഗതിയിലും, പ്രാദേശിക സ്വയംഭരണ സ്ഥാപനങ്ങൾ അംഗീകരിച്ച സോഫ്റ്റ്വെയർ/ഓക്യുപ്പൻസി സർട്ടിഫിക്കറ്റ്/നികുതി നിർണ്ണയ രേഖകളിൽ നിർദ്ദേശിച്ചിട്ടുള്ള പ്രകാരമായിരിക്കേണ്ടതുമാണ്.

(ii) നിർമ്മാതാവ് കൂട്ടത്തിന്റെ മുഴുവനോ ഭാഗികമായോ കൈവശക്കാരനായിരിക്കുന്നുവെങ്കിൽ അയാൾ കൈവശം വയ്ക്കുന്ന ഫ്ലാറ്റിന്റെയോ അപ്പാർട്ട്മെന്റിന്റെയോ അധിക മേൽപ്പറഞ്ഞ വിസ്തീർണ്ണത്തിന്, ഓരോ സംഗതിയിലും, കൂട്ടത്തിന് അധിക നികുതി നിർണ്ണയിക്കേണ്ടതും, നികുതി നിർണ്ണയത്തിനുശേഷം കൂട്ടത്തിന്റെ മുഴുവനോ ഭാഗികമായോ വിൽപ്പന നടത്തുമ്പോൾ ഓരോ ഭാഗവും അധിക നികുതിക്ക് മാത്രം പ്രത്യേക നികുതി നിർണ്ണയിക്കേണ്ടതുമാണ്.

(iii) പരസ്പരം ബന്ധപ്പെട്ടിരിക്കുന്ന ഒന്നിലധികം ഫ്ലാറ്റുകളോ അപ്പാർട്ട്മെന്റുകളോ ഒരു വ്യക്തി വാങ്ങുന്നുവെങ്കിൽ, അത് ഒരു യൂണിറ്റായി നിർണ്ണയിച്ച്, ഓരോ സംഗതിയിലും, മൊത്തം മേൽപ്പറഞ്ഞ വിസ്തീർണ്ണത്തിന്റെ അടിസ്ഥാനത്തിൽ, കൂട്ടത്തിന് നികുതി നിർണ്ണയിക്കുന്നതിനും അധിക നികുതി നിർണ്ണയിക്കുന്നതിനും അയാൾ ഉത്തരവാദിയായിരിക്കുന്നതും, എന്നാൽ ഫ്ലാറ്റുകളോ അപ്പാർട്ട്മെന്റുകളോ പരസ്പരം ബന്ധപ്പെട്ടിട്ടില്ലെങ്കിൽ ഓരോ ഫ്ലാറ്റിനും അപ്പാർട്ട്മെന്റിനും പ്രത്യേകം നികുതി നിർണ്ണയിക്കേണ്ടതുമാണ്."

4. 5എ വകുപ്പിന്റെ ഭേദഗതി.—പ്രധാന നിയമത്തിലെ 5എ വകുപ്പിൽ,—

(i) പാർശ്വ തലക്കെട്ടിനു പകരം താഴെപ്പറയുന്നവ ചേർക്കേണ്ടതും, അതായത്:—

"വാസയോഗ്യമായ ചില വർഗ്ഗത്തിലുള്ള കൂട്ടങ്ങൾ";

(ii) (1)-ാം ഉപ-വകുപ്പിനു പകരം താഴെപ്പറയുന്നവ ചേർക്കേണ്ടതും, അതായത്:—

"(1) ഈ നിയമത്തിൽ എന്തൊക്കെ അടങ്ങിയിരുന്നാലും, 1999 ഏപ്രിൽ 1-നോ അതിനു ശേഷമോ പൂർത്തിയാക്കിയ 278.7 ചതുരശ്ര മീറ്റർ മേൽപ്പറഞ്ഞ വിസ്തീർണ്ണത്തിനു മുകളിലുള്ള വാസയോഗ്യമായ എല്ലാ കൂട്ടങ്ങൾക്കും പട്ടിക-II-ൽ വ്യക്തമാക്കിയിട്ടുള്ള നിരക്കിൽ അധിക നികുതി ഈടാക്കേണ്ടതാണ്."

5. 6-ാം വകുപ്പിനു പകരം പുതിയ വകുപ്പ് ചേർക്കൽ.—പ്രധാന നിയമത്തിലെ 6-ാം വകുപ്പിനു പകരം താഴെപ്പറയുന്നവ ചേർക്കേണ്ടതും, അതായത്:—

"6. കൂട്ടത്തിന് അധിക നികുതി നിർണ്ണയിക്കുന്നതിനുള്ള മേൽപ്പറഞ്ഞ വിസ്തീർണ്ണം നിർണ്ണയിക്കൽ.—ഈ നിയമത്തിലെ വ്യവസ്ഥകൾക്കനുസൃതമായി, ഓരോ സംഗതിയിലും, ഒരു കൂട്ടത്തിന് അധിക നികുതി നിർണ്ണയിക്കുന്നതിനുള്ള മേൽപ്പറഞ്ഞ വിസ്തീർണ്ണം, ഓരോ സംഗതിയിലും, പ്രാദേശിക സ്വയംഭരണ സ്ഥാപനങ്ങൾ അംഗീകരിച്ച സോഫ്റ്റ്വെയർ/ഓക്യുപ്പൻസി സർട്ടിഫിക്കറ്റ്/നികുതി നിർണ്ണയ രേഖകളിൽ നിർദ്ദേശിച്ചിട്ടുള്ള പ്രകാരമായിരിക്കുന്നതും, അത്തരം കൂട്ടങ്ങളുടെ മേൽപ്പറഞ്ഞ വിസ്തീർണ്ണമാണ്."

6. 13-ാം വകുപ്പിന്റെ ഭേദഗതി.—പ്രധാന നിയമത്തിലെ 13-ാം വകുപ്പിലെ (2)-ാം ഉപ-വകുപ്പിനു പകരം താഴെപ്പറയുന്നവ ചേർക്കേണ്ടതും, അതായത്:—

"(2) (1)-ാം ഉപ-വകുപ്പിലുള്ള ഒരു ഉത്തരവും അത് പുറപ്പെടുവിച്ച് ഒരു വർഷത്തിനുള്ളിൽ ജില്ലാ കളക്ടർ സ്വമേധയാ പുനഃപരിശോധിക്കേണ്ടതില്ല."

7. 21-ാം വകുപ്പിനു പകരം പുതിയ വകുപ്പ് ചേർക്കൽ.—പ്രധാന നിയമത്തിലെ 21-ാം വകുപ്പിനു പകരം താഴെപ്പറയുന്നവ ചേർക്കേണ്ടതും, അതായത്:—

"21. നിർണ്ണയത്തിനായി തെറ്റായ വിവരങ്ങൾ നൽകുന്നതു സംബന്ധിച്ച്.—നികുതി നിർണ്ണയത്തിനായി നിർണ്ണയ അധികാരിക്ക് 7-ാം വകുപ്പിലെ വ്യവസ്ഥകൾക്കനുസൃതമായി നൽകിയ റിട്ടേണിലോ 8-ാം വകുപ്പിലെ വ്യവസ്ഥകൾക്കനുസൃതമായി നൽകിയ തിരുത്തൽ റിട്ടേണിലോ തെറ്റായ വിവരങ്ങൾ നൽകിയതായി പുനഃപരിശോധനയിൽ കണ്ടെത്തിയാൽ കൂട്ടത്തിന്റെ നികുതിയുടെ അഞ്ചിരട്ടി തുക പിഴയായി ഈടാക്കേണ്ടതാണ്."

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 63/ಲೆಗ್. ಎ1/2024/ಕಾನೂನು. ತಿರುವನಂತಪುರಂ, *2024 ಜುಲೈ 30, 1199 ಕರ್ಕಟಕ 15/ 1946 ಶ್ರಾವಣ 8.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2024ರ 20ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (3ನೇ ನಂಬ್ರ) ಅಧಿನಿಯಮ

2024-2025 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಸಹ ನೀಡುವುದಕ್ಕೆ ಮತ್ತು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸುವ

ಒಂದು

ಅಧಿನಿಯಮ

ಪೀಠಿಕೆ.—2024-2025 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಸಹ ನೀಡುವುದಕ್ಕೆ ಮತ್ತು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸುವುದು ಅಗತ್ಯವಾದುದರಿಂದ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಂಕ್ಷಿಪ್ತ ನಾಮ.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (3ನೇ ನಂಬ್ರ) ಅಧಿನಿಯಮವೆಂದು ಕರೆಯಬಹುದು.

2. 2024-2025 ಆರ್ಥಿಕ ವರ್ಷಕ್ಕೆ ಕೇರಳ ರಾಜ್ಯ ಸಂಚಿತ ನಿಧಿಯಿಂದ 17,56,28,000 ರೂಪಾಯಿಗಳ ನೀಡುವಿಕೆ.—2024-2025 ಆರ್ಥಿಕ ವರ್ಷದಲ್ಲಿ ಉಂಟಾಗುವ ವಿವಿಧ ಖರ್ಚುಗಳನ್ನು ಭರಿಸುವುದಕ್ಕಾಗಿ ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ಸಂಬಂಧಿಸಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವುದನ್ನು ಮೀರದ ಹಾಗೂ ಒಟ್ಟು ಹದಿನೇಳು ಕೋಟಿ ಐವತ್ತಾರು ಲಕ್ಷದ ಇಪ್ಪತ್ತೆಂಟು ಸಾವಿರ ರೂಪಾಯಿ ಮಾತ್ರ ಆಗುವಷ್ಟು ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡಬಹುದಾಗಿದೆ ಹಾಗೂ ವಿನಿಯೋಗಿಸಬಹುದಾಗಿದೆ.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವ ಮೊತ್ತಗಳನ್ನು 2024-2025 ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದು.

G. 4/2025/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ಮೊರಬಾರದ ಮೊತ್ತಗಳು		ಒಟ್ಟು (₹)
				ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.	III	ನ್ಯಾಯಪರಿಪಾಲನೆ	**ಕಂದಾಯ**	**3,000**	**1000**	**4,000**
2.	VII	ಸ್ಟಾಂಪುಗಳು ಹಾಗೂ ನೋಂದಣಿ	ಕಂದಾಯ	1,000	..	1,000
3.	XI	ಜಿಲ್ಲಾಡಳಿತ ಹಾಗು ವಿವಿಧೋದ್ದೇಶಗಳು	ಕಂದಾಯ	1,000	..	1,000
4.	XIV	ಸ್ಟೇಷನರಿ, ಮುದ್ರಣ ಹಾಗೂ ಇತರ ಆಡಳಿತಾತ್ಮಕ ಸೇವೆಗಳು	ಕಂದಾಯ	..	20,68,000	20,68,000
5.	XVIII	ವೈದ್ಯಕೀಯ ಹಾಗೂ	ಕಂದಾಯ	..	82,58,000	82,58,000
		ಸಾರ್ವಜನಿಕ ಆರೋಗ್ಯ	ಬಂಡವಾಳ	..	2,83,58,000	2,83,58,000
6.	XIX	ಕುಟುಂಬ ಕಲ್ಯಾಣ	ಕಂದಾಯ	..	1,81,000	1,81,000
7.	XXIV	ಕಾರ್ಮಿಕ, ಕಾರ್ಮಿಕ ಕಲ್ಯಾಣ ಹಾಗೂ ಅನಿವಾಸಿ ಕಲ್ಯಾಣ	ಕಂದಾಯ	1,000	..	1,000
8.	XXX	ಆಹಾರ	ಕಂದಾಯ	..	11,91,000	11,91,000
9.	XXXII	ಹೈನುಗಾರಿಕೆ	ಬಂಡವಾಳ	1,000	..	1,000
10.	XXXIII	ಮೀನುಗಾರಿಕೆ	ಬಂಡವಾಳ	1,000	..	1,000
11.	XXXVII	ಕೈಗಾರಿಕೆಗಳು	ಬಂಡವಾಳ	1,51,50,000	4,12,000	1,55,62,000
12.	XL	ಬಂದರುಗಳು	ಬಂಡವಾಳ	12,00,01,000	..	12,00,01,000
			ಒಟ್ಟು	**13,51,59,000**	**4,04,69,000**	**17,56,28,000**

-

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 23/ಲೆಗ್. ಸಿ1/2024/ಕಾನೂನು. ತಿರುವನಂತಪುರಂ, *2024 ಜುಲೈ 9,* / *1199 ಮಿಥುನ 25,* / *1946 ಆಷಾಢ 18.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 8ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 14ನೇ ಅಧಿನಿಯಮ

2024ರ ಕೇರಳ ಮುನಿಸಿಪಾಲಿಟಿ (ಎರಡನೇ ತಿದ್ದುಪಡಿ) ಅಧಿನಿಯಮ

1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮವನ್ನು ಪುನಃ ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗನುಸಾರವಾಗಿ ಪುನಃ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು;

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಮುನಿಸಿಪಾಲಿಟಿ (ಎರಡನೇ ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 6ನೇ ವಿಭಾಗದ ತಿದ್ದುಪಡಿ.—1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮದ (1994ರ 20) 6ನೇ ವಿಭಾಗದ (3)ನೇ ಉಪ-ವಿಭಾಗದಲ್ಲಿ,—

(ಎ) (ಎ) ಖಂಡದಲ್ಲಿ,—

(i) (i)ನೇ ಉಪಖಂಡದ "ಇಪ್ಪತ್ತೈದು" ಎಂಬ ಪದದ ಬದಲು "ಇಪ್ಪತ್ತಾರು" ಎಂಬ ಪದವನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

.

2

(ii) (ii)ನೇ ಉಪಖಂಡದ ''ಐವತ್ತೆರಡು'' ಎಂಬ ಪದದ ಬದಲು ''ಐವತ್ತಮೂರು'' ಎಂಬ ಪದ ಮತ್ತು ''ಇಪ್ಪತ್ತೈದು'' ಎಂಬ ಪದದ ಬದಲು ''ಇಪ್ಪತ್ತಾರು'' ಎಂಬ ಪದವನ್ನು ಸೇರಿಸತಕ್ಕದ್ದು;

(ಬ) (ಬ) ಖಂಡದಲ್ಲಿ,—

(i) (i)ನೇ ಉಪಖಂಡದ ''ಐವತ್ತೈದು'' ಎಂಬ ಪದದ ಬದಲು ''ಐವತ್ತಾರು'' ಎಂಬ ಪದವನ್ನು ಸೇರಿಸತಕ್ಕದ್ದು;

(ii) (ii)ನೇ ಉಪಖಂಡದ ''ನೂರು'' ಎಂಬ ಪದದ ಬದಲು ''ನೂರ ಒಂದು'' ಎಂಬ ಪದ ಮತ್ತು ''ಐವತ್ತೈದು'' ಎಂಬ ಪದದ ಬದಲು ''ಐವತ್ತಾರು'' ಎಂಬ ಪದವನ್ನು ಸೇರಿಸತಕ್ಕದ್ದು.

———————

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಐ) ಇಲಾಖೆ

ಅಧಿಸೂಚನೆ

ನಂಬ್ರ 67/ಲೆಗ್. ಐ2/2022/ಕಾನೂನು. ತಿರುವನಂತಪುರಂ, *2024 ನವೆಂಬರ್ 18,* / *1200 ವೃಶ್ಚಿಕ 3/* / *1946 ಕಾರ್ತಿಕ 27.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದ ಮಸೂದೆಗೆ 2024 ನವೆಂಬರ್ 15ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 32ನೇ ಅಧಿನಿಯಮ

2024ರ ಕೇರಳ ಜಾನುವಾರು ಸಂತಾನೋತ್ಪತ್ತಿ ಅಧಿನಿಯಮ

ಕೇರಳ ರಾಜ್ಯದಲ್ಲಿ ಅತ್ಯುತ್ತಮ ತಳಿಯ ಜಾನುವಾರುಗಳನ್ನು ವೃದ್ಧಿಗೊಳಿಸಲು ಗುರಿಯಿರಿಸಿ ಸಂತಾನೋತ್ಪತ್ತಿಗೆ ಉಪಯೋಗಿಸುವ ಬೀಜದ ಎತ್ತುಗಳಿಂದಿರುವ ಬೀಜ ಉತ್ಪಾದನೆ, ವೀರ್ಯಾಣುಗಳ ಸಂಸ್ಕರಣೆ, ಸಂಗ್ರಹಣೆ, ಮಾರಾಟ ಹಾಗೂ ವಿತರಣೆ, ಅದಲ್ಲದೆ ಕೃತಕ ಗರ್ಭಧಾರಣೆ ಮುಂತಾದ ಸಂತಾನೋತ್ಪತ್ತಿ ಚಟುವಟಿಕೆಗಳು ಹಾಗೂ ಜಾನುವಾರು ಸಂತಾನೋತ್ಪತ್ತಿ ಮತ್ತು ಅನುಬಂಧಿತ ಚಟುವಟಿಕೆಗಳನ್ನು ನಿಯಂತ್ರಿಸಲು ಮತ್ತು ಇದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಿಸುವ

ಒಂದು

ಅಧಿನಿಯಮ

ಪೀಠಿಕೆ.—ಕೇರಳ ರಾಜ್ಯದಲ್ಲಿ ಅತ್ಯುತ್ತಮ ತಳಿಯ ಜಾನುವಾರುಗಳನ್ನು ವೃದ್ಧಿಗೊಳಿಸಲು ಗುರಿಯಿರಿಸಿ ಸಂತಾನೋತ್ಪತ್ತಿಗೆ ಉಪಯೋಗಿಸುವ ಬೀಜದ ಎತ್ತುಗಳಿಂದಿರುವ ಬೀಜ ಉತ್ಪಾದನೆ, ವೀರ್ಯಾಣುಗಳ ಸಂಸ್ಕರಣೆ, ಸಂಗ್ರಹಣೆ, ಮಾರಾಟ ಹಾಗೂ ವಿತರಣೆ, ಅದಲ್ಲದೆ ಕೃತಕ ಗರ್ಭಧಾರಣೆ ಮುಂತಾದ ಸಂತಾನೋತ್ಪತ್ತಿ ಚಟುವಟಿಕೆಗಳು ಹಾಗೂ ಜಾನುವಾರು ಸಂತಾನೋತ್ಪತ್ತಿ ಮತ್ತು ಅನುಬಂಧಿತ ಚಟುವಟಿಕೆಗಳನ್ನು ನಿಯಂತ್ರಿಸಲು ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಆನುಷಾಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

ಅಧ್ಯಾಯ 1

ಪ್ರಾರಂಭ

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಜಾನುವಾರು ಸಂತಾನೋತ್ಪತ್ತಿ ಅಧಿನಿಯಮ ಎಂದು ಕರೆಯಬಹುದು.

G. 6/2025/GPC.

This is a digitally signed Gazette.
Authenticity may be verified through https://compose.kerala.gov.in/

(2) ಇದು ಸರಕಾರವು ಅಧಿಕೃತ ಗಜೆಟ್ ಅಧಿಸೂಚನೆಯ ಮುಖೇನ ಗೊತ್ತುಪಡಿಸುವ ದಿನಾಂಕದಿಂದ ಜಾರಿಗೆ ಬರುವುದಾಗಿದೆ.

2. ನಿರ್ವಚನಗಳು.—ಈ ಅಧಿನಿಯಮದಲ್ಲಿ, ಸಂದರ್ಭವು ಇತರ ರೀತಿಯಲ್ಲಿ ಅಗತ್ಯಪಡಿಸದಿದ್ದಲ್ಲಿ,—

(ಎ) "ಕೃತಕ ಗರ್ಭಧಾರಣೆ (ಎ.ಐ.)" ಎಂದರೆ ತಂತ್ರಜ್ಞಾನದ ಮೂಲಕ, ಸಂತಾನೋತ್ಪತ್ತಿ ಪ್ರಾಯಕ್ಕೆ ಬಂದ ಪಶುಗಳ ಗರ್ಭಾಶಯದಲ್ಲಿ ಬೀಜದ ಎತ್ತುಗಳ ವೀರ್ಯಾಣುಗಳನ್ನು ಕೃತಕವಾಗಿ ನಿಕ್ಷೇಪಿಸುವುದು ಎಂದರ್ಥವಾಗುವುದಾಗಿದೆ;

ವಿವರಣೆ.—ಉಪಖಂಡದ ಅಗತ್ಯಕ್ಕಾಗಿ "ಪಶು" ಎಂದರೆ ದನ, ಆಕಳು, ಎಮ್ಮೆ, ಎಮ್ಮೆ ಆಕಳು ಎಂದರ್ಥವಾಗುವುದು;

(ಬಿ) "ಎ.ಐ. ಕೇಂದ್ರ" ಎಂದರೆ ಕೃತಕ ಗರ್ಭಧಾರಣೆಗಾಗಿ ಬೀಜವನ್ನು ಸುರಕ್ಷಿತವಾಗಿರಿಸುವ ಮತ್ತು ಉಪಯೋಗಿಸುವ ಯಾವುದೇ ಪರಿಸರ ಎಂದರ್ಥವಾಗುವುದು;

(ಸಿ) "ಪ್ರಾಧಿಕಾರ" ಎಂದರೆ ಅಧಿನಿಯಮದ 3ನೇ ಉಪ-ವಿಭಾಗದ ಪ್ರಕಾರ ರೂಪೀಕರಿಸಿದ ಜಾನುವಾರು ಸಂತಾನೋತ್ಪತ್ತಿ ನಿಯಂತ್ರಣ ಪ್ರಾಧಿಕಾರ ಎಂದರ್ಥವಾಗುವುದು;

(ಡಿ) "ಅಂಗೀಕೃತ ಇನ್ ಸೆಮಿನೇಟರ್" ಎಂದರೆ ಪಶುವೈದ್ಯರು, ಪಶು ಸಂಗೋಪನಾ ಇಲಾಖೆಯಲ್ಲಿ ಸೇವೆಯಲ್ಲಿರುವ ಫೀಲ್ಡ್ ಆಫೀಸರ್, ಅಸಿಸ್ಟೆಂಟ್ ಫೀಲ್ಡ್ ಆಫೀಸರ್, ಲೈವ್ ಸ್ಟೋಕ್ ಇನ್‌ಸ್ಪೆಕ್ಟರ್, ಪ್ರಾಧಿಕಾರದಿಂದ ಅಥವಾ ಪ್ರಾಧಿಕಾರದ ಅಂಗೀಕಾರವಿರುವ ಸಂಸ್ಥೆಯಿಂದ ತರಬೇತಿ ಲಭಿಸಿದ ಎ.ಐ. ಟೆಕ್ನೀಶಿಯನ್ ಎಂದರ್ಥವಾಗುವುದು;

(ಇ) "ಜಾನುವಾರು" ಎಂದರೆ ದನ, ಎತ್ತು, ಆಕಳು, ಎಮ್ಮೆ, ಕೋಣ, ಎಮ್ಮೆ ಆಕಳು ಎಂಬಿವುಗಳು ಎಂದರ್ಥವಾಗುವುದು;

(ಎಫ್) "ಜಾನುವಾರು ಬ್ರೀಡರ್" ಎಂದರೆ, ಜಾನುವಾರು ಸಂತಾನೋತ್ಪತ್ತಿ ಚಟುವಟಿಕೆಗಳಲ್ಲಿ ಕಾರ್ಯನಿರತರಾಗಿರುವ ಯಾವುದೇ ವ್ಯಕ್ತಿ, ಸಂಘ, ಸಂಸ್ಥೆ ಅಲ್ಲದಿದ್ದರೆ ಏಜೆನ್ಸಿ ಎಂದರ್ಥವಾಗುವುದು;

(ಜಿ) "ಜಾನುವಾರು ಸಂತಾನೋತ್ಪತ್ತಿ" ಎಂದರೆ, ಬೀಜದ ಎತ್ತುಗಳು, ವೀರ್ಯಾಣುಗಳು ಅಲ್ಲದಿದ್ದರೆ ಭ್ರೂಣಗಳು ಎಂಬಿವುಗಳನ್ನು ಉಪಯೋಗಿಸಿ ಜಾನುವಾರುಗಳಲ್ಲಿ ನಡೆಸುವ ಸಂತಾನೋತ್ಪತ್ತಿಯ ಚಟುವಟಿಕೆಗಳು ಎಂದರ್ಥವಾಗುವುದು;

(ಎಚ್) "ಸಂತಾನೋತ್ಪತ್ತಿ ಧೋರಣೆ" ಎಂದರೆ ರಾಜ್ಯದ ಜಾನುವಾರುಗಳ ಸಂತಾನೋತ್ಪತ್ತಿ ಮತ್ತು ತಳಿ ಸುಧಾರಣೆಯನ್ನು ಉತ್ತಮಗೊಳಿಸಲು ಕಾಲಾಕಾಲಗಳಲ್ಲಿ ಸರಕಾರವು ಹೊರಡಿಸುವ ಜಾನುವಾರು ಸಂತಾನೋತ್ಪತ್ತಿ ಧೋರಣೆ ಎಂದರ್ಥವಾಗುವುದು;

(ಐ) "ಪ್ರಮಾಣೀಕೃತ ಎತ್ತು" ಎಂದರೆ ಪ್ರಾಧಿಕಾರದ ಮಾನದಂಡಗಳಿಗೆ ಅನುಸಾರವಾಗಿ ನಿರ್ದಿಷ್ಟ ಜಾನುವಾರು ವರ್ಗಕ್ಕಾಗಿ ಬೀಜ ಉತ್ಪಾದನೆಗೆ ಪ್ರಾಧಿಕಾರವು ಪ್ರಮಾಣೀಕರಿಸಿದ ಬೀಜದ ಎತ್ತು ಎಂದರ್ಥವಾಗುವುದು;

(ಜೆ) "ಚೇರ್‌ಪರ್ಸನ್" ಎಂದರೆ ಪ್ರಾಧಿಕಾರದ ಚೇರ್‌ಪರ್ಸನ್ ಎಂದರ್ಥವಾಗುವುದು;

(ಕೆ) "ಭ್ರೂಣ" ಎಂದರೆ ಜಾನುವಾರುಗಳ ಅಂಡಾಣು, ಬೀಜ ಇತ್ಯಾದಿಗಳ ಸಮ್ಮಿಲನದಿಂದ ಉಂಟಾಗುವುದು ಎಂದರ್ಥವಾಗುವುದು;

(ಎಲ್) "ತಜ್ಞ" ಎಂದರೆ ಪ್ರಾಧಿಕಾರವು ನಿರ್ದೇಶಿಸಿದ ಅಗತ್ಯಗಳನ್ನು ನೆರವೇರಿಸುವ ಒಬ್ಬ ತಜ್ಞ ಎಂದರ್ಥವಾಗುವುದು;

(ಎಂ) "ಸರಕಾರ" ಎಂದರೆ ಕೇರಳ ಸರಕಾರ ಎಂದರ್ಥವಾಗುವುದು;

(ಎನ್) "ಮಿಸ್ ಬ್ರಾಂಡಡ್ ಬೀಜ" ಎಂದರೆ ಬೀಜದ ಎತ್ತಿನ ವೀರ್ಯಾಣುಗಳ ಡಿ.ಎನ್.ಎ ಪ್ರೊಫೈಲ್, ಸೆಮೆನ್ ಸ್ಟೇಷನಿನ ದಾಖಲೆಗಳಲ್ಲಿ ಅಥವಾ ಸೆಮೆನ್‌ಸ್ಟ್ರೋದಲ್ಲಿ ದಾಖಲಿಸಿದ ವೀರ್ಯಾಣುಗಳ ಡಿ.ಎನ್.ಎ ಪ್ರೊಫೈಲಿನೊಂದಿಗೆ ಹೊಂದಿಕೆಯಾಗದಿರುವುದು ಎಂದರ್ಥವಾಗುವುದು;

(ಒ) "ಪೆಡಿಗ್ರಿ" ಎಂದರೆ ಎತ್ತು, ದನ, ಕೋಣ, ಎಮ್ಮೆ ಎಂಬಿವುಗಳ ವಂಶಾವಳಿಯ ಅನುವಂಶಿಕ ರಚನೆಯ ವಿವರಗಳು ಎಂದರ್ಥವಾಗುವುದು;

(ಪಿ) "ಪರಿಸರ" ಎಂದರೆ ವೀರ್ಯಾಣುಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಅಲ್ಲದಿದ್ದರೆ ಉಪಯೋಗ ಎಂಬಿವುಗಳಿಗಾಗಿ ಉಪಯೋಗಿಸುವ ಯಾವುದಾದರೂ ಸ್ಥಳ, ಭೂಮಿ, ಹಿತ್ತಿಲು, ಕಟ್ಟಡ ಎಂದರ್ಥವಾಗುವುದು;

(ಕ್ಯೂ) "ನಿಗದಿಪಡಿಸಿದ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿರುವ ನಿಯಮಗಳಿಂದ ನಿಗದಿಪಡಿಸಿದ ಎಂದರ್ಥವಾಗುವುದು;

This is a digitally signed Gazette.
Authenticity may be verified through https://compose.kerala.gov.in/

(ಆರ್) "ಅಂಗೀಕೃತ ಲಾಬೋರೇಟರಿ" ಎಂದರೆ ಸ್ಟೇಟ್ ಇನ್‌ಸ್ಟಿಟ್ಯೂಟ್ ಫ್ಹೋರ್ ಅನಿಮಲ್ ಡಿಸೀಸೆಸ್/ರೀಜೆನಲ್ ಡಿಸೀಸಸ್ ಡಯಾಗ್ನೋಸ್ಟಿಕ್ ಲಾಬೋರೇಟರಿ ಅಲ್ಲದಿದ್ದರೆ ಪ್ರಾಧಿಕಾರವು ಯಥೋಚಿತವಾಗಿ ಅಧಿಕೃತಗೊಳಿಸಿದ ಇತರ ಯಾವುದಾದರೂ ಲೋಬೋರೇಟರಿ ಎಂದರ್ಥವಾಗುವುದು;

(ಎಸ್) "ರೆಜಿಸ್ಟ್ರಾರ್" ಎಂದರೆ ಪ್ರಾಧಿಕಾರದ ರೆಜಿಸ್ಟ್ರಾರ್ ಎಂದರ್ಥವಾಗುವುದು;

(ಟಿ) "ಬೀಜ" ಎಂದರೆ ಬೀಜದ ಎತ್ತು ಅಥವಾ ಕೋಣದ ಯಾವುದೇ ಸ್ಥಿತಿಯಲ್ಲಿರುವ ಬೀಜ ಅಲ್ಲದಿದ್ದರೆ ಲಿಂಗ ನಿರ್ಣಯ ಮಾಡಿದ ವೀರ್ಯಾಣುಗಳು ಎಂದರ್ಥವಾಗುವುದು;

(ಯು) "ಸೆಮನ್ ಬ್ಯಾಂಕ್" ಎಂದರೆ ಮಾರಾಟಕ್ಕೆ ಅಥವಾ ವಿತರಣೆಗೆ ಬೇಕಾಗಿ ಜಾನುವಾರು ಬೀಜವನ್ನು ಕಾಯ್ದಿರಿಸುವ ಸ್ಥಳ ಎಂದರ್ಥವಾಗುವುದು;

(ವಿ) "ವೀರ್ಯಾಣು" ಎಂದರೆ ಸೆಮನ್ ಸ್ಟ್ರೋದಲ್ಲಿ ಕಾಯ್ದಿರಿಸಿದ ಬೀಜದ ಒಂದು ಡೋಸ್ ಎಂದರ್ಥವಾಗುವುದು;

(ಡಬ್ಲ್ಯೂ) "ಸೆಮನ್ ಸ್ಟೇಷನ್" ಎಂದರೆ ಜಾನುವಾರುಗಳ ವೀರ್ಯಾಣುಗಳ ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ, ಶೇಖರಣೆ ಎಂಬಿವುಗಳಿಗಾಗಿ ಸಜ್ಜೀಕರಿಸಿದ ಸ್ಥಳ ಎಂದರ್ಥವಾಗುವುದು;

(ಎಕ್ಸ್) "ಸೇವೆಗಳು" ಎಂದರೆ ಸರಕಾರವು ನಿರ್ದೇಶಿಸುವ ಯಾವುದಾದರೂ ಜಾನುವಾರು ಸಂತಾನೋತ್ಪತ್ತಿ ಸೇವೆಗಳು ಎಂದರ್ಥವಾಗುವುದು;

(ವೈ) "ರಾಜ್ಯ" ಎಂದರೆ ಕೇರಳ ರಾಜ್ಯ ಎಂದರ್ಥವಾಗುವುದು;

(ಝಡ್) "ಸಬ್ ಸ್ಟಾಂಡರ್ಡ್ ಬೀಜ" ಎಂದರೆ ನಿರ್ದಿಷ್ಟ ಗುಣಮಟ್ಟವಿಲ್ಲದ ಬೀಜ ಅಲ್ಲದಿದ್ದರೆ ಸೆಮನ್ ಸ್ಟ್ರೋ ಎಂದರ್ಥವಾಗುವುದು;

(ಝಡ್ಎ) "ಅನಧಿಕೃತ ವೀರ್ಯಾಣು" ಎಂದರೆ ಪ್ರಾಧಿಕಾರದ ಅಂಗೀಕಾರವಿಲ್ಲದ ವೀರ್ಯಾಣು ಎಂದರ್ಥವಾಗುವುದು;

(ಝಡ್ಬಿ) "ಪಶು ವೈದ್ಯ" ಎಂದರೆ 1984ರ ಇಂಡಿಯನ್ ವೆಟರಿನರಿ ಕೌನ್ಸಿಲ್ ಆಕ್ಟ್ (1984ರ 52ನೇ ಕೇಂದ್ರ ಅಧಿನಿಯಮ)ನಲ್ಲಿ ವ್ಯಾಖ್ಯಾನಿಸಿರುವ ಪ್ರಕಾರ ರೆಜಿಸ್ಟರ್ ಮಾಡಿದ ಒಬ್ಬ ಪಶುವೈದ್ಯ ಎಂದರ್ಥವಾಗುವುದು.

ಅಧ್ಯಾಯ 2

ಜಾನುವಾರು ಸಂತಾನೋತ್ಪತ್ತಿ ನಿಯಂತ್ರಣ ಪ್ರಾಧಿಕಾರ

3. ಜಾನುವಾರು ಸಂತಾನೋತ್ಪತ್ತಿ ನಿಯಂತ್ರಣ ಪ್ರಾಧಿಕಾರದ ರಚನೆ.—(1) ಸರಕಾರವು, ಈ ಅಧಿನಿಯಮ ಜಾರಿಗೆ ಬಂದ ನಂತರ, ಆದಷ್ಟು ಬೇಗನೇ ಗಜೆಟ್ ಅಧಿಸೂಚನೆಯ ಮುಖೇನ, ಈ ಅಧಿನಿಯಮದ ಪ್ರಕಾರವಿರುವ ಅದರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಮತ್ತು ಅಧಿಕಾರಗಳನ್ನು ವಿನಿಯೋಗಿಸುವುದಕ್ಕಾಗಿ, ಜಾನುವಾರು ಸಂತಾನೋತ್ಪತ್ತಿ ನಿಯಂತ್ರಣ ಪ್ರಾಧಿಕಾರ ಎಂಬ ಹೆಸರಿನಲ್ಲಿ ಕರೆಯಲ್ಪಡುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರದಲ್ಲಿ ಈ ಕೆಳಗಿನ ಸದಸ್ಯರು ಇರತಕ್ಕದ್ದಾಗಿದೆ, ಅದೇನೆಂದರೆ:—

(ಎ) ಡಯರೆಕ್ಟರ್, ಪಶು ಸಂಗೋಪನಾ ಇಲಾಖೆ - ಚೇರ್‌ಪರ್ಸನ್;

(ಬಿ) ಫಾಕಲ್ಟಿ ಡೀನ್, ಕೇರಳ ಪಶುವೈದ್ಯಕೀಯ ಮತ್ತು ಪಶು ವಿಜ್ಞಾನಗಳು ವಿಶ್ವವಿದ್ಯಾನಿಲಯ - ಸದಸ್ಯರು;

(ಸಿ) ಜೋಯಿಂಟ್ ಕಮಿಷನರ್ ಪಶು ಸಂಗೋಪನಾ ಕ್ಷೀರಾಭಿವೃದ್ಧಿ ಸಚಿವಾಲಯ, ಭಾರತ ಸರಕಾರ - ಸದಸ್ಯರು;

(ಡಿ) ಡಯರೆಕ್ಟರ್, ಕ್ಷೀರಾಭಿವೃದ್ಧಿ ಇಲಾಖೆ - ಸದಸ್ಯರು;

(ಇ) ಸರಕಾರಿ ಪಶು ಸಂಗೋಪನಾ ಇಲಾಖೆಯ ಜಂಟಿ ಕಾರ್ಯದರ್ಶಿಯವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ - ಸದಸ್ಯರು;

(ಎಫ್) ಮಾನೇಜಿಂಗ್ ಡಯರೆಕ್ಟರ್, ಕೇರಳ ಲೈವ್ ಸ್ಟೋಕ್ ಡೆವಲಪ್‌ಮೆಂಟ್ ಬೋರ್ಡ್ - ಸದಸ್ಯರು;

This is a digitally signed Gazette.
Authenticity may be verified through https://compose.kerala.gov.in/

(ಜ) ಡಯರೆಕ್ಟರ್, ಅಕಾಡೆಮಿಕ್ಸ್ ಆಂಡ್ ರಿಸರ್ಚ್, ಕೇರಳ ಪಶುವೈದ್ಯಕೀಯ ಮತ್ತು ಪಶು ವಿಜ್ಞಾನಗಳು ವಿಶ್ವವಿದ್ಯಾನಿಲಯ - ಸದಸ್ಯರು;

(ಎಚ್) ಕೇರಳ ರಾಜ್ಯ ವೆಟರಿನರಿ ಕೌನ್ಸಿಲ್ ಸದಸ್ಯರೊಳಗಿನಿಂದ ಸರಕಾರವು ನಾಮನಿರ್ದೇಶಿಸುವ ಒಬ್ಬ ವ್ಯಕ್ತಿ - ಸದಸ್ಯರು;

(ಐ) ಸರಕಾರವು ನಾಮ ನಿರ್ದೇಶಿಸುವ ಒಬ್ಬ ಪಶುವೈದ್ಯರು - ಸದಸ್ಯರು;

(ಜೆ) ಜಾನುವಾರು ಸಂತಾನೋತ್ಪತ್ತಿಯ ವಿಷಯಗಳಲ್ಲಿ ಪ್ರಾವೀಣ್ಯತೆಯಿರುವ ಮತ್ತು ಸರಕಾರವು ನಾಮ ನಿರ್ದೇಶಿಸುವ ಒಬ್ಬ ಹಾಲು ಉತ್ಪಾದಕ - ಸದಸ್ಯರು;

(ಕೆ) ಜೋಯಿಂಟ್ ಡೈರೆಕ್ಟರ್ (ಲೈವ್ ಸ್ಟೋಕ್ ಪ್ರೊಡಕ್ಷನ್), ಪಶು ಸಂಗೋಪನಾ ಇಲಾಖೆ ಡೈರಕ್ಟರೇಟ್ - ರೆಜಿಸ್ಟ್ರಾರ್.

(3) ಪ್ರಾಧಿಕಾರದ ದೈನಂದಿನ ಚಟುವಟಿಕೆಗಳನ್ನು ರೆಜಿಸ್ಟ್ರಾರ್‌ರವರು ಮೇಲ್ನೋಟ ವಹಿಸುವುದು ಹಾಗೂ ನಿಯಂತ್ರಿಸುವುದು ಮಾಡತಕ್ಕದ್ದು.

4. ಪ್ರಾಧಿಕಾರದ ಕೇಂದ್ರ ಕಛೇರಿ.—ಪ್ರಾಧಿಕಾರದ ಕೇಂದ್ರ ಕಛೇರಿಯು ರಾಜ್ಯದ ಪಶು ಸಂಗೋಪನಾ ಇಲಾಖೆಯ ಡೈರಕ್ಟರೇಟಿನಲ್ಲಿ ಆಗಿರುವುದಾಗಿದೆ.

5. ಪ್ರಾಧಿಕಾರದ ಸಭೆಗಳು.—(1) ರೆಜಿಸ್ಟ್ರಾರ್‌ರವರು, ಚೇರ್‌ಪರ್ಸನರವರ ನಿರ್ದೇಶದ ಪ್ರಕಾರ, ನಿಶ್ಚಯಿಸುವ ಸ್ಥಳ ಮತ್ತು ಸಮಯದಲ್ಲಿ, ನಿರ್ಧರಿಸಲ್ಪಡುವ ಪ್ರಕ್ರಿಯೆಗಳನ್ನು ಪಾಲಿಸುತಾ ಪ್ರಾಧಿಕಾರದ ಸಭೆಯನ್ನು ಸೇರತಕ್ಕದ್ದು.

(2) ಪ್ರಾಧಿಕಾರದ ಸಭೆಯ ಕ್ವಾರಂ ಐದು ಆಗಿರುವುದು.

6. ಪ್ರಾಧಿಕಾರದ ತಜ್ಞರು ಮತ್ತು ಇತರ ಅಧಿಕಾರಿಗಳು.—(1) ಪ್ರಾಧಿಕಾರದ ಚಟುವಟಿಕೆಗಳನ್ನು ರಾಜ್ಯದ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳ ಮುಖಾಂತರ ನಿರ್ವಹಿಸತಕ್ಕದ್ದು. ಪ್ರಾಧಿಕಾರದ ಚಟುವಟಿಕೆಗಳನ್ನು ದಕ್ಷವಾಗಿ ನಿರ್ವಹಿಸುವುದಕ್ಕಾಗಿ ಹೆಚ್ಚು ಅಧಿಕಾರಿಗಳು ಹಾಗೂ ನೌಕರರು ಅಗತ್ಯವಿದ್ದಲ್ಲಿ, ಸರಕಾರದೊಂದಿಗೆ ಸಮಾಲೋಚಿಸಿ ಕರಾರು/ಡೆಪ್ಯುಟೇಶನ್ ಆಧಾರದಲ್ಲಿ ನೇಮಕಾತಿ ಮಾಡಬಹುದಾಗಿದೆ.

(2) ಒಂಭತ್ತು ಸದಸ್ಯರಿಗಿಂತ ಹೆಚ್ಚಲ್ಲದ ತಜ್ಞರ ಒಂದು ಕನ್ಸಲ್ಟೇಟಿವ್ ಪ್ಯಾನಲ್‌ನ್ನು ಪ್ರಾಧಿಕಾರವು ತಯಾರಿಸತಕ್ಕದ್ದು. ತಜ್ಞರ ಪ್ಯಾನಲಿನಿಂದ, ಪ್ರಾಧಿಕಾರವು ಅವಶ್ಯಪಡುವಂತಹ ರೀತಿಯಲ್ಲಿರುವ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ಮೂರು ಸದಸ್ಯರಿಗಿಂತ ಹೆಚ್ಚಲ್ಲದ ಸಮಿತಿಯನ್ನು/ಸಮಿತಿಗಳನ್ನು ಪ್ರಾಧಿಕಾರಕ್ಕೆ ರೂಪೀಕರಿಸಬಹುದಾಗಿದೆ.

(3) (2)ನೇ ಉಪ-ವಿಭಾಗದ ಪ್ರಕಾರ ರೂಪೀಕರಿಸುವ ಸಮಿತಿಯ ಸದಸ್ಯರಿಗೆ ಮತ್ತು ಪ್ರಾಧಿಕಾರದ ನಾಮನಿರ್ದೇಶನ ಮಾಡಲ್ಪಟ್ಟ ಸದಸ್ಯರಿಗೆ ನಿಗದಿಪಡಿಸಿದಂತಹ ಗೌರವಭತ್ತೆ, ಯಾತ್ರಾ ಭತ್ತೆ, ದಿನಭತ್ತೆ ಎಂಬವುಗಳಿಗೆ ಅರ್ಹತೆಯಿರುವುದಾಗಿದೆ.

7. ಪ್ರಾಧಿಕಾರದ ಕರ್ತವ್ಯಗಳು.—ಪ್ರಾಧಿಕಾರವು ಈ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಅದೇನೆಂದರೆ:—

(ಎ) ರಾಜ್ಯದಲ್ಲಿ ಜಾನುವಾರು ಸಂತಾನೋತ್ಪತ್ತಿಯ ಧೋರಣೆಯನ್ನು ಜಾರಿಗೊಳಿಸುವುದು, ಅದಕ್ಕೆ ಸಂಬಂಧಪಟ್ಟ ಸೇವೆಗಳನ್ನು ಒದಗಿಸುವುದು;

(ಬಿ) ರಾಜ್ಯ ಜಾನುವಾರು ಸಂತಾನೋತ್ಪತ್ತಿ ಧೋರಣೆಗೆ ಅನುಸಾರವಾಗಿ ರಾಜ್ಯದೊಳಗೆ ಅಥವಾ ಹೊರಗೆ ಉತ್ಪಾದಿಸುವುದು ಅಥವಾ ಬೇರೆ ಯಾವುದಾದರೂ ದೇಶದಿಂದ ಆಮದು ಮಾಡುವ ವೀರ್ಯಾಣುಗಳ ಅಥವಾ ಭ್ರೂಣದ ಶೇಖರಣೆ, ಮಾರಾಟ, ಉಪಯೋಗ ಎಂಬವುಗಳನ್ನು ನಿಯಂತ್ರಿಸುವುದು;

(ಸಿ) ನಿಗದಿಪಡಿಸಿದ ಮಾನದಂಡಗಳಿಗೆ ಅನುಸಾರವಾಗಿರುವ ಬೀಜದ ಎತ್ತುಗಳನ್ನು ಮತ್ತು ಕೋಣಗಳನ್ನು ಪ್ರಮಾಣೀಕರಿಸುವುದು;

(ಡಿ) ಈ ಅಧಿನಿಯಮದ 3ನೇ ಅಧ್ಯಾಯದಲ್ಲಿ ಹೇಳಿರುವ ಉಪಬಂಧಗಳಿಗನುಸಾರವಾಗಿ ರಾಜ್ಯದಲ್ಲಿ ಸೆಮನ್ ಸ್ಟೇಷನುಗಳನ್ನು ನೋಂದಣಿ ಮಾಡುವುದು;

(ಇ) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ರಾಜ್ಯದಲ್ಲಿ ಸೆಮನ್ ಬ್ಯಾಂಕುಗಳು, ಎ. ಐ ಕೇಂದ್ರಗಳನ್ನು ನೋಂದಣಿಮಾಡುವುದು;

(ಎಫ್) ಪ್ರಾಧಿಕಾರವು ನಿಶ್ಚಯಿಸುವ ನಿಬಂಧನೆಗಳಿಗೆ ಅನುಸಾರವಾಗಿ ರಾಜ್ಯದಲ್ಲಿ ಜಾನುವಾರು ಸಂತಾನೋತ್ಪತ್ತಿ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ತರಬೇತಿ ಲಭಿಸಿದ ಎ.ಐ ಟೆಕ್ನೀಶಿಯನರ್‌ಗಳನ್ನು ನಿಗದಿಪಡಿಸಿದ ಕ್ರಮಗಳ ಮೂಲಕ ಪ್ರಮಾಣೀಕರಿಸುವುದು;

This is a digitally signed Gazette.
Authenticity may be verified through https://compose.kerala.gov.in/

(ಜಿ) ಜಾನುವಾರು ಸಂತಾನೋತ್ಪತ್ತಿ ಚಟುವಟಿಕೆಗಳಿಗೆ ಸಂಬಂಧಪಟ್ಟ ನಿಯಮಗಳು, ಧೋರಣೆಗಳು ಮುಂತಾದವುಗಳಿಗೆ ಸಂಬಂಧಿಸಿ ಸಾರ್ವಜನಿಕರ ಎಡೆಯಲ್ಲಿ ಅರಿವನ್ನು ಸೃಷ್ಟಿಸುವುದಕ್ಕಿರುವ ಕಾರ್ಯಕ್ರಮಗಳನ್ನು ಆಯೋಜಿಸುವುದು;

(ಎಚ್) ಜಾನುವಾರು ಸಂತಾನೋತ್ಪತ್ತಿ ಧೋರಣೆ/ಕಾನೂನುಗಳು ಎಂಬಿವುಗಳನ್ನು ಸಕಾಲದಲ್ಲಿ ಪರಿಷ್ಕರಿಸುವುದಕ್ಕೆ ಅವಶ್ಯಕವಾದ ನಿರ್ದೇಶಗಳನ್ನು ಸರಕಾರಕ್ಕೆ ಸಮರ್ಪಿಸುವುದು;

(ಐ) ಜಾನುವಾರು ಸಂತಾನೋತ್ಪತ್ತಿಗೆ ಸಂಬಂಧಪಟ್ಟ ಇತರ ಚಟುವಟಿಕೆಗಳನ್ನು ನಿಗದಿಪಡಿಸುವ ರೀತಿಯಲ್ಲಿ ನಿರ್ವಹಿಸುವುದು.

8. ಪ್ರಾಧಿಕಾರದ ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿ.—(1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ವಿಧೇಯವಾಗಿ, ಜಾನುವಾರು ಸಂತಾನೋತ್ಪತ್ತಿಯ ಚಟುವಟಿಕೆಗಳಿಗೆ ಸಂಬಂಧಿಸಿ ಪ್ರಾಧಿಕಾರಕ್ಕೆ ರಾಜ್ಯಾದಾದ್ಯಂತವಾಗಿ ಅಧಿಕಾರವಿರುವುದಾಗಿದೆ.

(2) 7ನೇ ವಿಭಾಗದ ಪ್ರಕಾರವಿರುವ ಕರ್ತವ್ಯಗಳನ್ನು ನಿರ್ವಹಿಸುವುದರ ಭಾಗವಾಗಿ, ಪ್ರಾಧಿಕಾರಕ್ಕೆ ಅಲ್ಲದಿದ್ದರೆ ಪ್ರಾಧಿಕಾರವು ಇದಕ್ಕಾಗಿ ಅಧಿಕೃತಗೊಳಿಸಿರುವ ಅಧಿಕಾರಿಗೆ, ಯಾವುದೇ ಸೆಮನ್ ಸ್ಟೇಷನಿನಿಂದ ಮತ್ತು ಜಾನುವಾರು ಸಂತಾನೋತ್ಪತ್ತಿಯ ಚಟುವಟಿಕೆಗಳಲ್ಲಿ ನಿರತರಾಗಿರುವ ವ್ಯಕ್ತಿಗಳಿಂದ ಅವಶ್ಯಕವಾದ ಮಾಹಿತಿಗಳನ್ನು ಸಂಗ್ರಹಿಸುವ ಅಧಿಕಾರವಿರುವುದಾಗಿದೆ.

(3) ಜಾನುವಾರು ಸಂತಾನೋತ್ಪತ್ತಿ ಚಟುವಟಿಕೆಗಳನ್ನು ನಡೆಸುವ ಪರಿಸರದ ಜವಾಬ್ದಾರನಾದ ವ್ಯಕ್ತಿ ಅಲ್ಲದಿದ್ದರೆ ಬೇರೆ ಯಾವುದಾದರೂ ವ್ಯಕ್ತಿಯು, ಆ ರೀತಿಯ ಚಟುವಟಿಕೆಗಳನ್ನು ನಡೆಸುವುದು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿನ ಯಾವುದಾದರೂ ಉಪಬಂಧಗಳಿಗೆ ವಿರುದ್ಧವಾಗಿದೆ ಎಂದು ಪ್ರಾಧಿಕಾರಕ್ಕೆ ಅಭಿಪ್ರಾಯವಿದ್ದಲ್ಲಿ, ಅಂತಹ ವ್ಯಕ್ತಿಯೊಡನೆ, ನಿಗದಿಪಡಿಸಬಹುದಾದಂತಹ ಮಾಹಿತಿಗಳನ್ನು ನೀಡಲು ಅವಶ್ಯಪಡಲು ಪ್ರಾಧಿಕಾರಕ್ಕೆ ಅಧಿಕಾರವಿರುವುದಾಗಿದೆ.

ಅಧ್ಯಾಯ 3

ಸೆಮನ್ ಸ್ಟೇಷನುಗಳ, ಸೆಮನ್ ಬ್ಯಾಂಕುಗಳ ಮತ್ತು ಎ.ಐ. ಕೇಂದ್ರಗಳ ನೋಂದಣಿ, ಕೃತಕ ಗರ್ಭಧಾರಣೆ ನಡೆಸುವ ಎ.ಐ. ಟೆಕ್ನೀಶಿಯನ್‌ಗಳ ಮತ್ತು ಬೀಜದ ಎತ್ತುಗಳ ಪ್ರಮಾಣೀಕರಣ

9. ಸೆಮನ್ ಸ್ಟೇಷನುಗಳ ನೋಂದಣಿ.—(1) ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಒಬ್ಬ ವ್ಯಕ್ತಿ, ಫರ್ಮ್, ಪರಿಮಿತ ಬಾದ್ಯತೆಯ ಪಾಲುಗಾರಿಕೆ (ಲಿಮಿಟೆಡ್ ಲಯಬಿಲಿಟಿ ಪಾರ್ಟನರ್ ಶಿಪ್), ಕಂಪೆನಿ, ಪ್ರೊಡ್ಯೂಸರ್ ಕಂಪೆನಿ, ಸಂಸ್ಥೆ, ಸರಕಾರೇತರ ಸಂಘಟನೆ, ಜಾನುವಾರು ಬ್ರೀಡರ್ಸ್ ಅಸೋಸಿಯೇಷನ್, ಟ್ರಸ್ಟ್, ಕೇಂದ್ರ/ರಾಜ್ಯ ಸರಕಾರಿ ಇಲಾಖೆ, ಸಹಕಾರಿ ಸಂಘ, ಇತರ ಯಾವುದಾದರೂ ಏಜೆನ್ಸಿ ಎಂಬಿವುಗಳು ಪ್ರಾಧಿಕಾರದಿಂದ ನೋಂದಣಿ ಪ್ರಮಾಣಪತ್ರವನ್ನು ಪಡೆಯದೆ ಕೃತಕ ಗರ್ಭಧಾರಣೆಗಿರುವ ವೀರ್ಯಾಣುಗಳನ್ನು ಉತ್ಪಾದಿಸಿ ಶೇಖರಿಸುವುದು, ಸೆಮನ್ ಸ್ಟೇಷನುಗಳನ್ನು ಸ್ಥಾಪಿಸುವುದು ಅಥವಾ ನಿರ್ವಹಿಸುವುದು, ಭ್ರೂಣವನ್ನು ಉತ್ಪಾದಿಸುವುದು ಅಥವಾ ಹಸ್ತಾಂತರಿಸುವುದು ಮಾಡತಕ್ಕದ್ದಲ್ಲ.

(2) ಒಂದು ಹೊಸ ಸೆಮನ್ ಸ್ಟೇಷನನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಬಯಸುವ, (1)ನೇ ಉಪ-ವಿಭಾಗದಲ್ಲಿ ಹೇಳುವ ಒಬ್ಬ ವ್ಯಕ್ತಿಯು ನಿಗದಿಪಡಿಸಬಹುದಾದಂತಹ ಶುಲ್ಕದೊಂದಿಗೆ ಅಂತಹ ಫಾರಂನಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು.

(3) ಅಸ್ತಿತ್ವದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೆಮನ್ ಸ್ಟೇಷನುಗಳು, ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಮೂರು ತಿಂಗಳಿನೊಳಗೆ ನೋಂದಣಿ ಪ್ರಮಾಣಪತ್ರಕ್ಕಾಗಿ, ನಿಗದಿಪಡಿಸಬಹುದಾದಂತಹ ಶುಲ್ಕದೊಂದಿಗೆ ಅಂತಹ ಫಾರಂನಲ್ಲಿ ಪ್ರಾಧಿಕಾರಕ್ಕೆ ಅರ್ಜಿಸಲ್ಲಿಸತಕ್ಕದ್ದು. ಫಾರಂನಲ್ಲಿ ಅವಶ್ಯಪಡುವ ಇತರ ವಿವರಗಳೊಂದಿಗೆ ಅಸ್ತಿತ್ವದಲ್ಲಿರುವ ಬೀಜ ಸಂಗ್ರಹದ ಲೆಕ್ಕವನ್ನು ಸಹ ಅರ್ಜಿದಾರನು ದಾಖಲಿಸತಕ್ಕದ್ದು.

(4) (2) ಮತ್ತು (3)ನೇ ಉಪ-ವಿಭಾಗದ ಪ್ರಕಾರವಿರುವ ಅರ್ಜಿಗಳು ಲಭಿಸಿದ್ದಲ್ಲಿ, ಪ್ರಾಧಿಕಾರವು, ನಿಗದಿಪಡಿಸಬಹುದಾದಂತಹ ಒಂದು ಪ್ರಾಥಮಿಕ ವಿಚಾರಣೆಯನ್ನು ನಡೆಸುವುದು ಅಥವಾ ನಡೆಸುವಂತೆ ಮಾಡಿದ ನಂತರ, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆ ರೀತಿ ನೀಡುವ ತಾತ್ಕಾಲಿಕ ನೋಂದಣಿ ಪ್ರಮಾಣಪತ್ರಕ್ಕೆ ಹನ್ನೆರಡು ತಿಂಗಳುಗಳ ವರೆಗೆ ಸಿಂಧುತ್ವವಿರುವುದಾಗಿದೆ. ಅರ್ಜಿದಾರನ ಲಿಖಿತಮುಖೇನವಿರುವ ಅರ್ಜಿಯ ಮೇಲೆ, ಪ್ರಾಧಿಕಾರಕ್ಕೆ ಈ ಕಾಲಾವಧಿಯನ್ನು ಆರು ತಿಂಗಳಿಗೆ ಮತ್ತೂ ವಿಸ್ತರಿಸಿ ನೀಡಬಹುದಾಗಿದೆ. ನೋಂದಣಿಯ ಕಾಲಾವಧಿಯನ್ನು ವಿಸ್ತರಿಸಿ ನೀಡುವುದಕ್ಕೆ ಸಂಬಂಧಿಸಿದ ತೀರ್ಮಾನವನ್ನು ಅರ್ಜಿಯ ದಿನಾಂಕದಿಂದ ಒಂದು ತಿಂಗಳಿನೊಳಗೆ ಪ್ರಾಧಿಕಾರವು ಅರ್ಜಿದಾರನಿಗೆ ತಿಳಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

6

(5) ಅರ್ಜಿದಾರನು ಹೊಸತಾಗಿ ಸ್ಥಾಪಿಸುವ ಸೆಮನ್ ಸ್ಟೇಷನ್ ಅಲ್ಲದಿದ್ದರೆ ಅಸ್ತಿತ್ವದಲ್ಲಿರುವ ಸೆಮನ್ ಸ್ಟೇಷನಿಗೆ ನೋಂದಣಿ ಪ್ರಮಾಣಪತ್ರವು ಲಭಿಸುವುದಕ್ಕಾಗಿ ತಾತ್ಕಾಲಿಕ ನೋಂದಣಿ ಪ್ರಮಾಣಪತ್ರದ ಕಾಲಾವಧಿಯಾದ ಹನ್ನೆರಡು ತಿಂಗಳಿನೊಳಗೆ, ಅಥವಾ (4)ನೇ ಉಪ-ವಿಭಾಗದ ಪ್ರಕಾರ ವಿಸ್ತರಿಸಿದ ಕಾಲಾವಧಿಯಾದ ನಂತರದ ಆರು ತಿಂಗಳಿನೊಳಗೆ ಅಂತಹ ಸೆಮನ್ ಸ್ಟೇಷನ್‌ನಲ್ಲಿ ತಪಾಸಣೆ ನಡೆಸುವುದಕ್ಕಾಗಿ, ಪ್ರಾಧಿಕಾರಕ್ಕೆ ಲಿಖಿತಮುಖೇನ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ಲಭಿಸಿದ ಕೂಡಲೇ ಅಂತಹ ತಪಾಸಣೆಗಾಗಿ ಪ್ರಾಧಿಕಾರವು ಕನ್ಸಲ್ಟೇಟಿವ್ ಪಾನಲ್‌ನಿಂದ ತಜ್ಞರ ಸಮಿತಿಯನ್ನು ಕಳುಹಿಸತಕ್ಕದ್ದು.

(6) ತಾತ್ಕಾಲಿಕ ನೋಂದಣಿ ಸರ್ಟಿಫಿಕೇಟ್ ನೀಡಿದ ಹೊಸ ಸೆಮನ್ ಸ್ಟೇಷನ್ ಅಲ್ಲದಿದ್ದರೆ ಕಾರ್ಯನಿರ್ವಹಿಸುತ್ತಿರುವ ಸೆಮನ್ ಸ್ಟೇಷನ್‌ನಲ್ಲಿ ಈ ಕೆಳಗಿನ ಸೌಲಭ್ಯಗಳು ಉಂಟೆಂದು/ಷರತ್ತುಗಳನ್ನು ಪಾಲಿಸುತ್ತಿದೆಯೆಂದು ಪ್ರಾಧಿಕಾರಕ್ಕೆ ಮನದಟ್ಟಾಗುವುದಾದಲ್ಲಿ, ಸೆಮನ್ ಸ್ಟೇಷನಿನ ಹೆಸರು ಮತ್ತು ವಿಳಾಸ, ರೆಜಿಸ್ಟ್ರೇಷನ್ ನಂಬ್ರ, ಬೀಜ ಉತ್ಪಾದನೆಗೆ ಉಪಯೋಗಿಸಬೇಕಾದ ಪ್ರಮಾಣೀಕರಿಸಿದ ಬೀಜದ ಎತ್ತಿನ ವಿಶಿಷ್ಟ ಗುರುತಿನ ಸಂಖ್ಯೆ, ಸೆಮನ್ ಸ್ಟೇಷನಿನ ಜವಾಬ್ದಾರಿಯಿರುವ ವ್ಯಕ್ತಿಯ ಹೆಸರು, ಅಲ್ಲದೆ ಪ್ರಾಧಿಕಾರವು ಯುಕ್ತವೆಂದು ಭಾವಿಸುವಂತಹ ಇತರ ಷರತ್ತುಗಳನ್ನು ಸ್ಪಷ್ಟವಾಗಿ ದಾಖಲಿಸಿರುವ ನಿಗದಿಪಡಿಸಿದಂತಹ ಮಾದರಿಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ಆದಕ್ಕೆ ನೀಡತಕ್ಕದ್ದು, ಆದೇನೆಂದರೆ:—

(ಎ) ಸೆಮನ್ ಸ್ಟೇಷನುಗಳಲ್ಲಿ,—

(i) ಬೀಜದ ಎತ್ತುಗಳನ್ನು ಮೇಲ್ನೋಟಕ್ಕಾಗಿ ಕಟ್ಟಿಹಾಕಲು ಪ್ರಾಧಿಕಾರ ಅಲ್ಲದಿದ್ದರೆ ಭಾರತ ಸರಕಾರವು ನಿರ್ದಿಷ್ಟಪಡಿಸುವ ರೀತಿಯಲ್ಲಿರುವ ಸ್ಥಳ ಸೌಕರ್ಯದ ಲಭ್ಯತೆಯಿರತಕ್ಕದ್ದು;

(ii) ಬೀಜದ ಎತ್ತುಗಳನ್ನು ಸಾಕುವುದಕ್ಕೆ ಮತ್ತು ಪಾಲಿಸುವುದಕ್ಕೆ, ಬೀಜ ಸಂಗ್ರಹಣೆ, ವೀರ್ಯಾಣುಗಳ ಪ್ರೊಸೆಸಿಂಗ್, ಗುಣಮಟ್ಟ ನಿಯಂತ್ರಣ, ಶೇಖರಣೆ, ವಿತರಣೆ, ಕ್ವಾರಂಟೈನ್ ಎಂಬವುಗಳಿಗೆ ಪ್ರಾಧಿಕಾರ ಅಲ್ಲದಿದ್ದರೆ ಭಾರತ ಸರಕಾರವು ನಿರ್ದಿಷ್ಟಪಡಿಸುವ ರೀತಿಯಲ್ಲಿರುವ ಸ್ಥಳ ಸೌಕರ್ಯದ ಲಭ್ಯತೆಯಿರತಕ್ಕದ್ದು;

(iii) ಪ್ರಾಧಿಕಾರ ಅಲ್ಲದಿದ್ದರೆ ಭಾರತ ಸರಕಾರವು ನಿರ್ದಿಷ್ಟಪಡಿಸುವ ರೀತಿಯಲ್ಲಿ ವೀರ್ಯಾಣುಗಳನ್ನು ಶೇಖರಿಸಲು ಸ್ಥಳ ಸೌಕರ್ಯದ ಲಭ್ಯತೆಯಿರತಕ್ಕದ್ದು;

(ಬ) ಸೆಮನ್ ಸ್ಟೇಷನ್‌ನಲ್ಲಿ ಬೀಜ ಉತ್ಪಾದನೆಗೆ ಉಪಯೋಗಿಸುವ ಎಲ್ಲಾ ಬೀಜದ ಎತ್ತುಗಳೂ,—

(i) (ಎ) ಕ್ವಾರಂಟೈನ್ ಸ್ಟೇಷನ್‌ಗೆ ತರುವುದಕ್ಕಿಂತ ಮುಂಚಿತವಾಗಿಯೂ;

(ಬಿ) ಮೇಲ್ನೋಟಕ್ಕಾಗಿ ಕ್ವಾರಂಟೈನ್ ಸ್ಟೇಷನ್‌ನಲ್ಲಿ ಕಟ್ಟಿಹಾಕಿದ ಕಾಲಾವಧಿಯಲ್ಲಿಯೂ;

(ಸಿ) ಸಾಕಿದ್ದ ಸ್ಥಳದಲ್ಲಿಯೂ;

(ಡಿ) ಸೆಮನ್ ಸ್ಟೇಷನ್‌ನಲ್ಲಿಯೂ;

ಪ್ರಾಧಿಕಾರ ಅಲ್ಲದಿದ್ದರೆ ಭಾರತ ಸರಕಾರವು ನಿರ್ದಿಷ್ಟಪಡಿಸಿದಂತಹ ಸ್ಕ್ರೀನಿಂಗ್ ಟೆಸ್ಟುಗಳಲ್ಲಿ ರೋಗ ಮುಕ್ತವಾಗಿರತಕ್ಕದ್ದು,

(ii) ಸಂತಾನೋತ್ಪತ್ತಿಯ ಧೋರಣೆಯಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರವಿರುವ ಅನುಮತಿಸಲಾದ ಕುಲಗಳ ವರ್ಗ ವೈಶಿಷ್ಟ್ಯಗಳೊಂದಿಗೆ ಹೊಂದುವುದು ಮತ್ತು ಪ್ರಾಧಿಕಾರ ಅಥವಾ ಭಾರತ ಸರಕಾರ ಸ್ಪಷ್ಟಪಡಿಸಿರುವುದು ಹಾಗೂ ಕಾಲಾಕಾಲಗಳಿಂದ ಪರಿಷ್ಕರಿಸಿರುವುದು ಮತ್ತು ಅಧಿಸೂಚಿಸಿರುವುದು ಆದ ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ, ವಿವಿಧ ಸ್ವಭಾವ ವೈಶಿಷ್ಟ್ಯಗಳಲ್ಲಿ ಕನಿಷ್ಟ ಮಾನದಂಡಗಳನ್ನಾದರೂ ಪಾಲಿಸತಕ್ಕದ್ದು;

(ಸಿ) ವೀರ್ಯಾಣುಗಳನ್ನು ಉತ್ಪಾದಿಸುವುದಕ್ಕೆ ಅಥವಾ ಶೇಖರಿಸುವುದಕ್ಕೆ ಅಥವಾ ಮಾರಾಟಕ್ಕೆ ಅಥವಾ ವಿತರಣೆಗೆ ಅಥವಾ ಕೃತಕ ಗರ್ಭಧಾರಣೆಗಾಗಿ ವಿತರಣೆ ಮಾಡುವುದಕ್ಕಾಗಿ ಸಾಕುವ ಬೀಜದ ಎತ್ತುಗಳ ನಿಖರವಾದ ವಿಶದಾಂಶಗಳನ್ನು ನಿಗದಿಪಡಿಸಬಹುದಾದ ರೀತಿಯಲ್ಲಿ ಸೆಮನ್ ಸ್ಟೇಷನುಗಳಲ್ಲಿ ಕಾಯ್ದಿರಿಸತಕ್ಕದ್ದು.

(7) ಅರ್ಜಿದಾರನಿಗೆ ಹೇಳಲಿರುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶವನ್ನು ನೀಡುತಾ ಮತ್ತು ವಿಷಯಗಳನ್ನು ಬರೆದು ದಾಖಲಿಸಲು ಅವಕಾಶ ನೀಡಿದ ನಂತರ ಪ್ರಾಧಿಕಾರಕ್ಕೆ ನೋಂದಣಿ ಪ್ರಮಾಣಪತ್ರವನ್ನು ನೀಡುವುದು ಅಥವಾ ನಿರಾಕರಿಸುವುದು ಮಾಡಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

(8) ನೋಂದಣಿ ಪ್ರಮಾಣಪತ್ರದಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಪಾಲಿಸಲಾಗುತ್ತಿದೆಯೆಂದು ಖಾತ್ರಿಪಡಿಸುವುದಕ್ಕಾಗಿ ಪ್ರಾಧಿಕಾರಕ್ಕೆ ತಜ್ಞರ ಸಮಿತಿಯನ್ನು ಸೆಮನ್ ಸ್ಟೇಷನನ್ನು ಪರಿಶೀಲಿಸುವುದಕ್ಕಾಗಿ ಅಗತ್ಯಕ್ಕನುಸರಿಸಿ ಕಳುಹಿಸಬಹುದಾಗಿದೆ. ವರ್ಷಂಪ್ರತಿ ಕನಿಷ್ಟ ಒಂದು ಬಾರಿಯಾದರೂ ಆ ರೀತಿಯಲ್ಲಿ ಪರಿಶೀಲನೆಯನ್ನು ಮಾಡತಕ್ಕದ್ದು.

10. ನೋಂದಣಿ ಪ್ರಮಾಣಪತ್ರದ ಕಾಲಾವಧಿ ಮತ್ತು ನವೀಕರಣ.—(1) 9ನೇ ವಿಭಾಗದ (7)ನೇ ಉಪ-ವಿಭಾಗದ ಪ್ರಕಾರ ನೀಡುವ ನೋಂದಣಿ ಪ್ರಮಾಣಪತ್ರಕ್ಕೆ ಅದನ್ನು ನೀಡಿದ ದಿನಾಂಕದಿಂದ ಎರಡು ವರ್ಷಕ್ಕೆ ಸಿಂಧುತ್ವವಿರುವುದಾಗಿದೆ.

(2) ನೋಂದಣಿ ಪ್ರಮಾಣಪತ್ರವನ್ನು ನವೀಕರಿಸುವುದಕ್ಕಾಗಿ ನೋಂದಣಿ ಪ್ರಮಾಣಪತ್ರವು ಸಮಾಪ್ತಿಯಾಗುವುದಕ್ಕೆ ಮೂರು ತಿಂಗಳು ಮುಂಚಿತವಾಗಿ ನಿಗದಿಪಡಿಸಬಹುದಾದ ದರದಲ್ಲಿನ ಶುಲ್ಕದೊಂದಿಗೆ ಪ್ರಾಧಿಕಾರಕ್ಕೆ ಅರ್ಜಿಸಲ್ಲಿಸತಕ್ಕದ್ದು. ನೋಂದಣಿ ಪ್ರಮಾಣಪತ್ರವನ್ನು ನೀಡುವುದಕ್ಕೆ ಸಂಬಂಧಿಸಿ 9ನೇ ವಿಭಾಗದ (6)ನೇ ಉಪ-ವಿಭಾಗದಲ್ಲಿ ಹೇಳಿರುವ ಸೌಲಭ್ಯಗಳುಂಟೆಂದು ಮತ್ತು ಷರತ್ತುಗಳನ್ನು ಪಾಲಿಸಲಾಗುತ್ತಿದೆಯೆಂದು ಪ್ರಾಧಿಕಾರಕ್ಕೆ ಮನದಟ್ಟಾಗುವುದಾದಲ್ಲಿ, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳಿನೊಳಗೆ, ನೋಂದಣಿ ಪ್ರಮಾಣಪತ್ರವನ್ನು ಎರಡು ವರ್ಷಕ್ಕೆ ಮತ್ತೂ ನವೀಕರಿಸಿ ನೀಡತಕ್ಕದ್ದು. ನೋಂದಣಿ ಪ್ರಮಾಣಪತ್ರವನ್ನು ನವೀಕರಿಸುವುದಕ್ಕಾಗಿ ನೀಡಿದ ಅರ್ಜಿಯ ಮೇಲೆ ಮೂರು ತಿಂಗಳಿನೊಳಗೆ ಇತರ ರೀತಿಯಲ್ಲಿ ಮಾಹಿತಿ ನೀಡದಿದ್ದಲ್ಲಿ ನೋಂದಣಿಯನ್ನು ನವೀಕರಿಸಿ ನೀಡಿರುವುದಾಗಿ ಭಾವಿಸತಕ್ಕದ್ದು.

(3) ವೀರ್ಯಾಣುಗಳ ಉತ್ಪಾದನೆಗಿರುವ ಅರ್ಹತಾ ಮಾನದಂಡಗಳನ್ನು ಪಾಲಿಸುವ ಹೊಸ ಬೀಜದ ಎತ್ತುಗಳನ್ನು, ಪ್ರಾಧಿಕಾರದ ಪೂರ್ವಾನುಮತಿ ಮತ್ತು ಅವಶ್ಯಕವಾದ ಪ್ರಮಾಣೀಕರಣ ಇಲ್ಲದೆ ಸೆಮನ್ ಸ್ಟೇಷನುಗಳಿಗೆ ಪ್ರವೇಶಿಸುವಂತೆ ಅಥವಾ ಉಪಯೋಗಿಸುವಂತೆ ಮಾಡತಕ್ಕದ್ದಲ್ಲ. ಪ್ರಮಾಣೀಕರಿಸಿದ ಬೀಜದ ಎತ್ತುಗಳ ಮರಣ, ವಿಲೇವಾರಿ ಎಂಬವುಗಳನ್ನು ಯಥಾವೇಳೆಯಲ್ಲಿ ಪ್ರಾಧಿಕಾರಕ್ಕೆ ಲಿಖಿತ ಮುಖೇನ ತಿಳಿಸತಕ್ಕದ್ದು.

11. ಸೆಮನ್ ಬ್ಯಾಂಕುಗಳ ನೋಂದಣಿ.—(1) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಮತ್ತು ದಿನಾಂಕದಿಂದ ಯಾವುದಾದರೂ ವ್ಯಕ್ತಿ, ಫರ್ಮ್, ಪರಿಮಿತಿ ಬಾದ್ಯತೆ ಪಾಲುಗಾರಿಕೆ (ಲಿಮಿಟೆಡ್ ಲಯಬಿಲಿಟಿ ಪಾರ್ಟನರ್ ಶಿಪ್), ಕಂಪೆನಿ, ಪ್ರೊಡ್ಯೂಸರ್ ಕಂಪೆನಿ, ಸಂಸ್ಥೆ, ಸರಕಾರೇತರ ಸಂಘಟನೆ, ಜಾನುವಾರು ಬ್ರೀಡರ್ಸ್ ಅಸೋಸಿಯೇಶನ್, ಟ್ರಸ್ಟ್, ಕೇಂದ್ರ/ರಾಜ್ಯ ಸರಕಾರಿ ಇಲಾಖೆ, ಸಹಕಾರಿ ಸಂಘ, ಇತರ ಯಾವುದಾದರೂ ಏಜೆನ್ಸಿ ಎಂಬವುಗಳು ಪ್ರಾಧಿಕಾರದಿಂದ ನೋಂದಣಿ ಪ್ರಮಾಣಪತ್ರವನ್ನು ಪಡೆಯದೆ ಸೆಮನ್ ಬ್ಯಾಂಕನ್ನು ಸ್ಥಾಪಿಸುವುದು ಅಥವಾ ಕಾರ್ಯಗತಗೊಳಿಸುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ನೋಂದಣಿಗೆ ಸಂಬಂಧಿಸಿದ ವಿಷಯಗಳು ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಆಗಿರುವುದಾಗಿದೆ.

12. ಎ.ಐ. ಕೇಂದ್ರಗಳ ನೋಂದಣಿ.—(1) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಮತ್ತು ದಿನಾಂಕದಿಂದ ಯಾವುದಾದರೂ ವ್ಯಕ್ತಿ, ಫರ್ಮ್, ಪರಿಮಿತಿ ಬಾದ್ಯತೆ ಪಾಲುಗಾರಿಕೆ (ಲಿಮಿಟೆಡ್ ಲಯಬಿಲಿಟಿ ಪಾರ್ಟನರ್ ಶಿಪ್), ಕಂಪೆನಿ, ಪ್ರೊಡ್ಯೂಸರ್ ಕಂಪೆನಿ, ಸಂಸ್ಥೆ, ಸರಕಾರೇತರ ಸಂಘಟನೆ, ಜಾನುವಾರು ಬ್ರೀಡರ್ಸ್ ಅಸೋಸಿಯೇಶನ್, ಟ್ರಸ್ಟ್, ಸಹಕಾರಿ ಸಂಘ, ಇತರ ಯಾವುದಾದರೂ ಏಜೆನ್ಸಿ ಎಂಬವುಗಳು ಪ್ರಾಧಿಕಾರದಿಂದ ನೋಂದಣಿ ಪ್ರಮಾಣಪತ್ರವನ್ನು ಪಡೆಯದೆ ಎ.ಐ ಕೇಂದ್ರಗಳನ್ನು ಸ್ಥಾಪಿಸುವುದು ಅಥವಾ ಕಾರ್ಯಗತಗೊಳಿಸುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ, ನೋಂದಣಿಗೆ ಸಂಬಂಧಿಸಿದ ವಿಷಯಗಳು ನಿಗದಿಪಡಿಸಿದ ರೀತಿಯಲ್ಲಿ ಆಗಿರುವುದಾಗಿದೆ.

ವಿವರಣೆ.—ಈ ವಿಭಾಗದ ಯಾವುದೂ ಕೂಡ ಸರಕಾರಿ ಪಶುಸಂಗೋಪನ ಇಲಾಖೆಯ ಅಡಿಯಲ್ಲಿರುವ ಸಂಸ್ಥೆಗಳಿಗೆ ಅನ್ವಯವಾಗುವುದಲ್ಲ.

13. ಬೀಜದ ಎತ್ತುಗಳ ಪ್ರಮಾಣೀಕರಣ—(1) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಮತ್ತು ದಿನಾಂಕದಿಂದ ಸೆಮನ್ ಸ್ಟೇಷನುಗಳು, ಪ್ರಾಧಿಕಾರವು ಪ್ರಮಾಣೀಕರಿಸಿದ ಬೀಜದ ಎತ್ತುಗಳಿಂದಲ್ಲದೆ ಬೀಜ ಉತ್ಪಾದನೆಯನ್ನು ಮಾಡತಕ್ಕದ್ದಲ್ಲ.

(2) ಬೀಜದ ಎತ್ತುಗಳ ಪ್ರಮಾಣೀಕರಣ, ವಿಶಿಷ್ಟ ಗುರುತು ನಂಬ್ರ ನೀಡುವಿಕೆ ಮತ್ತು ಪ್ರದರ್ಶನವು ನಿಗದಿಪಡಿಸಬಹುದಾದ ರೀತಿಯಲ್ಲಿ ಆಗಿರತಕ್ಕದ್ದು.

14. ಎ.ಐ. ಟೆಕ್ನೀಶಿಯನ್‌ರ ಪ್ರಮಾಣೀಕರಣ.—ಸರಕಾರವು ನಿರ್ದೇಶಿಸುವಂತಹ ರೀತಿಯಲ್ಲಿ ಮತ್ತು ಅಂತಹ ಷರತ್ತುಗಳಿಗೆ ವಿಧೇಯವಾಗಿ, ಕೃತಕ ಗರ್ಭಧಾರಣೆಯನ್ನು ನಡೆಸುವ ಟೆಕ್ನೀಶಿಯನ್‌ನನ್ನು ಪ್ರಾಧಿಕಾರವು ಪ್ರಮಾಣೀಕರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

8

15. ವೀರ್ಯಾಣುಗಳ ಮಾರಾಟ, ಉಪಯೋಗ ಮುಂತಾದವುಗಳ ಕ್ರಮೀಕರಣ.—(1) ಪ್ರಾಧಿಕಾರವು ಅಧಿಕೃತಗೊಳಿಸಿದ ವ್ಯಕ್ತಿಗಳಲ್ಲದೆ ಬೇರೆ ಯಾರೂ ಸಹ ವೀರ್ಯಾಣುಗಳು/ಭ್ರೂಣವನ್ನು ಮಾರಾಟ ಮಾಡುವುದು, ವಿತರಿಸುವುದು, ದಾನ ಮಾಡುವುದು ಅಥವಾ ಹಸ್ತಾಂತರಿಸುವುದು ಮಾಡತಕ್ಕದ್ದಲ್ಲ.

(2) ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಷರತ್ತುಗಳಿಗೆ ವಿಧೇಯವಾಗಿ, ಪ್ರಾಧಿಕಾರವು ನೀಡುವ ಪೂರ್ವ ಅನುಮತಿಯಿಲ್ಲದೆ, ರಾಜ್ಯದ ಹೊರಗೆ ಉತ್ಪಾದಿಸುವ ವೀರ್ಯಾಣುಗಳು, ಭ್ರೂಣ ಎಂಬವುಗಳನ್ನು ಕೃತಕ ಗರ್ಭಧಾರಣೆಗಾಗಿ ರಾಜ್ಯದ ಒಳಗೆ ಮಾರಾಟ ಮಾಡುವುದು, ವಿತರಣೆ ಮಾಡುವುದು, ದಾನ ಮಾಡುವುದು ಅಥವಾ ಹಸ್ತಾಂತರಿಸುವುದು ಮಾಡತಕ್ಕದ್ದಲ್ಲ.

(3) ನಿಗದಿಪಡಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಷರತ್ತುಗಳಿಗೆ ವಿಧೇಯವಾಗಿ, ಪ್ರಾಧಿಕಾರವು ನೀಡುವ ಪೂರ್ವ ಅನುಮತಿಯಿಲ್ಲದೆ, ಕೃತಕ ಗರ್ಭಧಾರಣೆಗಾಗಿ ಅಥವಾ ಹಸ್ತಾಂತರಿಸುವುದಕ್ಕೆ ವೀರ್ಯಾಣುಗಳನ್ನು ಅಥವಾ ಭ್ರೂಣವನ್ನು ವಿದೇಶದಿಂದ ರಾಜ್ಯಕ್ಕೆ ಆಮದು ಮಾಡತಕ್ಕದ್ದಲ್ಲ.

(4) ಯಾವುದೇ ವ್ಯಕ್ತಿಯೂ ಅನಧಿಕೃತ ವೀರ್ಯಾಣುಗಳ ಉಪಯೋಗ, ಮಿಸ್‌ಬ್ರಾಂಡೆಡ್ ಬೀಜ, ಸಬ್ ಸ್ಟ್ಯಾಂಡರ್ಡ್ ಬೀಜ ಎಂಬವುಗಳ ಉತ್ಪಾದನೆ, ಸ್ವಾಧೀನದಲ್ಲಿರಿಸುವುದು, ವಿತರಣೆ, ಮಾರಾಟ, ಉಪಯೋಗ, ಯಾವುದೇ ರೀತಿಯ ಹಸ್ತಾಂತರ, ಆಮದು-ರಫ್ತು ಎಂಬವುಗಳನ್ನು ಮಾಡತಕ್ಕದ್ದಲ್ಲ.

16. ನೋಂದಣಿ ಪ್ರಮಾಣಪತ್ರದ ಅಸಲು ಪ್ರತಿ.—ಈ ಅಧಿನಿಯಮದ ಉಪಬಂಧಗಳ ಪ್ರಕಾರ ನೀಡಿದ ನೋಂದಣಿ ಪ್ರಮಾಣ ಪತ್ರವು ಅಲ್ಲದಿದ್ದರೆ ನವೀಕರಣ ಪ್ರಮಾಣಪತ್ರವು ಹಾಳಾಗಿದೆಯೆಂದು, ನಷ್ಟವಾಗಿರುವುದೆಂದು ಅಥವಾ ನಶಿಸಿದೆಯೆಂದು ಪ್ರಾಧಿಕಾರಕ್ಕೆ ಮನದಟ್ಟಾಗುವುದಾದಲ್ಲಿ, ನಿಗದಿಪಡಿಸಬಹುದಾದ ರೀತಿಯಲ್ಲಿನ ಶುಲ್ಕವನ್ನು ಪಾವತಿಸಿ ಅರ್ಜಿ ಸಲ್ಲಿಸುವುದಾದಲ್ಲಿ, ಅರ್ಜಿದಾರನಿಗೆ ಪ್ರಮಾಣಪತ್ರದ ಅಸಲು ಪ್ರತಿಯನ್ನು ನೀಡತಕ್ಕದ್ದಾಗಿದೆ.

17. ನೋಂದಣಿ ಪ್ರಮಾಣಪತ್ರದ ಅಸಿಂಧುತ್ವಗೊಳಿಸುವಿಕೆ.—ಪ್ರಾಧಿಕಾರಕ್ಕೆ, ಇದಕ್ಕೆ ಸಂಬಂಧಿಸಿ ಅದಕ್ಕೆ ಲಭಿಸಿದ ಉಲ್ಲೇಖದ ಮೇಲೆ ಅಥವಾ ದೂರಿನ ಮೇಲೆ ಅಲ್ಲದಿದ್ದರೆ ಪ್ರಾಧಿಕಾರವು ರೂಪೀಕರಿಸಿದ ತಜ್ಞರ ಸಮಿತಿಯ ತನಿಖೆಯ ವರದಿಯ ತಳಹದಿಯಲ್ಲಿ,—

(ಎ) ಒಂದು ಸೆಮನ್ ಸ್ಟೇಷನ್ ಈ ಅಧಿನಿಯಮದ ಅಡಿಯಲ್ಲಿರುವ ನೋಂದಣಿ ಪ್ರಮಾಣಪತ್ರವನ್ನು ಗಳಿಸಿರುವುದು ತಪ್ಪಾದ ಮಾಹಿತಿ ನೀಡಿ ಅಥವಾ ವಂಚನೆಯ ಮೂಲಕ ಆಗಿರುವುದೆಂದು; ಅಲ್ಲದಿದ್ದರೆ

(ಬಿ) ಈ ಅಧಿನಿಯಮದ ಪ್ರಕಾರದ ನೋಂದಣಿ ಪ್ರಮಾಣಪತ್ರವು ಸ್ವಾಧೀನದಲ್ಲಿರುವ ವ್ಯಕ್ತಿಯು, ಯುಕ್ತವಾದ ಕಾರಣಗಳಲ್ಲದೆ, ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ವಿಧೇಯವಾಗಿ ಆಗಿದೆಯೋ ಪ್ರಮಾಣಪತ್ರವನ್ನು ಪಡೆದಿರುವುದು, ಅವುಗಳನ್ನು ಪಾಲಿಸದಿರುವುದಾಗಿ; ಅಲ್ಲದಿದ್ದರೆ

(ಸಿ) ನೋಂದಣಿ ಪ್ರಮಾಣಪತ್ರವು ಸ್ವಾಧೀನದಲ್ಲಿರುವ ವ್ಯಕ್ತಿ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಯಾವುದಾದರೂ ಉಪಬಂಧಗಳನ್ನು ಉಲ್ಲಂಘಿಸಿರುವುದಾಗಿ, ಮನದಟ್ಟಾಗುವುದಾದಲ್ಲಿ, ಪ್ರಮಾಣಪತ್ರ ಸ್ವಾಧೀನದಲ್ಲಿರುವ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಪ್ರಕಾರ ಕೈಗೊಳ್ಳಬಹುದಾದ ಇದರ ಯಾವುದೇ ಕ್ರಮಕ್ಕೆ ಭಂಗವುಂಟಾಗದ ರೀತಿಯಲ್ಲಿ, ಆತನಿಗೆ ಕಾರಣವನ್ನು ತೋರಿಸಲು ಒಂದು ಅವಕಾಶವನ್ನು ನೀಡಿದ ನಂತರ,—

(i) ಈ ಅಧಿನಿಯಮದ ಪ್ರಕಾರ ಯಾವುದಾದರೂ ವ್ಯಕ್ತಿಗೆ, 9ನೇ ವಿಭಾಗದ ಅಡಿಯಲ್ಲಿ ನೋಂದಣಿ ಪ್ರಮಾಣಪತ್ರ ಅಥವಾ ನವೀಕರಿಸಿದ ಪ್ರಮಾಣ ಪತ್ರವನ್ನು ಅನುಮತಿಸುವ ಸಮಯದಲ್ಲಿ ಯಾವುದಾದರೂ ಷರತ್ತುಗಳನ್ನು ಹೊರಿಸಿರುವ ವಿಷಯದಲ್ಲಿ ಆ ವ್ಯಕ್ತಿಯು ಅಂತಹ ಷರತ್ತುಗಳನ್ನು ಪಾಲಿಸುವುದರಲ್ಲಿ ಲೋಪವುಂಟುಮಾಡಿದ್ದಲ್ಲಿ ನೋಂದಣಿ/ನವೀಕರಣ ಪ್ರಮಾಣಪತ್ರವನ್ನು ರದ್ದುಗೊಳಿಸುವುದು ಅಥವಾ, ನಿಗದಿಪಡಿಸಿದಂತಹ ಕ್ರಮಗಳನ್ನು ಸ್ವೀಕರಿಸುವುದು ಅಥವಾ;

(ii) ಪ್ರಮಾಣಪತ್ರವು ಸ್ವಾಧೀನದಲ್ಲಿರುವ ವ್ಯಕ್ತಿ ಕಾನೂನಿನ ಪ್ರಕಾರವಿರುವ ಎಲ್ಲಾ ಷರತ್ತುಗಳನ್ನು ಪ್ರಾಧಿಕಾರಕ್ಕೆ ಮನದಟ್ಟಾಗುವ ರೀತಿಯಲ್ಲಿ ಪಾಲಿಸುವವರೆಗೆ, ನೋಂದಣಿ/ನವೀಕರಣ ಪ್ರಮಾಣಪತ್ರವನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸುವುದು ಅಥವಾ;

(iii) ನೋಂದಣಿ ಪ್ರಮಾಣಪತ್ರವು ಸ್ವಾಧೀನದಲ್ಲಿರುವ ವ್ಯಕ್ತಿಯಿಂದ ಷರತ್ತುಗಳನ್ನು ಪಾಲಿಸುವೆನೆಂದು ಲಿಖಿತ ಮುಖೇನವಿರುವ ವಾಗ್ದಾನವನ್ನು ಬರೆದು ಪಡೆಯುವುದು ಮಾಡತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

9

18. ಅಪೀಲು—(1) ಈ ಅಧಿನಿಯಮದ ಉಪಬಂಧಗಳ ಪ್ರಕಾರ ನೋಂದಣಿ ಪ್ರಮಾಣಪತ್ರವನ್ನು ನೀಡಲು ಅಥವಾ ನವೀಕರಿಸಲು ಪ್ರಾಧಿಕಾರವು ನಿರಾಕರಿಸುವುದು ಅಥವಾ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸುವುದು ಅಥವಾ ತಾತ್ಕಾಲಿಕವಾಗಿ ಅಮಾನತುಗೊಳಿಸುವುದು ಮಾಡಿರುವುದರಿಂದಾಗಿ ಸಂಕಟ ಅನುಭವಿಸುವ ಯಾವುದೇ ವ್ಯಕ್ತಿಗೆ, ಅದಕ್ಕೆ ಸಂಬಂಧಿಸಿದ ಲಿಖಿತ ಸೂಚನೆ ಲಭಿಸಿದ ಮೂವತ್ತು ದಿವಸದೊಳಗೆ, ಅಪಲೇಟ್ ಪ್ರಾಧಿಕಾರದ ಸಮಕ್ಷದಲ್ಲಿ ಅಪೀಲನ್ನು ಸಲ್ಲಿಸಬಹುದಾಗಿದೆ. ರಾಜ್ಯದ ಪಶುಸಂಗೋಪನ ಇಲಾಖೆಯ ಕಾರ್ಯದರ್ಶಿಯವರು ಈ ಅಧಿನಿಯಮದ ಪ್ರಕಾರವಿರುವ ಅಪಲೇಟ್ ಪ್ರಾಧಿಕಾರ ಆಗಿರುವರು:

ಆದರೆ, ನಿಶ್ಚಿತ ಕಾಲಾವಧಿಯೊಳಗೆ ಅಪೀಲು ಸಮರ್ಪಿಸುವುದಕ್ಕೆ ಅಪೀಲುದಾರನಿಗೆ ಸಾಧ್ಯವಾಗದಿರುವುದಕ್ಕೆ ತಕ್ಕ ಕಾರಣವಿದೆಯೆಂದು ಅಪೀಲು ಪ್ರಾಧಿಕಾರಕ್ಕೆ ಮನದಟ್ಟಾಗುವುದಾದಲ್ಲಿ, (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸುವ ಕಾಲಾವಧಿಯಿಂದ ಮೂವತ್ತು ದಿವಸದ ವರೆಗಿರುವ ವಿಳಂಬಕ್ಕೆ ಕ್ಷಮಿಸಬಹುದಾಗಿದೆ.

(2) ಅಪೀಲುದಾರನಿಗೆ ಹೇಳಲಿಕ್ಕಿರುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶವನ್ನು ನೀಡಿದ ನಂತರ, ಅಪೀಲು ಪ್ರಾಧಿಕಾರವು, ಆದಷ್ಟು ಬೇಗನೆ, ಅಪೀಲು ಲಭಿಸಿದ ದಿನಾಂಕದಿಂದ ಗರಿಷ್ಟ ಮೂರು ತಿಂಗಳಿನೊಳಗೆ, ಅಪೀಲಿಗೆ ತೀರ್ಮಾನ ಕೈಗೊಳ್ಳತಕ್ಕದ್ದು.

ಅಧ್ಯಾಯ 4

ತಪಾಸಣೆ, ವಿಚಾರಣೆ, ವಶಪಡಿಸುವಿಕೆ ಮುಂತಾದವುಗಳಿಗಿರುವ ಅಧಿಕಾರ

19. ತಪಾಸಣೆ, ವಿಚಾರಣೆ, ವಶಪಡಿಸುವಿಕೆ ಮುಂತಾದವುಗಳಿಗಿರುವ ಅಧಿಕಾರ.—(1) ಈ ಅಧಿನಿಯಮದ ಮತ್ತು ಆದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿನ ಉಪಬಂಧಗಳನ್ನು ಮತ್ತು ನೋಂದಣಿ ಪ್ರಮಾಣ ಪತ್ರದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸಲಾಗುತ್ತಿದೆಯೇ ಎಂದು ಖಾತ್ರಿಪಡಿಸಲು ಅದಲ್ಲದೆ ತಪಾಸಣೆಗಾಗಿ ಅಥವಾ ತನಿಖೆಗಾಗಿ ಪ್ರಾಧಿಕಾರಕ್ಕೆ ಅಥವಾ ಪ್ರಾಧಿಕಾರವು ಜವಾಬ್ದಾರಿಗೊಳಿಸುವ ತಜ್ಞ ಸಮಿತಿ ಸದಸ್ಯರಿಗೆ ಸೆಮನ್ ಸ್ಟೇಷನ್‌ಗಳಲ್ಲಿ ತಪಾಸಣೆ ಅಥವಾ ವಿಚಾರಣೆ ನಡೆಸುವುದಕ್ಕೆ ಹಾಗೂ ನಡೆಸುವಂತೆ ಮಾಡುವುದಕ್ಕೆ ಅಧಿಕಾರ ಇರುವುದಾಗಿದೆ.

(2) ಯಾವುದಾದರೂ ಪರಿಸರದಲ್ಲಿ, ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾದ ಚಟುವಟಿಕೆಗಳು ನಡೆಯುತ್ತಿದೆಯೇ ಅಥವಾ, ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಅನುಸಾರವಲ್ಲದೆ ಹಾಗೂ ನೋಂದಣಿ ಪ್ರಮಾಣಪತ್ರದಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಪಾಲಿಸದೆ ಕಾರ್ಯವೆಸಗುತ್ತಿದೆಯೆಂದು ಪ್ರಾಧಿಕಾರಕ್ಕೆ ಅಥವಾ ಪ್ರಾಧಿಕಾರವು ಜವಾಬ್ದಾರಿಗೊಳಿಸುವ ತಜ್ಞ ಸಮಿತಿಯ ಸದಸ್ಯರಿಗೆ ಯುಕ್ತವಾಗಿ ಮನದಟ್ಟಾಗುವುದಾದಲ್ಲಿ, ಆ ಪ್ರದೇಶಕ್ಕೆ ಪ್ರವೇಶಿಸಿ ಸ್ಯಾಂಪಲ್‌ಗಳನ್ನು ತೆಗೆಯುವುದು ಅಥವಾ ತಪಾಸಣೆ, ಶೋಧನೆ ಎಂಬವುಗಳನ್ನು ನಡೆಸುವುದು ಅಥವಾ ನಡೆಯುವಂತೆ ಮಾಡುವುದು ಮಾಡತಕ್ಕದ್ದಾಗಿದೆ.

(3) ಸೆಮನ್ ಸ್ಟೇಷನಿನ ಪರಿಸರದಿಂದ ಬೀಜ, ರಕ್ತ ಅಲ್ಲದಿದ್ದರೆ ವೀರ್ಯಾಣುಗಳನ್ನು ಉತ್ಪಾದಿಸಲು ಉಪಯೋಗಿಸುವ ಇತರ ವಸ್ತುಗಳು ಎಂಬವುಗಳ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಅಂಗೀಕೃತ ಲ್ಯಾಬೋರೇಟರಿಯಲ್ಲಿ ಆ ರೀತಿಯ ಸ್ಯಾಂಪಲ್‌ಗಳನ್ನು ವಿಶ್ಲೇಷಣೆ ಮಾಡಿಸಿ ಮತ್ತು ಅಂಗೀಕಾರವಿಲ್ಲದ ಬೀಜದ ಎತ್ತಿನಿಂದಿರುವ ವೀರ್ಯಾಣುಗಳ ಸಂಗ್ರಹವನ್ನು ಕೂಡಲೇ ನಾಶಮಾಡುವುದು ಹಾಗು ವೀರ್ಯಾಣುಗಳ ಸಂಸ್ಕರಣೆಗಿರುವ ಉಪಕರಣಗಳನ್ನು ಮೊಹರು ಹಾಕಿ ವಶಪಡಿಸುವುದು ಮಾಡತಕ್ಕದ್ದಾಗಿದೆ.

(4) ವಿಚಾರಣೆ, ವಶಪಡಿಸುವಿಕೆ ಮುಂತಾದವುಗಳಿಗೆ ಸಂಬಂಧಿಸಿ 2023ರ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (2023ರ 46ನೇ ಕೇಂದ್ರ ಅಧಿನಿಯಮ)ಯ ಸಂಬಂಧಪಟ್ಟ ಉಪಬಂಧಗಳು, ಈ ವಿಭಾಗದ (1) ಮತ್ತು (2) ಮತ್ತು (3)ನೇ ಉಪ-ವಿಭಾಗಗಳ ಪ್ರಕಾರವಿರುವ ವಿಚಾರಣೆ, ವಶಪಡಿಸುವಿಕೆ ಮುಂತಾದವುಗಳಿಗೆ ಅನ್ವಯವಾಗುವುದಾಗಿದೆ.

20. ದಾಖಲೆಗಳ ಸಂರಕ್ಷಣೆ ಹಾಗೂ ನಿವೇದನೆ.—(1) ಈ ಅಧಿನಿಯಮದ ಪ್ರಕಾರ ನೋಂದಣಿ ಪ್ರಮಾಣಪತ್ರವನ್ನು ಪಡೆದ ಪ್ರತಿಯೊಬ್ಬ ವ್ಯಕ್ತಿಯೂ, ತನ್ನ ಬಿಸಿನೆಸ್ ವ್ಯವಹಾರಗಳಿಗೆ ಸಂಬಂಧಪಟ್ಟ ರೆಜಿಸ್ಟರುಗಳನ್ನು, ಅಕೌಂಟುಗಳನ್ನು ಮತ್ತು ದಾಖಲೆಗಳನ್ನು ಪ್ರಾಧಿಕಾರವು ನಿಗದಿಪಡಿಸಿದ ರೀತಿಯಲ್ಲಿ ಕಾಯ್ದಿರಿಸತಕ್ಕದ್ದು.

(2) ಒಂದು ಸೆಮನ್ ಸ್ಟೇಷನ್/ಸೆಮನ್ ಬ್ಯಾಂಕ್ ಅಲ್ಲದಿದ್ದರೆ ಎ. ಐ. ಕೇಂದ್ರದ ನೋಂದಣಿ ಪ್ರಮಾಣಪತ್ರವು ಸ್ವಾಧೀನದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ, ಸೆಮನ್ ಸ್ಟೇಷನ್/ಸೆಮನ್ ಬ್ಯಾಂಕ್ ಅಲ್ಲದಿದ್ದರೆ ಎ. ಐ. ಕೇಂದ್ರಕ್ಕೆ ಸಂಬಂಧಿಸಿದ ವಾರ್ಷಿಕ ರಿಪೋರ್ಟ್ ಮತ್ತು ಅದರ ಅಸಲು ಪ್ರತಿಯನ್ನು ನಿಗದಿಪಡಿಸಬಹುದಾದಂತಹ ಮಾದರಿಯಲ್ಲಿ ಮತ್ತು ಸಮಯದಲ್ಲಿ ಪ್ರಾಧಿಕಾರಕ್ಕೆ ಸಮರ್ಪಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

(3) ವಿತರಣೆಗಾಗಿ ಸಂಗ್ರಹಿಸಿರುವ ವೀರ್ಯಾಣುಗಳ ಮತ್ತು ಪ್ರಮಾಣೀಕರಣ ಅಗತ್ಯವಿರುವ ಹೊಸ ಬೀಜದ ಎತ್ತುಗಳ ವಿಶದಾಂಶಗಳನ್ನು ನಿಗದಿಪಡಿಸಿದ ಮಾದರಿಯಲ್ಲಿ ಮತ್ತು ಸಮಯದಲ್ಲಿ ವರದಿಯಾಗಿ ಪ್ರಾಧಿಕಾರಕ್ಕೆ ಸಮರ್ಪಿಸತಕ್ಕದ್ದು.

21. ನಿರ್ದೇಶಗಳನ್ನು ನೀಡಲಿಕ್ಕಿರುವ ಅಧಿಕಾರ.—ಈ ಅಧಿನಿಯಮದ ಮತ್ತು ನಿಯಮಗಳಲ್ಲಿನ ಉಪಬಂಧಗಳಿಗೆ ಹಾಗೂ ಇದಕ್ಕೆ ಸಂಬಂಧಿಸಿ ಸರಕಾರವು ನೀಡುವ ನಿರ್ದೇಶಗಳಿಗೆ ವಿಧೇಯವಾಗಿ, ಪ್ರಾಧಿಕಾರಕ್ಕೆ ಅದರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ, ಯಾವುದಾದರೂ ವ್ಯಕ್ತಿಗೆ, ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಲಿಖಿತಮುಖೇನ ಯಾವುದೇ ನಿರ್ದೇಶವನ್ನು ನೀಡಬಹುದಾಗಿದೆ ಹಾಗೂ ಆ ರೀತಿಯ ವ್ಯಕ್ತಿ, ಅಧಿಕಾರಿ, ಪ್ರಾಧಿಕಾರವು, ಆಯಾಯ ವಿಷಯದಂತೆ, ಅದನ್ನು ಪಾಲಿಸಲು ಹೊಣೆಗಾರರಾಗಿರುವರು.

22. ನ್ಯಾಯಾಲಯದಲ್ಲಿ ದೂರನ್ನು ನೀಡಲಿಕ್ಕಿರುವ ಅಧಿಕಾರ.—ಯಾವುದಾದರೂ ವ್ಯಕ್ತಿ, ಸಂಸ್ಥೆ, ಕಂಪೆನಿ ಅಲ್ಲದಿದ್ದರೆ ಸರಕಾರೇತರ ಸಂಘಟನೆಯು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿನ ಉಪಬಂಧಗಳಿಗೆ ವಿರುದ್ಧವಾಗಿ ಜಾನುವಾರು ಸಂತಾನೋತ್ಪತ್ತಿಯ ಚಟುವಟಿಕೆಗಳಲ್ಲಿ ಅಲ್ಲದಿದ್ದರೆ ಬೀಜ/ಭ್ರೂಣದ ವ್ಯಾಪಾರ, ವಿತರಣೆ ಎಂಬವುಗಳಲ್ಲಿ ನಿರತವಾಗಿದೆ ಎಂದು ಪ್ರಾಧಿಕಾರಕ್ಕೆ ಮನದಟ್ಟಾಗುವುದಾದಲ್ಲಿ, ಆತನ ವಿರುದ್ಧವಾಗಿ ಪ್ರಾಧಿಕಾರಕ್ಕೆ ಅಥವಾ ಪ್ರಾಧಿಕಾರವು ಅಧಿಕೃತಗೊಳಿಸುವ ಯಾವುದಾದರೂ ಅಧಿಕಾರಿಗೆ ಜುಡೀಷ್ಯಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ನ್ಯಾಯಾಲಯದಲ್ಲಿ ದೂರನ್ನು ನೀಡಬಹುದಾಗಿದೆ.

23. ಶಿಕ್ಷೆಗಳು.—ಈ ಅಧಿನಿಯಮದ ಮತ್ತು ನಿಯಮಗಳಲ್ಲಿನ ಯಾವುದಾದರೂ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯೂ, ಅಪರಾಧ ನಿರ್ಣಯತಿಯ ಮೇಲೆ ಒಂದು ಲಕ್ಷ ರೂಪಾಯಿಯ ವರೆಗಿನ ಜುಲ್ಮಾನೆ ಅಲ್ಲದಿದ್ದರೆ ಒಂದು ವರ್ಷದ ವರೆಗಿನ ಕಾರಾಗೃಹವಾಸ ಅಲ್ಲದಿದ್ದರೆ ಎರಡನ್ನೂ ವಿಧಿಸಿ ಶಿಕ್ಷಿಸತಕ್ಕದ್ದಾಗಿದೆ.

24. ಅಪರಾಧಗಳ ಮೇಲೆ ಕ್ರಮ ಕೈಗೊಳ್ಳುವಿಕೆ—(1) ಪ್ರಾಧಿಕಾರದ ಅಲ್ಲದಿದ್ದರೆ ಪ್ರಾಧಿಕಾರವು ಇದಕ್ಕಾಗಿ ಅಧಿಕೃತಗೊಳಿಸಿದ ಯಾವುದಾದರೂ ಅಧಿಕಾರಿಯ ಲಿಖಿತ ಮುಖೇನವಿರುವ ದೂರಿನ ಮೇಲೆ ಅಲ್ಲದೆ, ಯಾವುದೇ ನ್ಯಾಯಾಲಯವೂ ಈ ಅಧಿನಿಯಮದ ಪ್ರಕಾರ ಶಿಕ್ಷಾರ್ಹವಾದ ಅಪರಾಧದ ಮೇಲೆ ಕ್ರಮ ಕೈಗೊಳ್ಳತಕ್ಕದ್ದಲ್ಲ.

(2) ಈ ಅಧಿನಿಯದ ಪ್ರಕಾರ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ಜುಡೀಷ್ಯಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ನ್ಯಾಯಾಲಯದಲ್ಲಿ ವಿಚಾರಣೆ ಮಾಡತಕ್ಕದ್ದಾಗಿದೆ.

ಅಧ್ಯಾಯ 5

ಇತರೆ

25. ಅಂಗೀಕೃತ ಲ್ಯಾಬೋರೇಟರಿಯ ರಿಪೋರ್ಟ್.—ಒಂದು ಅಂಗೀಕೃತ ಲ್ಯಾಬೋರೇಟರಿಯು ಯಥೋಚಿತವಾಗಿ ನೀಡಿದ ರೀಪೋರ್ಟಾಗಿ ತಾತ್ಪರ್ಯವಾಗುವ ಯಾವುದೇ ದಾಖಲೆಯನ್ನು ಈ ಅಧಿನಿಯಮದ ಪ್ರಕಾರವಿರುವ ಯಾವುದೇ ವ್ಯವಹರಣೆಗಳಲ್ಲಿಯೂ ಅದರಲ್ಲಿ ಹೇಳಿರುವ ವಾಸ್ತವಿಕತೆಗಳ ಪುರಾವೆಯಾಗಿ ಉಪಯೋಗಿಸತಕ್ಕದ್ದಾಗಿದೆ.

26. ಸ್ಥಳೀಯ ಪ್ರಾಧಿಕಾರಗಳ ಜವಾಬ್ದಾರಿ.—ಪ್ರಾಧಿಕಾರದ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಅವಶ್ಯವಾದ ಸಹಾಯ ಸಹಕಾರಗಳನ್ನು ಮತ್ತು ಮಾಹಿತಿಗಳನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳು ಪ್ರಾಧಿಕಾರಕ್ಕೆ ನೀಡತಕ್ಕದ್ದು ಮತ್ತು ಅವಶ್ಯವಿರುವಾಗ ಅಂತಹ ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಸವಿಸ್ತಾರವಾದ ತಪಾಸಣೆಗಾಗಿ ಲಭ್ಯಗೊಳಿಸತಕ್ಕದ್ದಾಗಿದೆ.

ವಿವರಣೆ.—ಈ ವಿಭಾಗದ ಅಗತ್ಯಕ್ಕೆ, ''ಸ್ಥಳೀಯ ಪ್ರಾಧಿಕಾರಗಳು'' ಎಂದರೆ, ಪ್ರತಿಯೊಂದು ಜಿಲ್ಲೆಯ ಪಶುಸಂಗೋಪನಾ ಅಧಿಕಾರಿ, ಆತನು ಅಧಿಕೃತಗೊಳಿಸುವ ಇತರ ಅಧಿಕಾರಿಗಳು ಮತ್ತು ಕೇರಳ ಲೈವ್‌ಸ್ಟೋಕ್ ಡೆವಲಪ್‌ಮೆಂಟ್ ಬೋರ್ಡಿನ ಮಾನೇಜರ್ (ಲೈವ್ ಸ್ಟೋಕ್ ಪ್ರೊಡಕ್ಷನ್), ಆತನು ಅಧಿಕೃತಗೊಳಿಸುವ ಇತರ ಅಧಿಕಾರಿಗಳು ಎಂದರ್ಥವಾಗುವುದು.

27. ವರದಿಗಳ ಸಲ್ಲಿಕೆ.—ಪ್ರಾಧಿಕಾರವು, ಅದರ ಚಟುವಟಿಕೆಗಳು, ಆಯವ್ಯಯ ಲೆಕ್ಕಗಳು ಅಲ್ಲದಿದ್ದರೆ ಧೋರಣೆಗಳು ಇತ್ಯಾದಿಗಳಿಗೆ ಸಂಬಂಧಿಸಿದ ರಿಪೋರ್ಟುಗಳು, ಅಂಕಿ ಅಂಶಗಳು, ಇತರ ಮಾಹಿತಿಗಳು ಎಂಬವುಗಳನ್ನು ನಿಗದಿಪಡಿಸಿದ ರೀತಿಯಲ್ಲಿ ಕಾಲಾಕಾಲಗಳಲ್ಲಿ ಸರಕಾರಕ್ಕೆ ಸಲ್ಲಿಸತಕ್ಕದ್ದಾಗಿದೆ.

28. ಪ್ರಾಧಿಕಾರದ ಎಲ್ಲಾ ತಜ್ಞರು ಮತ್ತು ಅಧಿಕಾರಿಗಳು ಸಾರ್ವಜನಿಕ ಸೇವಕರಾಗಿರುವರೆಂದು.—ಈ ಅಧಿನಿಯಮದ ಉಪಬಂಧಗಳ ಪ್ರಕಾರವಿರುವ ಪ್ರಾಧಿಕಾರದ ಎಲ್ಲಾ ತಜ್ಞರು ಮತ್ತು ಅಧಿಕಾರಿಗಳು ಈ ಅಧಿನಿಯಮದ ಯಾವುದಾದರೂ ಉಪಬಂಧಗಳಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ನಿಯಮಗಳಿಗೆ ಅನುಸಾರವಾಗಿ ಕಾರ್ಯವೆಸಗುವಾಗ ಅಲ್ಲದಿದ್ದರೆ ಅದರಲ್ಲಿನ ಉಪಬಂಧಗಳನ್ನು ಜಾರಿಗೊಳಿಸುವಾಗ 2023ರ ಭಾರತೀಯ ನ್ಯಾಯಸಂಹಿತ (2023ರ 45ನೇ ಕೇಂದ್ರ ಅಧಿನಿಯಮ)ಯ ಪ್ರಕಾರವಿರುವ ಸಾರ್ವಜನಿಕ ಸೇವಕರೆಂದು ಭಾವಿಸತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

29. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ತಡೆ.—ಈ ಅಧಿನಿಯಮದ ಪ್ರಕಾರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಪ್ರಕಾರ, ಪ್ರಾಧಿಕಾರ ಅಥವಾ ಪ್ರಾಧಿಕಾರ ಜವಾಬ್ದಾರಿಗೊಳಿಸುವ ಅಧಿಕಾರಿಗಳು ಅಥವಾ ತಜ್ಞರು, ಪರಿಶೀಲನೆ ನಡೆಸಿ, ಈ ಅಧಿನಿಯಮದ ಪ್ರಕಾರ ಅವರಲ್ಲಿ ನಿಹಿತವಾದ ಅಧಿಕಾರವನ್ನು ಉಪಯೋಗಿಸಿ ಯಾವುದಾದರೂ ವಿಷಯದಲ್ಲಿ ಇತ್ಯರ್ಥಗೊಳಿಸಿದ ಅಥವಾ ಅದಕ್ಕಾಗಿ ಅವಲಂಬಿಸಿದ ರೀತಿ ಅಥವಾ ತೀರ್ಮಾನಗಳನ್ನು ಪ್ರಶ್ನಿಸಲು ಯಾವುದೇ ಸಿವಿಲ್ ನ್ಯಾಯಾಲಯಕ್ಕೂ ಅಧಿಕಾರ ವ್ಯಾಪ್ತಿ ಇರುವುದಲ್ಲ.

29. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ತಡೆ.—ಈ ಅಧಿನಿಯಮದ ಪ್ರಕಾರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಪ್ರಕಾರ, ಪ್ರಾಧಿಕಾರ ಅಥವಾ ಪ್ರಾಧಿಕಾರ ಜವಾಬ್ದಾರಿಗೊಳಿಸುವ ಅಧಿಕಾರಿಗಳು ಅಥವಾ ತಜ್ಞರು, ಪರಿಶೀಲನೆ ನಡೆಸಿ, ಈ ಅಧಿನಿಯಮದ ಪ್ರಕಾರ ಅವರಲ್ಲಿ ನಿಹಿತವಾದ ಅಧಿಕಾರವನ್ನು ಉಪಯೋಗಿಸಿ ಯಾವುದಾದರೂ ವಿಷಯದಲ್ಲಿ ಇತ್ಯರ್ಥಗೊಳಿಸಿದ ಅಥವಾ ಅದಕ್ಕಾಗಿ ಅವಲಂಬಿಸಿದ ರೀತಿ ಅಥವಾ ತೀರ್ಮಾನಗಳನ್ನು ಪ್ರಶ್ನಿಸಲು ಯಾವುದೇ ಸಿವಿಲ್ ನ್ಯಾಯಾಲಯಕ್ಕೂ ಅಧಿಕಾರ ವ್ಯಾಪ್ತಿ ಇರುವುದಲ್ಲ.

30. ಸದ್ಭಾವನೆಯಿಂದ ಕೈಗೊಂಡ ಕ್ರಮಗಳಿಗೆ ಸಂರಕ್ಷಣೆ.—ಪ್ರಾಧಿಕಾರ ಅಥವಾ ಯಾವುದಾದರೂ ಸದಸ್ಯರು ಅಥವಾ ಪ್ರಾಧಿಕಾರವು ನಿಹಿತಗೊಳಿಸಿದ ಅಧಿಕಾರಿಗಳು ಅಥವಾ ತಜ್ಞರು, ಸದ್ಭಾವನೆಯಿಂದ ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಈ ಅಧಿನಿಯಮದ ಪ್ರಕಾರ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಪ್ರಕಾರ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದಂತಹ ಕ್ರಮಗಳಿಗೆ ವಿರುದ್ಧ ಯಾವುದೇ ದಾವೆ, ಪ್ರೋಸಿಕ್ಯೂಶನ್ ಅಥವಾ ಇತರ ಕಾನೂನು ಕ್ರಮಗಳು ನೆಲೆನಿಲ್ಲುವುದಲ್ಲ.

31. ನಿಯಮಗಳನ್ನು ರಚಿಸಲಿಕ್ಕಿರುವ ಅಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಆಗತ್ಯಕ್ಕಾಗಿ ಸರಕಾರಕ್ಕೆ, ಗಜೆಟ್ ಅಧಿಸೂಚನೆಯ ಮುಖೇನ, ನಿಯಮಗಳನ್ನು ರಚಿಸಬಹುದಾಗಿದೆ.

(2) ಈ ಅಧಿನಿಯಮದ ಪ್ರಕಾರ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೇ, ವಿಧಾನಸಭೆಯು ಅಧಿವೇಶನದಲ್ಲಿರುವಾಗ ಅದರ ಸಮಕ್ಷದಲ್ಲಿ, ಅದನ್ನು ಒಂದು ಅಧಿವೇಶನದಲ್ಲೋ ಸತತವಾದ ಎರಡು ಅಧಿವೇಶನಗಳಲ್ಲೋ ಒಳಗೊಳ್ಳುವ ಒಟ್ಟು ಹದಿನಾಲ್ಕು ದಿವಸ ಕಾಲಾವಧಿಗೆ ಮಂಡಿಸತಕ್ಕದ್ದು ಮತ್ತು ಆ ರೀತಿ ಯಾವ ಅಧಿವೇಶನದಲ್ಲಿ ಮಂಡಿಸುವುದೋ ಆ ಅಧಿವೇಶನವೋ ನಿಕಟಾನಂತರದ ಅಧಿವೇಶನವೋ ಕೊನೆಗೊಳ್ಳುವುದಕ್ಕಿಂತ ಮುಂಚಿತವಾಗಿ, ವಿಧಾನಸಭೆಯು ಪ್ರಸ್ತುತ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡುವುದೋ ಅಲ್ಲದಿದ್ದಲ್ಲಿ ಆ ನಿಯಮವನ್ನು ರಚಿಸಬೇಕಾಗಿಲ್ಲೆಂದು ತೀರ್ಮಾನಿಸುವುದೋ ಮಾಡುವುದಾದಲ್ಲಿ ಆ ನಿಯಮಕ್ಕೆ ಅನಂತರ ಆಯಾಯ ವಿಷಯದಂತೆ, ಆ ರೀತಿ ಮಾರ್ಪಾಟುಗೊಳಿಸಿದ ರೀತಿಯಲ್ಲಿ ಮಾತ್ರ ಪ್ರಾಬಲ್ಯವಿರುವುದು ಅಥವಾ ಯಾವುದೇ ಪ್ರಾಬಲ್ಯವು ಇಲ್ಲದಾಗುವುದಾಗಿದೆ; ಹಾಗಿದ್ದರೂ, ಅಂತಹ ಯಾವುದೇ ಮಾರ್ಪಾಟುಗೊಳಿಸುವಿಕೆಯೋ ರದ್ದುಗೊಳಿಸುವಿಕೆಯೋ, ಆಯಾಯ ವಿಷಯದಂತೆ, ಆ ನಿಯಮಗಳ ಪ್ರಕಾರ ಹಿಂದೆ ಮಾಡಿರುವ ಯಾವುದೇ ವಿಷಯದ ಸಿಂಧುತ್ವಕ್ಕೆ ಭಂಗವಾಗದ ರೀತಿಯಲ್ಲಿ ಆಗಿರತಕ್ಕದ್ದು.

32. ತೊಂದರೆಗಳನ್ನು ನೀಗಿಸುವುದಕ್ಕಿರುವ ಅಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಗಳು ಉಂಟಾಗುವುದಾದಲ್ಲಿ, ಸರಕಾರಕ್ಕೆ, ಅಂತಹ ತೊಂದರೆಯನ್ನು ನೀಗಿಸಲು ಆಗತ್ಯವೆಂದೋ ಯುಕ್ತವೆಂದೋ ಅದಕ್ಕೆ ತೋರುವ ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಲ್ಲದ ಯಾವುದೇ ವಿಷಯವನ್ನು, ಸರಕಾರಿ ಅಧಿಕೃತ ಗಜೆಟಿನಲ್ಲಿ ಅಧಿಸೂಚಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮುಖೇನ ಮಾಡಬಹುದಾಗಿದೆ:

ಆದರೆ, ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಎರಡು ವರ್ಷಗಳ ಕಾಲಾವಧಿಯು ಮುಕ್ತಾಯಗೊಂಡ ನಂತರ ಅಂತಹ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ವಿಭಾಗದ ಅಡಿಯಲ್ಲಿ ರಚಿಸಿದ ಪ್ರತಿ ಆದೇಶವೂ ವಿಧಾನ ಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.

33. ಪ್ರಾಧಿಕಾರಕ್ಕೆ ಅವಶ್ಯಕವಾದ ಮೊತ್ತವನ್ನು ಮೀಸಲಿಡುವುದು.—ಪ್ರಾಧಿಕಾರದ ಚಟುವಟಿಕೆಗಳಿಗೆ ಅವಶ್ಯಕವಾದ ಮೊತ್ತಗಳನ್ನು ಪಶುಸಂಗೋಪನಾ ಇಲಾಖೆಯ ಬಜೆಟ್ ಪಾಲಿನಲ್ಲಿ ಸರಕಾರವು ಮೀಸಲಿಡತಕ್ಕದ್ದಾಗಿದೆ.

34. ರದ್ದತಿ ಮತ್ತು ರಕ್ಷಣೆ.—(1) ದಿ ಕೇರಳ ಲೈವ್ ಸ್ಟೋಕ್ ಇಂಪ್ರೂವ್‌ಮೆಂಟ್ ಆಕ್ಟ್, 1961 (1961ರ 17) ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 59/ಲೆಗ್. ಸಿ3/2024/ಕಾನೂನು. ತಿರುವನಂತಪುರಂ, *2024 ನವೆಂಬರ್ 1,* *1200 ತುಲಾ 16/* *1946 ಕಾರ್ತಿಕ 10.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಅಕ್ಟೋಬರ್ 31ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 26ನೇ ಅಧಿನಿಯಮ

2024ರ ಕೇರಳ ಸೂಕ್ಷ್ಮ-ಕಿರು-ಮಧ್ಯಮ ಕೈಗಾರಿಕೆ ಸಂಸ್ಥೆಗಳ ಮತ್ತು ಇತರ ಕೈಗಾರಿಕೆ ಸಂಸ್ಥೆಗಳ ಸುಗಮಗೊಳಿಸುವಿಕೆ (ತಿದ್ದುಪಡಿ) ಅಧಿನಿಯಮ

2019ರ ಕೇರಳ ಸೂಕ್ಷ್ಮ-ಕಿರು-ಮಧ್ಯಮ ಕೈಗಾರಿಕೆ ಸಂಸ್ಥೆಗಳ ಮತ್ತು ಇತರ ಕೈಗಾರಿಕೆ ಸಂಸ್ಥೆಗಳ ಸುಗಮಗೊಳಿಸುವಿಕೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ—2019ರ ಕೇರಳ ಸೂಕ್ಷ್ಮ-ಕಿರು-ಮಧ್ಯಮ ಕೈಗಾರಿಕೆ ಸಂಸ್ಥೆಗಳ ಮತ್ತು ಇತರ ಕೈಗಾರಿಕೆ ಸಂಸ್ಥೆಗಳ ಸುಗಮಗೊಳಿಸುವಿಕೆ ಅಧಿನಿಯಮ (2019ರ 16)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಂಕ್ಷಿಪ್ತನಾಮ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಸೂಕ್ಷ್ಮ-ಕಿರು-ಮಧ್ಯಮ ಕೈಗಾರಿಕೆ ಸಂಸ್ಥೆಗಳ ಮತ್ತು ಇತರ ಕೈಗಾರಿಕೆ ಸಂಸ್ಥೆಗಳ ಸುಗಮಗೊಳಿಸುವಿಕೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

G. 7/2025/GPC.

This is a digitally signed Gazette.
Authenticity may be verified through https://compose.kerala.gov.in/

2

2. ಒಂದು ಪದಪ್ರಯೋಗದ ಬದಲು ಮತ್ತೊಂದು ಪದಪ್ರಯೋಗದ ಸೇರಿಸುವಿಕೆ.—2019ರ ಕೇರಳ ಸೂಕ್ಷ್ಮ-ಕಿರು-ಮಧ್ಯಮ ಕೈಗಾರಿಕೆ ಸಂಸ್ಥೆಗಳ ಮತ್ತು ಇತರ ಕೈಗಾರಿಕೆ ಸಂಸ್ಥೆಗಳ ಸುಗಮಗೊಳಿಸುವಿಕೆ ಅಧಿನಿಯಮ (2019ರ 16) (ಇನ್ನು ಮುಂದೆ ಪ್ರಧಾನ ಅಧಿನಿಯಮ ಎಂದು ಉಲ್ಲೇಖಿಸಲ್ಪಡುವುದು), ದಲ್ಲಿ "ಸ್ವೀಕೃತಿ ಪ್ರಮಾಣ ಪತ್ರ" ಎಂಬ ಪದಗಳು ಬರುವ ಸ್ಥಳಗಳಲ್ಲೆಲ್ಲಾ ಅದಕ್ಕೆ ಬದಲಾಗಿ "ತತ್ವತಃ ಅಂಗೀಕಾರ ಪ್ರಮಾಣಪತ್ರ" ಎಂಬ ಪದಗಳನ್ನು ಸಂದರ್ಭಕ್ಕನುಸಾರವಾಗಿ ಸೇರಿಸತಕ್ಕದ್ದು.

3. 6ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 6ನೇ ವಿಭಾಗದಲ್ಲಿ,—

(i) ಪಾರ್ಶ್ವ ಶೀರ್ಷಿಕೆಯ ಬದಲು ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ತತ್ವತಃ ಅಂಗೀಕಾರ ಪ್ರಮಾಣಪತ್ರದ ಪ್ರಾಬಲ್ಯ";

(ii) (1)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) 5ನೇ ವಿಭಾಗದ (3)ನೇ ಉಪ-ವಿಭಾಗದ ಪ್ರಕಾರ ಒಂದು ಕೈಗಾರಿಕೆ ಸಂಸ್ಥೆಗೆ ನೀಡಿದ ತತ್ವತಃ ಅಂಗೀಕಾರ ಪ್ರಮಾಣಪತ್ರಕ್ಕೆ, ಎಲ್ಲಾ ಅಗತ್ಯಗಳಿಗೂ, ಅದನ್ನು ನೀಡಿದ ದಿನಾಂಕದಿಂದ ಮೂರುವರ್ಷ ಮತ್ತು ಆರುತಿಂಗಳು ಆದ ಕಾಲಾವಧಿಗೆ, ನಿಗದಿಪಡಿಸಬಹುದಾದ ರೀತಿಯಲ್ಲಿ 2ನೇ ವಿಭಾಗದ (ಸಿ) ಖಂಡದಲ್ಲಿ ವ್ಯಾಖ್ಯಾನಿಸಿದಂತಹ ಒಂದು ಅಂಗೀಕಾರ ಎಂಬ ರೀತಿಯಲ್ಲಿ ಪ್ರಾಬಲ್ಯ ಇರುವುದಾಗಿದೆ ಮತ್ತು, ಪ್ರಸ್ತುತ ಕಾಲಾವಧಿಯೊಳಗೆ, ಅಂತಹ ಕೈಗಾರಿಕೆ ಸಂಸ್ಥೆ, 2ನೇ ವಿಭಾಗದ (ಸಿ) ಖಂಡದಲ್ಲಿ ವ್ಯಾಖ್ಯಾನಿಸಿದಂತಹ ಅಗತ್ಯವಿರುವ ಅಂಗೀಕಾರಗಳನ್ನು ಸಂಬಂಧಪಟ್ಟ ಕಾನೂನುಗಳ ಪ್ರಕಾರವಿರುವ ಪ್ರಕ್ರಿಯೆಗಳನ್ನು ಪಾಲಿಸುತ್ತ ಗಳಿಸತಕ್ಕದ್ದಾಗಿದೆ:

ಆದರೆ, 2008ರ ಕೇರಳ ಭತ್ತದ ಬಯಲು-ತರಿಜಮೀನು ಸಂರಕ್ಷಣೆ ಅಧಿನಿಯಮ (2008ರ 28)ದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ಅಡಕವಾಗಿರುವ ಉಪಬಂಧಗಳಿಗೆ ವಿರುದ್ಧವಾಗಿ ಅಥವಾ 2016ರ ಕೇರಳ ನಗರ-ಗ್ರಾಮ ಆಯೋಜನೆ ಅಧಿನಿಯಮ (2016ರ 9)ದ ಅಡಿಯಲ್ಲಿ ಅಧಿಸೂಚಿಸಿದಂತಹ ಮಾಸ್ಟರ್ ಪ್ಲ್ಯಾನ್‌ನಲ್ಲಿ, ಅಂತಹ ಪ್ಲ್ಯಾನ್ ಜಾರಿಯಲ್ಲಿರುವಲ್ಲಿ, ನಿರ್ದಿಷ್ಟಪಡಿಸಿರುವಂತಹ ಭೂವಿನಿಯೋಗವನ್ನು ಉಲ್ಲಂಘಿಸುತ್ತಾ ಒಂದು ಭೂಮಿಯನ್ನು ಉಪಯೋಗಿಸಲು ತತ್ವತಃ ಅಂಗೀಕಾರ ಪ್ರಮಾಣಪತ್ರವು ಒಬ್ಬ ವ್ಯಕ್ತಿಯನ್ನು ಅರ್ಹನನ್ನಾಗಿಸುವುದಲ್ಲ.";

(iii) (2)ನೇ ಉಪ-ವಿಭಾಗದ "ಮೂರು ವರ್ಷ ಕಾಲಾವಧಿಯಲ್ಲಿ" ಎಂಬ ಪದಗಳಿಗೆ ಬದಲು "ಮೂರು ವರ್ಷ ಮತ್ತು ಆರು ತಿಂಗಳು ಆದ ಕಾಲಾವಧಿಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

4. 7ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 7ನೇ ವಿಭಾಗದಲ್ಲಿ "ಮೂರು ವರ್ಷ ಕಾಲಾವಧಿಗೆ" ಎಂಬ ಪದಗಳಿಗೆ ಬದಲಾಗಿ "ಮೂರು ವರ್ಷ ಮತ್ತು ಆರು ತಿಂಗಳು ಆದ ಕಾಲಾವಧಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಚ್) ಇಲಾಖೆ

ಅಧಿಸೂಚನೆ

ನಂಬ್ರ ಲೆಗ್. ಎಚ್1/168/2024/ಕಾನೂನು. ತಿರುವನಂತಪುರಂ, *2025* ಏಪ್ರಿಲ್ *25,* / *1200* ಮೇಷ *12/* / *1947* ವೈಶಾಖ *5.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2025 ಏಪ್ರಿಲ್ 24ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2025ರ 5ನೇ ಅಧಿನಿಯಮ

2025ರ ಕೇರಳ ರಾಜ್ಯ ವಯೋವೃದ್ಧ ಆಯೋಗ ಅಧಿನಿಯಮ

ವಯೋವೃದ್ಧರ ಕಲ್ಯಾಣ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ನೀಡಲು ಮತ್ತು ವಯೋವೃದ್ಧರ ಪುನರ್ವಸತಿಯನ್ನು ಸಾಧ್ಯಗೊಳಿಸಲು ಮತ್ತು ಅವರ ನೈಪುಣ್ಯತೆಯನ್ನು ಮತ್ತು ಅನುಭವಜ್ಞಾನವನ್ನು ಸಾರ್ವಜನಿಕರಿಗೆ ಬಳಸಿಕೊಳ್ಳುವುದಕ್ಕೆ ಅಗತ್ಯವಾದ ಯೋಜನೆಗಳನ್ನು ಮತ್ತು ಚಟುವಟಿಕೆಗಳನ್ನು ವಹಿಸಿಕೊಂಡು ನಡೆಸಲು ಮತ್ತು ಹಕ್ಕು ಸಂರಕ್ಷಣೆಯನ್ನು ಖಾತ್ರಿಪಡಿಸಲು ಒಂದು ವಯೋವೃದ್ಧ ಆಯೋಗವನ್ನು ರಚಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—ವಯೋವೃದ್ಧರ ಕಲ್ಯಾಣ ಮತ್ತು ಸಂರಕ್ಷಣೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ನೀಡಲು ಮತ್ತು ವಯೋವೃದ್ಧರ ಪುನರ್ವಸತಿಯನ್ನು ಸಾಧ್ಯಗೊಳಿಸಲು ಮತ್ತು ಅವರ ನೈಪುಣ್ಯತೆಯನ್ನು ಮತ್ತು ಅನುಭವಜ್ಞಾನವನ್ನು ಸಾರ್ವಜನಿಕರಿಗೆ ಬಳಸಿಕೊಳ್ಳುವುದಕ್ಕೆ ಅಗತ್ಯವಾದ ಯೋಜನೆಗಳನ್ನು ಮತ್ತು ಚಟುವಟಿಕೆಗಳನ್ನು ವಹಿಸಿಕೊಂಡು ನಡೆಸಲು ಮತ್ತು ಹಕ್ಕು ಸಂರಕ್ಷಣೆಯನ್ನು ಖಾತ್ರಿಪಡಿಸಲು ಒಂದು ವಯೋವೃದ್ಧ ಆಯೋಗವನ್ನು ರಚಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

This is a digitally signed Gazette.
Authenticity may be verified through https://compose.kerala.gov.in/

ಅಧ್ಯಾಯ I

ಪ್ರಾರಂಭ

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2025ರ ಕೇರಳ ರಾಜ್ಯ ವಯೋವೃದ್ಧ ಆಯೋಗ ಅಧಿನಿಯಮ ಎಂದು ಕರೆಯಬಹುದು.

(2) ಇದು 2024 ಡಿಸೆಂಬರ್ 21ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.—

2. ನಿರ್ವಚನಗಳು.—ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದಿದ್ದಲ್ಲಿ,—

(ಎ) "ಸಂರಕ್ಷಣಾ ಕೇಂದ್ರ" ಎಂದರೆ, ವಯೋವೃದ್ಧರನ್ನು ಸಂರಕ್ಷಿಸುವುದಕ್ಕಿರುವ ಸರಕಾರಿ ವೃದ್ಧಾಶ್ರಮಗಳೋ ಅಲ್ಲದಿದ್ದಲ್ಲಿ ಆರ್ಫನೇಜ್ ಕಂಟ್ರೋಲ್ ಬೋರ್ಡಿನ ಅಂಗೀಕಾರವಿರುವ ವೃದ್ಧಾಶ್ರಮಗಳೋ ಎಂದರ್ಥ;

(ಬಿ) "ಚೇರ್‌ಪರ್ಸನ್" ಎಂದರೆ, ಆಯೋಗದ ಚೇರ್‌ಪರ್ಸನ್ ಎಂದರ್ಥ;

(ಸಿ) "ಆಯೋಗ" ಎಂದರೆ, 3ನೇ ವಿಭಾಗ ಪ್ರಕಾರ ರೂಪೀಕರಿಸಲ್ಪಟ್ಟ ಕೇರಳ ರಾಜ್ಯ ವಯೋವೃದ್ಧ ಆಯೋಗ ಎಂದರ್ಥ;

(ಡಿ) "ವಯೋವೃದ್ಧ" ಎಂದರೆ, ಅರವತ್ತು ವಯಸ್ಸು ಪೂರ್ತಿಯಾಗಿರುವ ಒಬ್ಬ ವ್ಯಕ್ತಿ ಎಂದರ್ಥ;

(ಇ) "ಸರಕಾರ" ಎಂದರೆ, ಕೇರಳ ಸರಕಾರ ಎಂದರ್ಥ;

(ಎಫ್) "ಸದಸ್ಯ" ಎಂದರೆ, ಆಯೋಗದಲ್ಲಿನ ಒಬ್ಬ ಸದಸ್ಯ ಎಂದರ್ಥ;

(ಜಿ) "ಅಧಿಸೂಚನೆ" ಎಂದರೆ, ಗಜೆಟ್‌ನಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದರ್ಥ;

(ಎಚ್) "ವೃದ್ಧಾಶ್ರಮ" ಎಂದರೆ, ವಯೋವೃದ್ಧರಿಗೆ ವಸತಿ ನೀಡುವ ಅಥವಾ ಸಂರಕ್ಷಣೆ ನೀಡುವ ಯಾವುದೇ ಸಂಸ್ಥೆ ಎಂದರ್ಥ;

(ಐ) "ನಿಗದಿಪಡಿಸಿದ" ಎಂದರೆ, ಈ ಅಧಿನಿಯಮದ ಕೆಳಗೆ ರಚಿಸಲ್ಪಟ್ಟ ನಿಯಮಗಳಿಂದ ನಿಗದಿಪಡಿಸಿದ ಎಂದರ್ಥ;

ಅಧ್ಯಾಯ II

ಆಯೋಗದ ರಚನೆ

3. ಆಯೋಗದ ರಚನೆ.—(1) ಸರಕಾರವು, ಈ ಅಧಿನಿಯಮದ ಪ್ರಾರಂಭ ದಿನಾಂಕದ ನಂತರ ಆದಷ್ಟು ಬೇಗನೇ, ಈ ಅಧಿನಿಯಮದ ಕೆಳಗೆ ಆಯೋಗಕ್ಕೆ ನೀಡಿರುವ ಅಧಿಕಾರಗಳನ್ನು ವಿನಿಯೋಗಿಸುವುದಕ್ಕೂ ಮತ್ತು ವಹಿಸಿಕೊಟ್ಟ ಕರ್ತವ್ಯಗಳನ್ನು ನೆರವೇರಿಸುವುದಕ್ಕೂ ಬೇಕಾಗಿ ಅಧಿಸೂಚನೆಯ ಮುಖೇನ, ಕೇರಳ ರಾಜ್ಯ ವಯೋವೃದ್ಧ ಆಯೋಗ ಎಂಬ ಹೆಸರಿನಲ್ಲಿ ಒಂದು ನಿಕಾಯವನ್ನು ರಚಿಸತಕ್ಕದ್ದಾಗಿದೆ.

(2) ಆಯೋಗದಲ್ಲಿ ಸರಕಾರವು ಅಧಿಸೂಚನೆ ಮುಖೇನ ನೇಮಿಸುವ ಒಬ್ಬ ಚೇರ್‌ಪರ್ಸನ್ ಮತ್ತು ನಾಲ್ಕಕ್ಕಿಂತ ಕಡಿಮೆಯಲ್ಲದ ಸಂಖ್ಯೆಯ ಸದಸ್ಯರು ಇರತಕ್ಕದ್ದಾಗಿದೆ.

(3) ಚೇರ್‌ಪರ್ಸನ್ ಒಳಗೊಂಡು ಆಯೋಗದಲ್ಲಿ ನೇಮಿಸಲ್ಪಟ್ಟ ಎಲ್ಲಾ ಸದಸ್ಯರುಗಳು ವಯೋವೃದ್ಧರು ಆಗಿರತಕ್ಕದ್ದು ಮತ್ತು ವಯೋವೃದ್ಧರ ಕಲ್ಯಾಣ ಕ್ಷೇತ್ರದಲ್ಲಿ ಚಟುವಟಿಕಾ ಅನುಭವವಿರುವ ವ್ಯಕ್ತಿಗಳಾಗಿರತಕ್ಕದ್ದು ಮತ್ತು ಅವರಲ್ಲಿ ಒಬ್ಬರು ಪರಿಶಿಷ್ಟಜಾತಿಗೆ ಅಥವಾ ಪರಿಶಿಷ್ಟ ಗೋತ್ರವರ್ಗಕ್ಕೆ ಸೇರಿದ ವ್ಯಕ್ತಿ ಮತ್ತು ಇನ್ನೊಬ್ಬರು ಮಹಿಳೆ ಆಗಿರತಕ್ಕದ್ದು.

(4) ಸರಕಾರಿ ಹೆಚ್ಚುವರಿ ಕಾರ್ಯದರ್ಶಿಯವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬರನ್ನು ಆಯೋಗದ ಕಾರ್ಯದರ್ಶಿಯಾಗಿಯೂ ಸರಕಾರಿ ಕಾನೂನು ಇಲಾಖೆಯ ಜಂಟಿ ಕಾರ್ಯದರ್ಶಿಯವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬರನ್ನು ಆಯೋಗದ ರೆಜಿಸ್ಟ್ರಾರ್ ಆಗಿಯೂ ಸರಕಾರಿ ಹಣಕಾಸು ಇಲಾಖೆಯ ಡೆಪ್ಯೂಟಿ ಸೆಕ್ರಟರಿಯವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬರನ್ನು ಆಯೋಗದ ಹಣಕಾಸು ಆಫೀಸರಾಗಿಯೂ ಸರಕಾರವು ನೇಮಿಸತಕ್ಕದ್ದು.

(5) (4)ನೇ ಉಪ-ವಿಭಾಗ ಪ್ರಕಾರ ನೇಮಿಸಲ್ಪಡುವ ಉದ್ಯೋಗಸ್ಥರಿಗೆ ನಿಗದಿಪಡಿಸಿದಂತಹ ಅಧಿಕಾರಗಳು ಮತ್ತು ಪ್ರಕಾರ್ಯಗಳು ಇರುವುದಾಗಿದೆ.

(6) ಆಯೋಗದ ಮುಖ್ಯ ಠಾಣೆಯು ತಿರುವನಂತಪುರಂ ಆಗಿರತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

3

4. ಚೇರ್‌ಪರ್ಸನಿನ ಮತ್ತು ಸದಸ್ಯರುಗಳ ಪದಾವಧಿ ಮತ್ತು ಸೇವಾ ಷರತ್ತುಗಳು.—(1) ಚೇರ್‌ಪರ್ಸನಿನ ಮತ್ತು ಸದಸ್ಯರುಗಳ ಪದಾವಧಿಯು ಅವರು ಪ್ರಸ್ತುತ ಸ್ಥಾನವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷದವರೆಗೆ ಆಗಿರುವುದಾಗಿದೆ:

ಆದರೆ, ಚೇರ್‌ಪರ್ಸನ್, ಆತನ ಉತ್ತರಾಧಿಕಾರಿಯು 3ನೇ ವಿಭಾಗದ (2)ನೇ ಉಪ-ವಿಭಾಗ ಪ್ರಕಾರ ನೇಮಿಸಲ್ಪಡುವ ಮತ್ತು ಆತನು ತನ್ನ ಅಧಿಕಾರ ಸ್ಥಾನವನ್ನು ವಹಿಸಿಕೊಳ್ಳುವವರೆಗೆ ಅಲ್ಲದಿದ್ದಲ್ಲಿ ಆರು ತಿಂಗಳವರೆಗೆ, ಯಾವುದು ಮೊದಲೋ, ಆ ತನಕ ಅಧಿಕಾರ ಸ್ಥಾನದಲ್ಲಿ ಮುಂದುವರಿಯಬಹುದಾಗಿದೆ.

(2) ಚೇರ್‌ಪರ್ಸನಿಗೆ ಅಥವಾ ಸದಸ್ಯನಿಗೆ ಸರಕಾರಕ್ಕೆ ಸಂಬೋಧಿಸುತಾ ಸ್ವಂತ ಕೈ ಬರಹದಲ್ಲಿ ಲಿಖಿತವಾಗಿ ನೀಡಿದ ಒಂದು ರಾಜೀನಾಮೆ ಪತ್ರ ಮುಖೇನ ಯಾವುದೇ ವೇಳೆಯಲ್ಲಿ ತನ್ನ ಅಧಿಕಾರ ಸ್ಥಾನಕ್ಕೆ ರಾಜೀನಾಮೆ ನೀಡಬಹುದಾಗಿದೆ.

(3) ರಾಜೀನಾಮೆ, ಮರಣ, ತೆಗೆದುಹಾಕುವಿಕೆ ಅಲ್ಲದಿದ್ದಲ್ಲಿ ಅಂತಹ ಯಾವುದೇ ಕಾರಣಗಳಿಂದ ಚೇರ್‌ಪರ್ಸನಿನ ಅಥವಾ ಸದಸ್ಯನ ಆಕಸ್ಮಿಕ ತೆರವು ಉಂಟಾಗುವುದಾದಲ್ಲಿ ಸರಕಾರ ಅದನ್ನು ಭರ್ತಿಮಾಡುವುದಕ್ಕಿರುವ ನೇಮಕಾತಿ ಮಾಡತಕ್ಕದ್ದು. ಮತ್ತು ಆ ರೀತಿ ನೇಮಿಸಲ್ಪಡುವ ವ್ಯಕ್ತಿಗೆ ಯಾರ ಅಧಿಕಾರ ಸ್ಥಾನಕ್ಕಾಗಿದೆ ಆತನನ್ನು ನೇಮಿಸಲ್ಪಡುವುದು ಆತನ ಬಾಕಿಯಿರುವ ಪದಾವಧಿಯವರೆಗೆ ಮಾತ್ರ ಪದವಿಯನ್ನು ವಹಿಸಲು ಹಕ್ಕು ಇರುವುದಾಗಿದೆ.

(4) ಸರಕಾರಕ್ಕೆ, ಆದೇಶದ ಮುಖೇನ ಚೇರ್‌ಪರ್ಸನನ್ನೋ ಯಾವುದೇ ಸದಸ್ಯನನ್ನೋ, ಆತನು,—

(ಎ) ಒಬ್ಬ ಅವಿಮುಕ್ತ ದಿವಾಳಿಯೆಂದು ಒಂದು ಸಕ್ಷಮ ನ್ಯಾಯಾಲಯವು ಘೋಷಿಸಿದ್ದಲ್ಲಿ; ಅಥವಾ

(ಬಿ) ನೈತಿಕ ಪತನವನ್ನೊಳಗೊಂಡಿರುವುದೆಂದು ಸರಕಾರದ ಅಭಿಪ್ರಾಯವಿರುವ ಒಂದು ಅಪರಾಧಕ್ಕಾಗಿ, ಅಪರಾಧಿಯೆಂದು ನಿರ್ಣಿತನಾಗಿದ್ದು ಕಾರಾಗೃಹವಾಸಕ್ಕೆ ಶಿಕ್ಷಿಸಲ್ಪಟ್ಟಿದ್ದಲ್ಲಿ; ಅಥವಾ

(ಸಿ) ಬುದ್ಧಿ ಭ್ರಮಣೆಯಿರುವ ವ್ಯಕ್ತಿಯಾಗಿದ್ದು ಮತ್ತು ಸಕ್ಷಮ ಒಂದು ನ್ಯಾಯಾಲಯವು ಆ ರೀತಿ ಘೋಷಿಸಿದ್ದಲ್ಲಿ; ಅಥವಾ

(ಡಿ) ಆಯೋಗದಿಂದ ಅನುಮತಿ ಪಡೆಯದೆ ಅನುಕ್ರಮವಾದ ಮೂರು ಸಭೆಗಳಲ್ಲಿ ಹಾಜರಾಗದಿದ್ದಲ್ಲಿ; ಅಥವಾ

(ಇ) ವಯೋವೃದ್ಧರ ಹಿತ್ತಾಸಕ್ತಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಹಾನಿಕರವಾಗುವಂತೆ ತನ್ನ ಅಧಿಕೃತ ಪದವಿಯನ್ನು ದುರುಪಯೋಗ ಮಾಡಿರುವುದಾಗಿ ಸರಕಾರಕ್ಕೆ ಮನವರಿಕೆಯಾದಲ್ಲಿ;

(ಎಫ್) ಕಾರ್ಯನಿರ್ವಹಿಸಲು ನಿರಾಕರಿಸಿದ್ದಲ್ಲಿ; ಅಥವಾ

(ಜಿ) ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದಲ್ಲಿ, ಅಧಿಕಾರ ಸ್ಥಾನದಿಂದ ತೆಗೆದು ಹಾಕಬಹುದಾಗಿದೆ:

ಆದರೆ, ಯಾವುದೇ ವ್ಯಕ್ತಿಯನ್ನು ಆತನಿಗೆ ಹೇಳುವುದನ್ನು ಹೇಳಲು ಒಂದು ಯುಕ್ತವಾದ ಅವಕಾಶವನ್ನು ನೀಡದೆ ಈ ಉಪ-ವಿಭಾಗ ಪ್ರಕಾರ ತೆಗೆದುಹಾಕತಕ್ಕದ್ದಲ್ಲ.

(5) ಚೇರ್‌ಪರ್ಸನ್, ಆ ಪದವಿಯಲ್ಲಿ ಮುಂದುವರಿಯುವಷ್ಟು ಕಾಲ, ವೇತನ ಲಭಿಸುವ ಇತರ ಕೆಲಸಗಳಲ್ಲೋ ಪ್ರತಿಫಲವಿರುವ ಇತರ ಚಟುವಟಿಕೆಗಳಲ್ಲೋ ನಿರತನಾಗಿರತಕ್ಕದ್ದಲ್ಲ.

(6) ಚೇರ್‌ಪರ್ಸನಿಗೋ ಒಬ್ಬ ಸದಸ್ಯನಿಗೋ ಎರಡಕ್ಕಿಂತ ಹೆಚ್ಚು ಸಲ ಅಧಿಕಾರ ಸ್ಥಾನವನ್ನು ವಹಿಸಿಕೊಳ್ಳಲು ಅರ್ಹತೆಯಿರುವುದಲ್ಲ:

ಆದರೆ, (3)ನೇ ಉಪ-ವಿಭಾಗದ ಉಪಬಂಧಗಳ ಪ್ರಕಾರ ನೇಮಿಸಲ್ಪಡುವ ಮತ್ತು ಒಂದು ವರ್ಷ ಅಥವಾ ಅದಕ್ಕಿಂತ ಕಡಿಮೆ ಕಾಲಾವಧಿಗೆ ಮಾತ್ರ ಅಧಿಕಾರ ಸ್ಥಾನವನ್ನು ವಹಿಸುವಂತಹ ಒಬ್ಬ ವ್ಯಕ್ತಿಯ ವಿಷಯದಲ್ಲಿ, ಪ್ರಸ್ತುತ ಕಾಲಾವಧಿಯನ್ನು (1)ನೇ ಉಪ-ವಿಭಾಗ ಪ್ರಕಾರವಿರುವ ಕಾಲಾವಧಿಯಾಗಿ ಲೆಕ್ಕಹಾಕತಕ್ಕದ್ದಲ್ಲ.

(7) ಆಯೋಗದ ದಿನನಿತ್ಯದ ವ್ಯವಹಾರಗಳ ಸಾಮಾನ್ಯ ಮೇಲ್ನೋಟ, ಮಾರ್ಗನಿರ್ದೇಶ, ಆಡಳಿತ ನಿರ್ವಹಣೆ ಇತ್ಯಾದಿಯು ಚೇರ್‌ಪರ್ಸನ್‌ನಲ್ಲಿ ನಿಹಿತವಾಗಿರುವುದು ಮತ್ತು ಪ್ರಸ್ತುತ ಹೊಣೆಗಾರಿಕೆಯನ್ನು ನಿರ್ವಹಿಸಲು ಆತನಿಗೆ ಇತರ ಸದಸ್ಯರು ನೆರವು ನೀಡತಕ್ಕದ್ದು.

(8) ಚೇರ್‌ಪರ್ಸನ್ ಸರಕಾರಿ ಕಾರ್ಯದರ್ಶಿಯವರ ದರ್ಜೆಯಲ್ಲಿನ ಒಬ್ಬ ಪೂರ್ಣಾವಧಿಯ ಅಧಿಕಾರಿಯಾಗಿರುವರು ಮತ್ತು ನಿಗದಿಪಡಿಸಿದ ಪ್ರಕಾರದ ವೇತನಕ್ಕೆ ಮತ್ತು ಭತ್ಯಗಳಿಗೆ ಆತನಿಗೆ ಅರ್ಹಯಿರುವುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

4

(9) ಆಯೋಗದ ಸದಸ್ಯರುಗಳಿಗೆ ನಿಗದಿಪಡಿಸಿದಂತಹ ಪ್ರಕಾರದ ಗೌರವಧನಕ್ಕೂ ಸಭೆಗಳಲ್ಲಿ ಪಾಲ್ಗೊಳ್ಳುವುದಕ್ಕಿರುವ ಭತ್ಯಗಳಿಗೂ ಅಲ್ಲದಿದ್ದಲ್ಲಿ ಸಿಟ್ಟಿಂಗ್ ಫೀಸಿಗೂ ಅರ್ಹತೆ ಇರುವುದಾಗಿದೆ.

5. ಆಯೋಗದ ಅಧಿಕಾರಿಗಳು ಮತ್ತು ಸಿಬ್ಬಂದಿ.—(1) ಆಯೋಗಕ್ಕೆ, ಅದರ ಪ್ರಕಾರ್ಯಗಳನ್ನು ನೇರವೇರಿಸುವುದಕ್ಕೆ ಅವಶ್ಯಕವಾದ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಗಳನ್ನು ಸರಕಾರವು ಒದಗಿಸತಕ್ಕದ್ದು.

(2) (1)ನೇ ಉಪ-ವಿಭಾಗ ಪ್ರಕಾರ ನೇಮಿಸಲ್ಪಡುವ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ನೀಡಬೇಕಾದ ವೇತನ, ಭತ್ಯಗಳು, ನೇಮಕಾತಿ ರೀತಿ ಮತ್ತು ಸೇವೆಗೆ ಸಂಬಂಧಿಸಿದ ಇತರ ನಿಬಂಧನೆಗಳು ಇತ್ಯಾದಿ ನಿಗದಿಪಡಿಸಿದ ರೀತಿಯಲ್ಲಿ ಆಗಿರತಕ್ಕದ್ದು.

6. ವೇತನ, ಭತ್ಯಗಳು ಮತ್ತು ಆಡಳಿತ ಖರ್ಚುಗಳನ್ನು ಗ್ರ್ಯಾಂಟ್‌ಗಳಿಂದ ಅನುಮತಿಸತಕ್ಕದ್ದೆಂದು.—ಚೇರ್‌ಪರ್ಸನಿನ ವೇತನ ಮತ್ತು ಭತ್ಯಗಳು, ಸದಸ್ಯರಿಗೆ ನೀಡಬೇಕಾದ ಗೌರವಧನ, ಭತ್ಯಗಳು ಮತ್ತು ಸಿಟ್ಟಿಂಗ್ ಫೀಸು 3ನೇ ವಿಭಾಗದ (4)ನೇ ಉಪ-ವಿಭಾಗದಲ್ಲೂ 5ನೇ ವಿಭಾಗದ (1)ನೇ ಉಪ-ವಿಭಾಗದಲ್ಲೂ ಉಲ್ಲೇಖಿಸಿರುವ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವೇತನ, ಭತ್ಯಗಳು ಮತ್ತು ಪಿಂಚಣಿ ಒಳಗೊಂಡಂತಹ ಆಡಳಿತ ನಿರ್ವಹಣೆ ಖರ್ಚುಗಳನ್ನು 12ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಗ್ರ್ಯಾಂಟ್‌ಗಳಿಂದ ವಿನಿಯೋಗಿಸತಕ್ಕದ್ದು.

7. ತೆರವುಗಳು ಇತ್ಯಾದಿಗಳು ಆಯೋಗದ ನಡಾವಳಿಗಳನ್ನು ಅಸಿಂಧುಗೊಳಿಸುವಂತದಲ್ಲೆಂದು.—ಆಯೋಗದ ಯಾವುದೇ ಚಟುವಟಿಕೆಗಳು ಅಲ್ಲದಿದ್ದಲ್ಲಿ ನಡಾವಳಿಗಳು ಆಯೋಗದಲ್ಲಿ ಯಾವುದೇ ತೆರವು ಇದೆಯೆಂಬ ಅಲ್ಲದಿದ್ದಲ್ಲಿ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇದೆಯೆಂಬ ಕಾರಣದಿಂದ ಮಾತ್ರ ಅಸಿಂಧುವಾಗುವುದಲ್ಲ.

8. ಆಯೋಗದ ಸಭೆಗಳು.—(1) ಚೇರ್‌ಪರ್ಸನ್‌ರವರು ಯೋಗ್ಯವೆಂದು ಭಾವಿಸುವಂತಹ ಸ್ಥಳದಲ್ಲೂ ಅಂತಹ ಸಮಯದಲ್ಲೂ ನಿಗದಿಪಡಿಸಿದಂತಹ ಪ್ರಕ್ರಿಯೆಗಳನ್ನು ಪಾಲಿಸುತಾ, ಆಯೋಗದ ಸಭೆ ಸೇರತಕ್ಕದ್ದು.

(2) ಆಯೋಗದ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಚೇರ್‌ಪರ್ಸನಿನ ಅಲ್ಲದಿದ್ದಲ್ಲಿ ಇದಕ್ಕಾಗಿ ಆಯೋಗವು ಅಧಿಕೃತಗೊಳಿಸುವ ಪ್ರಕಾರ ರೆಜಿಸ್ಟ್ರಾರರ ಸಹಿಯಿಂದ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಆಯೋಗವು ಜಾರಿಗೊಳಿಸುವ ಇತರ ದಾಖಲೆಗಳನ್ನು ಕಾರ್ಯದರ್ಶಿಯವರ ಅಲ್ಲದಿದ್ದಲ್ಲಿ ಕಾರ್ಯದರ್ಶಿಯವರ ಪ್ರಭಾರವಹಿಸುವ ಅಧಿಕಾರಿಯವರ ಸಹಿಯಿಂದ ಅಧಿಪ್ರಮಾಣೀಕರಿಸತಕ್ಕದ್ದು.

(3) ಆಯೋಗವು, ಅದರ ಸಮಕ್ಷದಲ್ಲಿರುವ ಯಾವುದೇ ಕಾರ್ಯಗಳ ನಿರ್ವಹಣೆಯ ಅಗತ್ಯಕ್ಕಾಗಿ ಅಥವಾ ಯಾವುದೇ ವಿಶಿಷ್ಟ ವಿಷಯವನ್ನು ಪರಿಗಣಿಸುವುದಕ್ಕಾಗಿ ಪ್ರಸ್ತುತ ವಿಷಯದಲ್ಲಿ ವಿಶೇಷವಾದ ಜ್ಞಾನವಿರುವ ಎರಡಕ್ಕಿಂತ ಹೆಚ್ಚಲ್ಲದ ಸಂಖ್ಯೆಯ ವ್ಯಕ್ತಿಗಳನ್ನು ವಿಶೇಷ ಆಹ್ವಾನಿತರಾಗಿ ಕರೆಯಬಹುದಾಗಿದೆ ಮತ್ತು ಸಭೆಗಳಲ್ಲಿ ಪಾಲ್ಗೊಳ್ಳಿಸಬಹುದಾಗಿದೆ. ಆದರೆ ಅವರಿಗೆ ಆಯೋಗದ ಸಭೆಗಳಲ್ಲಿ ಮತ ಚಲಾಯಿಸುವ ಹಕ್ಕು ಇಲ್ಲದಿರುವುದಾಗಿದೆ.

(4) (3)ನೇ ಉಪ-ವಿಭಾಗ ಪ್ರಕಾರ ಆಹ್ವಾನಿಸಲ್ಪಡುವ ವ್ಯಕ್ತಿಗಳಿಗೆ ನಿಗದಿಪಡಿಸಬಹುದಾದಂತಹ ಭತ್ಯಗಳಿಗೆ ಅರ್ಹತೆ ಇರುವುದಾಗಿದೆ.

ಅಧ್ಯಾಯ III

ಆಯೋಗದ ಪ್ರಕಾರ್ಯಗಳು, ಅಧಿಕಾರಗಳು ಇತ್ಯಾದಿ

9. ಆಯೋಗದ ಪ್ರಕಾರ್ಯಗಳು.—(1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ವಯೋವೃದ್ಧರ ಕಲ್ಯಾಣಕ್ಕೆ ಮತ್ತು ಸಂರಕ್ಷಣೆಗೆ ಬೇಕಾಗಿ ಮಾರ್ಗಸೂಚಿಗಳನ್ನು ನೀಡುವುದು ಮತ್ತು ನೆರವು ನೀಡುವುದು ಮತ್ತು ಅವರಿಗೆ ಪುನರ್ವಸತಿ ಅವಶ್ಯಕವಿದ್ದಲ್ಲಿ ಸರಕಾರದೊಂದಿಗೆ ಸಹಕರಿಸಿ ಅದನ್ನು ಸಾಧ್ಯಗೊಳಿಸುವುದು ಮತ್ತು ಯಾವುದೇ ರೀತಿಯ ಕಾನೂನು ನೆರವು ಅವಶ್ಯಕವಿದ್ದಲ್ಲಿ ಅದನ್ನು ಲಭ್ಯಗೊಳಿಸುವುದು ಮತ್ತು ವಯೋವೃದ್ಧರ ನೈಪುಣ್ಯತೆಗಳನ್ನು ಮತ್ತು ಅನುಭವಜ್ಞಾನವನ್ನು ಸಾರ್ವಜನಿಕರಿಗೆ ಬಳಸಿಕೊಳ್ಳುವುದಕ್ಕೆ ಅಗತ್ಯವಾದ ಚಟುವಟಿಕೆಗಳನ್ನು ವಹಿಸಿಕೊಂಡು ನಡೆಸುವುದು ಮತ್ತು ಸರಕಾರವು ಕಾಲಾಕಾಲಗಳಲ್ಲಿ ಆಯೋಗಕ್ಕೆ ವಹಿಸಿಕೊಡುವಂತಹ ಇತರ ಹೊಣೆಗಾರಿಕೆಗಳನ್ನು ನಿರ್ವಹಿಸುವುದು ಆಯೋಗದ ಪ್ರಕಾರ್ಯವಾಗಿರುವುದಾಗಿದೆ.

(2) ಆಯೋಗವು ಅದರ ಗುರಿಯನ್ನು ಸಾಧಿಸುವುದಕ್ಕಾಗಿ ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದಾಗಿದೆ, ಅದೇನೆಂದರೆ:—

(ಎ) ವಯೋವೃದ್ಧರ ಕಲ್ಯಾಣಕ್ಕೂ ಸಂರಕ್ಷಣೆಗೂ ಬೇಕಾಗಿ ಭಾರತ ಸಂವಿಧಾನದಲ್ಲೋ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲೋ ಆದೇಶದಲ್ಲೋ ಇರುವ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿ ಪರಿಶೀಲನೆ ಅಲ್ಲದಿದ್ದಲ್ಲಿ ತನಿಖೆ ನಡೆಸಿ ಅವಶ್ಯಕವಾದ ಪರಿಹಾರಕ್ರಮಗಳನ್ನು ಶಿಫಾರಸು ಮಾಡುವುದು;

This is a digitally signed Gazette.
Authenticity may be verified through https://compose.kerala.gov.in/

5

(ಬ) ವಯೋವೃದ್ಧರ ಕಲ್ಯಾಣವನ್ನೂ ಸಂರಕ್ಷಣೆಯನ್ನೂ ಖಾತ್ರಿಪಡಿಸುವುದಕ್ಕಾಗಿ ಸರಕಾರದ ವಿವಿಧ ಇಲಾಖೆಗಳನ್ನು ಸಮನ್ವಯಗೊಳಿಸುವುದು;

(ಸಿ) ತೊರೆಯಲ್ಪಟ್ಟ ಅಥವಾ ಅನಾಥರಾದ ವಯೋವೃದ್ಧರನ್ನು ಸಂರಕ್ಷಣಾ ಕೇಂದ್ರಕ್ಕೆ ತಲುಪಿಸಲು ಅವಶ್ಯಕವಾದ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು;

(ಡಿ) ವಯೋವೃದ್ಧರ ಕಲ್ಯಾಣವನ್ನೂ ಸಂರಕ್ಷಣೆಯನ್ನೂ ಖಾತ್ರಿಪಡಿಸಲು ಆಯೋಜಿಸಿ ಜಾರಿಗೊಳಿಸಬಹುದಾದ ಯೋಜನೆಗಳಿಗೆ ಸಂಬಂಧಿಸಿ ಸರಕಾರಕ್ಕೆ ಉಪದೇಶ ನೀಡುವುದು;

(ಇ) ವಯೋವೃದ್ಧರ ಹಕ್ಕು, ಸಂರಕ್ಷಣೆ, ಕಲ್ಯಾಣ ಇತ್ಯಾದಿಗೆ ಸಂಬಂಧಿಸಿದ ಉಪಬಂಧಗಳನ್ನು ನಿಷೇಧಿಸಿರುವುದಾಗಿಯೋ ಉಲ್ಲಂಘಿಸಿರುವುದಾಗಿಯೋ ವಯೋವೃದ್ಧರ ವಿರುದ್ಧವಾಗಿ ಅತಿಕ್ರಮಣಗಳು ಆಗಿರುವುದಾಗಿ ದೂರು ಲಭಿಸುವುದೋ ಗಮನಕ್ಕೆ ಬಂದಿರುವುದೋ ಆದಲ್ಲಿ ಅಂತಹ ಉಪಬಂಧಗಳ ಉಲ್ಲಂಘನೆಯೋ ನಿಷೇಧವೋ ಅತಿಕ್ರಮಣವೋ ಪ್ರಥಮ ದೃಷ್ಟಿಯಲ್ಲಿ ಮನವರಿಕೆಯಾದಲ್ಲಿ ಒಂದು ಪ್ರಾಥಮಿಕ ತನಿಖೆ ನಡೆಸಿ ಲಿಖಿತವಾದ ವರದಿಯನ್ನು ಸಿದ್ಧಪಡಿಸಿ ಆದಷ್ಟು ಬೇಗನೇ ಸಂಬಂಧಪಟ್ಟ ಪ್ರಾಧಿಕಾರಗಳ ಗಮನಕ್ಕೆ ತಂದು ಮುಂದುವರಿದ ಕ್ರಮಗಳಿಗೆ ಶಿಫಾರಸು ಮಾಡುವುದು ಮತ್ತು ಅರ್ಹವಾದ ಕೇಸುಗಳಲ್ಲಿ ಸಂಬಂಧಪಟ್ಟ ಕಾನೂನು ಸಹಾಯ ಪ್ರಾಧಿಕಾರಗಳ ನೆರವನ್ನು ಲಭ್ಯಗೊಳಿಸುವುದು ಮಾಡುವುದು;

(ಎಫ್) ವಯೋವೃದ್ಧರನ್ನು ಬಂಧಿಸುವ ಜೈಲುಗಳು, ಲಾಕಪ್‌ಗಳು, ಬಂಧನಕ್ಕೆ ಸಂಬಂಧಪಟ್ಟ ಇತರ ಸ್ಥಳಗಳು ಮುಂತಾದೆಡೆಯಿಂದ ಲಭಿಸುವ ದೂರುಗಳ ಕುರಿತು ಪರಿಶೀಲಿಸಿ ಸಂಬಂಧಪಟ್ಟ ಪ್ರಾಧಿಕಾರಗಳಲ್ಲಿ ವರದಿಯನ್ನು ಸಲ್ಲಿಸುವುದು;

(ಜಿ) ನಿಗದಿಪಡಿಸಬಹುದಾದ ಪ್ರಕಾರ ವಯೋವೃದ್ಧರ ಸ್ಟ್ಯಾಟಸ್ ವಿವರ ಪತ್ರವನ್ನು ಸಿದ್ಧಪಡಿಸಿ ಪ್ರಕಟಿಸುವುದು;

(ಎಚ್) ಆಯಾಯ ಕಾಲದಲ್ಲಿ ಆಯೋಗದ ಪರಿಗಣನೆಗೆ ಕಳುಹಿಸುವ ಇತರ ವಿಷಯಗಳಲ್ಲಿ ಸರಕಾರಕ್ಕೆ ಉಪದೇಶ ನೀಡುವುದು.

10. ಆಯೋಗದ ಅಧಿಕಾರಗಳು.—(1) ಆಯೋಗಕ್ಕೆ, ಅದರ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ,—

(ಎ) ಸರಕಾರದ ಅನುಮತಿಯಿಂದ ಯಾವುದೇ ಸರಕಾರಿ ಅಧಿಕಾರಿಯ; ಅಲ್ಲದಿದ್ದಲ್ಲಿ

(ಬ) ಸರಕಾರದ ಅಧೀನದಲ್ಲಿರುವ ಕಾರ್ಪೊರೇಷನುಗಳ ಅಥವಾ ಬೋರ್ಡಿನ ಅಥವಾ ಸ್ಥಳೀಯ ಪ್ರಾಧಿಕಾರಗಳ ಅನುಮತಿಯಿಂದ ಮತ್ತು ಸರಕಾರದ ಸಮ್ಮತಿಯಿಂದ ಸಂಬಂಧಪಟ್ಟ ಕಾರ್ಪೊರೇಷನಿನ ಅಥವಾ ಬೋರ್ಡಿನ ಅಥವಾ ಸ್ಥಳೀಯ ಪ್ರಾಧಿಕಾರಗಳ ಯಾವುದೇ ಅಧಿಕಾರಿಯ ಸೇವೆಗಳನ್ನು ಬಳಸಿಕೊಳ್ಳಲು ಅಧಿಕಾರ ಇರುವುದಾಗಿದೆ.

(2) ಆಯೋಗಕ್ಕೆ, 9ನೇ ವಿಭಾಗ ಪ್ರಕಾರವಿರುವ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿ 1908ರ ದಿವಾಣಿ ಪ್ರಕ್ರಿಯಾ ಸಂಹಿತೆ (1908ರ 5ನೇ ಕೇಂದ್ರ ಅಧಿನಿಯಮ)ಯ ಕೆಳಗೆ ಒಂದು ದಾವೆಯನ್ನು ವಿಚಾರಣೆ ಮಾಡುವ ಒಂದು ಸಿವಿಲ್ ನ್ಯಾಯಾಲಯಕ್ಕಿರುವ ಎಲ್ಲ ಅಧಿಕಾರಗಳು ಇರುವುದಾಗಿದೆ, ಅದೇನೆಂದರೆ:—

(ಎ) ಯಾವುದೇ ವ್ಯಕ್ತಿಯನ್ನು ಸಮನ್ ಮಾಡಲು ಮತ್ತು ಹಾಜರಾತಿಯನ್ನು ಖಾತ್ರಿಪಡಿಸಲು ಮತ್ತು ಪ್ರಮಾಣವಚನದ ಮೇಲೆ ವಿಚಾರಣೆ ಮಾಡಲು;

(ಬ) ಯಾವುದೇ ದಾಖಲೆಯನ್ನು ಕಂಡುಹಿಡಿಯಲು ಮತ್ತು ಹಾಜರುಪಡಿಸಲು ಅವಶ್ಯಪಡಲು;

(ಸಿ) ಶಪಥ ಪತ್ರದ ಮೇಲೆ ಸಾಕ್ಷ್ಯಗಳನ್ನು ಪಡೆಯಲು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಆಫೀಸಿನಿಂದ ಅಥವಾ ಇತರ ಸಂಸ್ಥೆಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕೋರಲು;

(ಇ) ಸಾಕ್ಷಿಗಳನ್ನು ವಿಚಾರಣೆ ಮಾಡಲು ಮತ್ತು ದಾಖಲೆಗಳನ್ನು ಪರಿಶೀಲಿಸಲು ಮತ್ತು ಆಯೋಗಗಳನ್ನು ನಿಯೋಜಿಸಲು; ಅಲ್ಲದೆ

(ಎಫ್) ನಿಗದಿಪಡಿಸಬಹುದಾದ ಇತರ ಯಾವುದೇ ವಿಷಯಕ್ಕೆ.

This is a digitally signed Gazette.
Authenticity may be verified through https://compose.kerala.gov.in/

(3) 9ನೇ ವಿಭಾಗ ಪ್ರಕಾರ ಆಯೋಗವು ಒಂದು ವಿಚಾರಣೆ ಮಾಡುವಾಗ ಸಂಬಂಧಪಟ್ಟ ಕಕ್ಷಿಗಳಿಗೆ ನೇರವಾಗಿಯೋ ಅಲ್ಲದಿದ್ದಲ್ಲಿ ಅಧಿಕೃತಗೊಳಿಸಿದ ಪ್ರತಿನಿಧಿಯ ಮುಖೇನ ತಮಗೆ ಹೇಳುವುದನ್ನು ಹೇಳಲು ನ್ಯಾಯವಾದ ಒಂದು ಅವಕಾಶವನ್ನು ನೀಡತಕ್ಕದ್ದಾಗಿದೆ.

(4) ಈ ಅಧಿನಿಯಮದ ಪ್ರಕಾರ ನಡೆಸಿದ ಯಾವುದೇ ವಿಚಾರಣೆಯಲ್ಲೂ ಆಯೋಗದ ತೀರ್ಮಾನಗಳನ್ನು ಅದರ ಶಿಫಾರಸು ಸಹಿತವಾಗಿ ಯುಕ್ತವಾದ ಕ್ರಮಕ್ಕಾಗಿ ಅಲ್ಲದಿದ್ದಲ್ಲಿ ವಿವಾದಕ್ಕೊಳಪಟ್ಟ ಕಕ್ಷಿಗಳಿಗೆ ಪರಿಹಾರಕ್ಕಾಗಿ ವಿಚಾರಣೆಯನ್ನು ಪೂರ್ಣಗೊಳಿಸಿ ಒಂದು ತಿಂಗಳೊಳಗೆ ಸರಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(5) ಸಾಕ್ಷ್ಯದ ಭಾಗವಾಗಿ ಆಯೋಗದ ಸಮಕ್ಷದಲ್ಲಿ ಒಬ್ಬ ವ್ಯಕ್ತಿ ಆತನಿಗೆ ಸಂಬಂಧಿಸಿ ನೀಡುವ ಹೇಳಿಕೆ ಅಥವಾ ಸಾಕ್ಷ್ಯವನ್ನು, ಅಂತಹ ಹೇಳಿಕೆ ಅಥವಾ ಸಾಕ್ಷ್ಯದ ಮುಖೇನ ಸುಳ್ಳು ಸಾಕ್ಷ್ಯ ನೀಡಿರುವುದಕ್ಕಿರುವ ಪ್ರೋಸಿಕ್ಯೂಶನ್ ಕ್ರಮಗಳ ಹೊರತು, ಯಾವುದೇ ಸಿವಿಲ್ ನ್ಯಾಯಾಲಯದಲ್ಲೋ ಕ್ರಿಮಿನಲ್ ನ್ಯಾಯಾಲಯದಲ್ಲೋ ಇರುವ ಕಾನೂನುಕ್ರಮಗಳಲ್ಲಿ ಅಂತಹ ವ್ಯಕ್ತಿಯ ವಿರುದ್ಧವಾಗಿ ಉಪಯೋಗಿಸತಕ್ಕದ್ದಲ್ಲ.

11. ಆಯೋಗಕ್ಕಿರುವ ಅಂಶದಾನಗಳು, ಎಂಡೋವ್‌ಮೆಂಟ್‌ಗಳು ಇತ್ಯಾದಿ.—ಆಯೋಗಕ್ಕೆ, ಸರಕಾರದ ಪೂರ್ವಾನುಮತಿಯಿಂದ ಸರಕಾರವು ಈ ವಿಷಯದಲ್ಲಿ ನಿರ್ದಿಷ್ಟಪಡಿಸಿದಂತಹ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಟ್ಟು, ವಿವಿಧ ರೀತಿಯಲ್ಲಿರುವ ಸಾಹಿತ್ಯ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಯೋವೃದ್ಧರನ್ನು ಪ್ರೋತ್ಸಾಹಿಸುವುದಕ್ಕಾಗಿ ಎಂಡೋವ್‌ಮೆಂಟ್‌ಗಳನ್ನು ರಚಿಸುವುದಕ್ಕೂ ಬಹುಮಾನಗಳನ್ನು ಅಥವಾ ಪ್ರಶಸ್ತಿಗಳನ್ನು ನೀಡುವುದಕ್ಕೂ ಯಾವುದೇ ಸಂಘಟನೆಯಿಂದಲೋ ಅಥವಾ ವ್ಯಕ್ತಿಯಿಂದಲೋ ಕೊಡುಗೆಯಾಗಿ ಅಥವಾ ಅಂಶದಾನವಾಗಿ ಅಲ್ಲದಿದ್ದಲ್ಲಿ ಇತರ ಯಾವುದೇ ಹೆಸರಿನಲ್ಲಿ ಹಣ ಸ್ವೀಕರಿಸಲು ಅಧಿಕಾರ ಇರುವುದಾಗಿದೆ.

ಅಧ್ಯಾಯ IV

ಹಣಕಾಸು, ಲೆಕ್ಕಪತ್ರಗಳು, ಆಡಿಟ್ ಮತ್ತು ವಾರ್ಷಿಕ ವರದಿ

12. ಸರಕಾರದಿಂದಿರುವ ಗ್ರ್ಯಾಂಟುಗಳು.—(1) ಸರಕಾರವು, ವಿಧಾನಸಭೆಯು ಮಂಜೂರುಮಾಡಿದ ಕಾನೂನು ಮುಖೇನ ಯಥಾಪ್ರಕಾರ ಧನವಿನಿಯೋಗ ನಡೆಸಿದ ನಂತರ, ಈ ಅಧಿನಿಯಮದ ಉದ್ದೇಶಕ್ಕಾಗಿ ವಿನಿಯೋಗಿಸುವುದಕ್ಕಾಗಿ ಯುಕ್ತವೆಂದು ಭಾವಿಸುವಂತಹ ಮೊತ್ತವನ್ನು ಗ್ರ್ಯಾಂಟ್ ಆಗಿ ಆಯೋಗಕ್ಕೆ ನೀಡತಕ್ಕದ್ದಾಗಿದೆ.

(2) ಆಯೋಗಕ್ಕೆ, ಈ ಅಧಿನಿಯಮದ ಪ್ರಕಾರದ ಪ್ರಕಾರ್ಯಗಳನ್ನು ನಿರ್ವಹಿಸಲು ಯುಕ್ತವೆಂದು ಭಾವಿಸುವಂತಹ ಮೊತ್ತವನ್ನು, ಗ್ರ್ಯಾಂಟ್‌ನಿಂದ ಖರ್ಚುಮಾಡಬಹುದಾಗಿದೆ ಮತ್ತು ಅಂತಹ ಮೊತ್ತವನ್ನು (1)ನೇ ಉಪ-ವಿಭಾಗದಲ್ಲಿ ಉಲೇಖಿಸಿರುವ ಗ್ರ್ಯಾಂಟ್‌ನಿಂದ ನೀಡಬೇಕಾದ ವೆಚ್ಚ ಎಂದು ಭಾವಿಸತಕ್ಕದ್ದು.

13. ಲೆಕ್ಕಪತ್ರಗಳು ಮತ್ತು ಆಡಿಟ್.—(1) ಆಯೋಗವು, ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧವಾದ ದಾಖಲೆಗಳನ್ನು ಜೋಪಾನವಾಗಿಡತಕ್ಕದ್ದು ಮತ್ತು ಅಕೌಂಟೆಂಡ್ ಜನರಲ್‌ನೊಂದಿಗೆ ಸಮಾಲೋಚಿಸಿ ನಿಗದಿಪಡಿಸಿದಂತಹ ನಮೂನೆಯಲ್ಲಿ ಲೆಕ್ಕಪತ್ರಗಳ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

(2) ಆಯೋಗದ ಲೆಕ್ಕಪತ್ರಗಳನ್ನು, ಅಕೌಂಟೆಂಟ್ ಜನರಲ್ ಪ್ರತಿಯೊಂದು ಆರ್ಥಿಕ ವರ್ಷವೂ ಆಡಿಟ್‌ಮಾಡತಕ್ಕದ್ದು ಮತ್ತು ಅಂತಹ ಆಡಿಟ್‌ಗೆ ಸಂಬಂಧಿಸಿ ಉಂಟಾಗುವ ಖರ್ಚನ್ನು ಅಕೌಂಟೆಂಟ್ ಜನರಲ್‌ಗೆ ಆಯೋಗವು ನೀಡತಕ್ಕದ್ದಾಗಿದೆ.

(3) ಅಕೌಂಟೆಂಟ್ ಜನರಲ್‌ಗೆ ಅಥವಾ ಈ ಅಧಿನಿಯಮದ ಪ್ರಕಾರ ಆಯೋಗದ ಲೆಕ್ಕಪತ್ರಗಳ ಆಡಿಟ್‌ಗೆ ಸಂಬಂಧಿಸಿ ಆತನು ನೇಮಿಸುವ ಇತರ ಯಾವುದೇ ವ್ಯಕ್ತಿಗೆ, ಸಾಮಾನ್ಯವಾಗಿ ಅಕೌಂಟೆಂಟ್ ಜನರಲ್‌ಗೆ ಸರಕಾರಿ ಲೆಕ್ಕಪತ್ರಗಳ ಆಡಿಟ್ ಮಾಡುವಾಗ ಇರುವ ಅದೇ ಅಧಿಕಾರಗಳು ಮತ್ತು ವಿಶೇಷಹಕ್ಕುಗಳು ಇರುವುದಾಗಿದೆ, ವಿಶಿಷ್ಟವಾಗಿ ಬುಕ್‌ಗಳನ್ನು ಮತ್ತು ಲೆಕ್ಕಪತ್ರಗಳನ್ನು ಸಂಬಂಧಪಟ್ಟ ವೌಚರ್‌ಗಳನ್ನು, ಇತರ ದಾಖಲೆಗಳನ್ನು, ಮತ್ತು ಪೇಪರ್‌ಗಳನ್ನು ಹಾಜರುಪಡಿಸುವುದಕ್ಕೆ ಅವಶ್ಯಪಡಲು ಆಯೋಗದ ಯಾವುದೇ ಆಫೀಸನ್ನು ಪರಿಶೋಧಿಸುವುದಕ್ಕಿರುವ ಅಧಿಕಾರ ಇರುವುದಾಗಿದೆ.

(4) ಅಕೌಂಟೆಂಟ್ ಜನರಲ್ ಅಥವಾ ಆತನು ಈ ಉದ್ದೇಶಕ್ಕಾಗಿ ನಿಯೋಗಿಸಿದ ಇತರ ಯಾವುದೇ ವ್ಯಕ್ತಿ ಪ್ರಮಾಣೀಕರಿಸಿದ ಪ್ರಕಾರದ ಆಯೋಗದ ಲೆಕ್ಕಪತ್ರಗಳನ್ನು, ಅದರ ಮೇಲಿನ ಆಡಿಟ್ ವರದಿಯೊಂದಿಗೆ, ಆಯೋಗವು ಪ್ರತಿ ಆರ್ಥಿಕ ವರ್ಷವೂ ಸರಕಾರಕ್ಕೆ ಕಳುಹಿಸಿ ಕೊಡತಕ್ಕದ್ದು ಮತ್ತು ಸರಕಾರವು ಅದು ಲಭಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಆಡಿಟ್ ವರದಿಯನ್ನು ವಿಧಾನಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

14. ಆಯೋಗದ ವಾರ್ಷಿಕ ವರದಿ.—(1) ಆಯೋಗವು, ಪ್ರತಿಯೊಂದು ಆರ್ಥಿಕ ವರ್ಷ ಕೊನೆಗೊಂಡ ಅನಂತರ ಮೂರು ತಿಂಗಳೊಳಗೆ, ನಿಗದಿಪಡಿಸಿದಂತಹ ನಮೂನೆಯಲ್ಲೂ ಅಂತಹ ರೀತಿಯಲ್ಲೂ ಹಿಂದಿನ ಆರ್ಥಿಕ ವರ್ಷದಲ್ಲಿ ಕೈಗೊಂಡ ಚಟುವಟಿಕೆಗಳ ಮತ್ತು ಕಾರ್ಯಕ್ರಮಗಳ ಪೂರ್ಣ ಮಾಹಿತಿಗಳನ್ನು ವ್ಯಕ್ತಪಡಿಸುವ ಒಂದು ವಾರ್ಷಿಕ ವರದಿಯನ್ನು ಸರಕಾರಕ್ಕೆ ಸಲ್ಲಿಸತಕ್ಕದ್ದು.

(2) (1)ನೇ ಉಪ-ವಿಭಾಗ ಪ್ರಕಾರವಿರುವ ವರದಿಯ ಒಂದು ಪ್ರತಿಯನ್ನು ಅದು ಲಭಿಸಿದ ನಂತರ ಆರು ತಿಂಗಳೊಳಗೆ ಸರಕಾರವು, ವಿಧಾನಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.

ಅಧ್ಯಾಯ V

ಇತರೆ

15. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ಸಂರಕ್ಷಣೆ.—ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದುದೋ ಮಾಡಲು ಉದ್ದೇಶಿಸಿದುದೋ ಆದ ಯಾವುದೇ ಕಾರ್ಯಕ್ಕೆ ಸಂಬಂಧಿಸಿ ಚೇರ್‌ಪರ್ಸನಿನ, ಇತರ ಸದಸ್ಯನ, ಸೆಕ್ರಟರಿಯ, ಆಯೋಗದ ನಿರ್ದೇಶ ಪ್ರಕಾರ ಕಾರ್ಯಾಚರಿಸುವ ಆಯೋಗದ ಯಾವುದೇ ಅಧಿಕಾರಿಗಳ ಅಥವಾ ಸಿಬ್ಬಂದಿಗಳ ವಿರುದ್ಧವಾಗಿ ಯಾವುದೇ ದಾವೆಯೋ ಶಿಕ್ಷಾಕ್ರಮಗಳೋ ಕಾನೂನುಕ್ರಮಗಳೋ ನೆಲೆನಿಲ್ಲುವಂತದ್ದಲ್ಲ.

16. ಚೇರ್‌ಪರ್ಸನ್, ಸದಸ್ಯರುಗಳು, ಸೆಕ್ರೆಟರಿ, ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಾರ್ವಜನಿಕ ಸೇವಕರು ಆಗಿರುವರೆಂದು.—ಚೇರ್‌ಪರ್ಸನ್, ಸದಸ್ಯರುಗಳು, ಸೆಕ್ರೆಟರಿ, ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಗಳು 2023ರ ಭಾರತೀಯ ನ್ಯಾಯ ಸಂಹಿತೆ (2023ರ 45ನೇ ಕೇಂದ್ರ ಅಧಿನಿಯಮ)ಯ 2ನೇ ವಿಭಾಗದ (28)ನೇ ಖಂಡದ ಅರ್ಥವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಸೇವಕರೆಂದು ಭಾವಿಸತಕ್ಕದ್ದು.

17. ಇತರ ಕಾನೂನುಗಳ ಅನ್ವಯವನ್ನು ನಿಷೇಧಿಸುವಂತದಲ್ಲೆಂದು.—ಈ ಅಧಿನಿಯಮದಲ್ಲಿನ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಜೊತೆಗೆ ಮತ್ತು ಅದಕ್ಕೆ ಭಂಗಬರದಂತೆ ಆಗಿರುವುದಾಗಿದೆ.

18. ತೊಂದರೆಗಳನ್ನು ನೀಗಿಸುವುದಕ್ಕಿರುವ ಅಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆ ಉಂಟಾಗುವುದಾದಲ್ಲಿ, ಸರಕಾರಕ್ಕೆ, ಗಜೆಟ್‌ನಲ್ಲಿ ಪ್ರಕಟಿಸಿದ ಆದೇಶ ಮುಖೇನ ಅಂತಹ ತೊಂದರೆಯನ್ನು ನಿವಾರಿಸುವುದಕ್ಕೆ ಅವಶ್ಯಕವೆಂದು ಅಥವಾ ಯುಕ್ತವೆಂದು ಅದಕ್ಕೆ ಕಂಡುಬರುವಂತಹ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಲ್ಲದ ಉಪಬಂಧಗಳನ್ನು ರಚಿಸಬಹುದಾಗಿದೆ:

ಆದರೆ ಅಂತಹ ಯಾವುದೇ ಆದೇಶವನ್ನು ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳ ಕಾಲಾವಧಿಯು ಮುಕ್ತಾಯವಾದ ನಂತರ ಜಾರಿಗೊಳಿಸತಕ್ಕದ್ದಲ್ಲ.

(2) (1)ನೇ ಉಪ-ವಿಭಾಗ ಪ್ರಕಾರ ಜಾರಿಗೊಳಿಸಿದ ಪ್ರತಿಯೊಂದು ಆದೇಶವನ್ನು ಅದನ್ನು ಜಾರಿಗೊಳಿಸಿದ ನಂತರ ಆದಷ್ಟು ಬೇಗನೆ, ವಿಧಾನಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.

19. ನಿಯಮಗಳನ್ನು ರಚಿಸುವುದಕ್ಕಿರುವ ಅಧಿಕಾರ.—(1) ಸರಕಾರಕ್ಕೆ, ಗಜೆಟ್ ಅಧಿಸೂಚನೆಯ ಮುಖೇನ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದಾಗಿದೆ.

(2) ವಿಶಿಷ್ಟವಾಗಿ, ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಭಂಗಬರದಂತೆ ಮತ್ತು ಅಂತಹ ನಿಯಮಗಳಲ್ಲಿ ಈ ಕೆಳಗಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದಾಗಿದೆ, ಅದೇನೆಂದರೆ:—

(ಎ) ಚೇರ್‌ಪರ್ಸನ್‌ಗೆ ನೀಡಬೇಕಾದ ವೇತನ, ಭತ್ಯಗಳು, ಸೇವೆಗೆ ಸಂಬಂಧಿಸಿದ ಇತರ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಸದಸ್ಯರಿಗೆ ನೀಡಬೇಕಾದ ಗೌರವಧನ ಮತ್ತು ಭತ್ಯೆಗಳು ಇಲ್ಲದಿದ್ದಲ್ಲಿ ಸಿಟ್ಟಿಂಗ್ ಫೀಸ್;

(ಬಿ) 3ನೇ ವಿಭಾಗದ (4)ನೇ ಉಪ-ವಿಭಾಗ ಪ್ರಕಾರ ನೇಮಿಸಲ್ಪಡುವ ಸೆಕ್ರೆಟರಿ, ರಿಜಿಸ್ಟ್ರಾರ್, ಹಣಕಾಸು ಆಫೀಸರ್ ಮುಂತಾದವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(ಸಿ) 5ನೇ ವಿಭಾಗ ಪ್ರಕಾರ ಆಯೋಗದಲ್ಲಿ ನೇಮಿಸಬೇಕಾದ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ನೇಮಕಾತಿ ರೀತಿ, ವೇತನ, ಭತ್ಯೆಗಳು ಮತ್ತು ಸೇವಾ ಷರತ್ತುಗಳು;

This is a digitally signed Gazette.
Authenticity may be verified through https://compose.kerala.gov.in/

8

(ಡಿ) 8ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ಆಯೋಗದ ಸಭೆ ಕರೆದು ಸೇರಿಸುವುದಕ್ಕೆ ಪಾಲಿಸಬೇಕಾದ ಪ್ರಕ್ರಿಯೆಗಳು;

(ಇ) 8ನೇ ವಿಭಾಗದ (3)ನೇ ಉಪ-ವಿಭಾಗ ಪ್ರಕಾರ ವಿಶೇಷ ಆಹ್ವಾನಿತರಿಗೆ ನೀಡಬೇಕಾದ ಭತ್ಯೆಗಳು;

(ಎಫ್) 10ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ಪ್ರಕಾರ್ಯಗಳನ್ನು ನೆರವೇರಿಸುವ ಅಧಿಕಾರಿಗಳಿಗೆ ನೀಡಬೇಕಾದ ಭತ್ಯಗಳು ಮತ್ತು ಇತರ ಸೌಲಭ್ಯಗಳು;

(ಜಿ) 13ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರವಿರುವ ಆಯೋಗದ ವಾರ್ಷಿಕ ವಿವರಪತ್ರ ತಯಾರಿಸಬೇಕಾದ ನಮೂನೆ;

(ಎಚ್) 14ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ಆಯೋಗವು ಸಿದ್ಧಪಡಿಸಬೇಕಾದ ವಾರ್ಷಿಕ ವರದಿಯ ನಮೂನೆ ಮತ್ತು ಕಾಲ ಪರಿಮಿತಿ;

(ಐ) ನಿಗದಿಪಡಿಸಬೇಕಾದ ಅಥವಾ ನಿಗದಿಪಡಿಸಬಹುದಾದಂತಹ ಇತರ ವಿಷಯಗಳು.

(3) ಈ ಅಧಿನಿಯಮದ ಪ್ರಕಾರ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೇ, ವಿಧಾನಸಭೆಯು ಅಧಿವೇಶನದಲ್ಲಿರುವಾಗ ಸಭೆಯ ಸಮಕ್ಷದಲ್ಲಿ, ಒಂದು ಅಧಿವೇಶನದಲ್ಲೋ ಅನುಕ್ರಮವಾದ ಎರಡು ಅಧಿವೇಶನಗಳಲ್ಲೋ ಒಳಗೊಳ್ಳುವ ಒಟ್ಟು ಹದಿನಾಲ್ಕು ದಿವಸಗಳ ಕಾಲಾವಧಿಗೆ ಮಂಡಿಸತಕ್ಕದ್ದು ಮತ್ತು ಆ ರೀತಿ ಯಾವ ಅಧಿವೇಶನದಲ್ಲಿ ಮಂಡಿಸುವುದೋ ಆ ಅಧಿವೇಶನವೋ ನಿಕಟಾನಂತರದ ಅಧಿವೇಶನವೋ ಕೊನೆಗೊಳ್ಳುವುದಕ್ಕಿಂತ ಮುಂಚಿತವಾಗಿ, ವಿಧಾನಸಭೆಯು ಪ್ರಸ್ತುತ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡುವುದೋ ಅಲ್ಲದಿದ್ದಲ್ಲಿ ಆ ನಿಯಮವನ್ನು ರಚಿಸಬೇಕಾಗಿಲ್ಲೆಂದು ತೀರ್ಮಾನಿಸುವುದೋ ಮಾಡುವುದಾದಲ್ಲಿ, ಆ ನಿಯಮಕ್ಕೆ ಅನಂತರ ಆಯಾಯ ವಿಷಯದಂತೆ, ಆ ರೀತಿ ಮಾರ್ಪಾಟುಗೊಳಿಸಿದ ರೀತಿಯಲ್ಲಿ ಮಾತ್ರ ಪ್ರಾಬಲ್ಯವಿರುವುದು ಅಥವಾ ಯಾವುದೇ ಪ್ರಾಬಲ್ಯವು ಇಲ್ಲದಾಗುವುದಾಗಿದೆ; ಹಾಗಿದ್ದರೂ, ಅಂತಹ ಯಾವುದೇ ಮಾರ್ಪಾಟುಗೊಳಿಸುವಿಕೆಯೋ ರದ್ದುಗೊಳಿಸುವಿಕೆಯೋ ಆ ನಿಯಮಗಳ ಪ್ರಕಾರ ಹಿಂದೆ ಮಾಡಿರುವ ಯಾವುದೇ ವಿಷಯದ ಸಿಂಧುತ್ವಕ್ಕೆ ಭಂಗವಾಗದ ರೀತಿಯಲ್ಲಿ ಆಗಿರತಕ್ಕದ್ದು.

20. ಸಿಂಧುತ್ವ.—2024ರ ಕೇರಳ ರಾಜ್ಯ ವಯೋವೃದ್ಧ ಆಯೋಗ (ತಿದ್ದುಪಡಿ) ಅಧ್ಯಾದೇಶ (2024ರ 3)ವು (ಇನ್ನು ಮುಂದೆ ಪ್ರಸ್ತುತ ಅಧ್ಯಾದೇಶವೆಂದು ಉಲ್ಲೇಖಿಸಲ್ಪಡುವುದು)ದ ಕಾರ್ಯಾಚರಣೆಯು ಮುಕ್ತಾಯಗೊಂಡಿದ್ದರೂ,—

(ಎ) ಪ್ರಸ್ತುತ ಅಧ್ಯಾದೇಶದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು, ಈ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

(ಬಿ) ಪ್ರಸ್ತುತ ಅಧ್ಯಾದೇಶದ ಕಾರ್ಯಾಚರಣೆಯು ಮುಕ್ತಾಯಗೊಂಡ ನಂತರ ಮತ್ತು ಈ ಅಧಿನಿಯಮವನ್ನು ಗಜೆಟಿನಲ್ಲಿ ಪ್ರಕಟಿಸುವ ದಿನಾಂಕಕ್ಕಿಂತ ಮೊದಲು ಮಾಡಿದ ಯಾವುದೇ ಕಾರ್ಯ ಮತ್ತು ಕೈಗೊಂಡ ಯಾವುದೇ ಕ್ರಮವು ಪ್ರಸ್ತುತ ಅಧ್ಯಾದೇಶದ ಕಾರ್ಯಾಚರಣೆಯು ಮುಕ್ತಾಯವಾಗದಿರುತ್ತಿದ್ದಲ್ಲಿ ಪ್ರಸ್ತುತ ಅಧ್ಯಾದೇಶದ ಪ್ರಕಾರ ಮಾಡಬಹುದಾಗಿತ್ತು ಅಥವಾ ಕೈಗೊಳ್ಳಬಹುದಾಗಿತ್ತು ಆಗಿದ್ದಲ್ಲಿ ಈ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಡಿ) ಇಲಾಖೆ

ಅಧಿಸೂಚನೆ

ನಂಬ್ರ 43/ಲೆಗ್. ಡಿ2/2024/ಕಾನೂನು. ತಿರುವನಂತಪುರಂ, *2025* ಏಪ್ರಿಲ್ *25,* / *1200* ಮೇಷ *12/* / *1947* ವೈಶಾಖ *5.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆ ಮಂಜೂರು ಮಾಡಿದ ಮಸೂದೆಗೆ 2025 ಏಪ್ರಿಲ್ 24ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2025ರ 6ನೇ ಅಧಿನಿಯಮ

2025ರ ಕೇರಳ ಕ್ರೀಡೆಗಳ (ತಿದ್ದುಪಡಿ) ಅಧಿನಿಯಮ

2000ದ ಕೇರಳ ಕ್ರೀಡೆಗಳ ಅಧಿನಿಯಮವನ್ನು ಮತ್ತೂ ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2000ದ ಕೇರಳ ಕ್ರೀಡೆಗಳ ಅಧಿನಿಯಮ (2001ರ 2) ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತೂ ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2025ರ ಕೇರಳ ಕ್ರೀಡೆಗಳ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. ಒಂದು ಪದಪ್ರಯೋಗದ ಬದಲು ಬೇರೊಂದು ಪದಪ್ರಯೋಗದ ಸೇರಿಸುವಿಕೆ.—2000ದ ಕೇರಳ ಕ್ರೀಡೆಗಳ ಅಧಿನಿಯಮ (2001ರ 2) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ ಶೀರ್ಷಿಕೆಯಲ್ಲೂ, ದೀರ್ಘ ಶೀರ್ಷಿಕೆಯಲ್ಲೂ, ಪೀಠಿಕೆಯಲ್ಲೂ, ಪ್ರಧಾನ ಅಧಿನಿಯಮದ ಇತರ ವಿಭಾಗಗಳಲ್ಲೂ "ಸ್ಪೋರ್ಟ್ಸ್" ಎಂಬ ಪದ ಬರುವಲ್ಲೆಲ್ಲಾ ಅದರ ಬದಲು "ಸ್ಪೋರ್ಟ್ಸ್" ಎಂಬ ಪದವನ್ನು ಸೇರಿಸತಕ್ಕದ್ದು.

G. 9/2025/GPC.

This is a digitally signed Gazette.
Authenticity may be verified through https://compose.kerala.gov.in/

2

3. ದೀರ್ಘ ಶೀರ್ಷಿಕೆಯ ತಿದ್ದುಪಡಿ.—2000ದ ಕೇರಳ ಕ್ರೀಡೆಗಳ ಅಧಿನಿಯಮ (2001ರ 2)ದ ದೀರ್ಘ ಶೀರ್ಷಿಕೆಯಲ್ಲಿ, "ಕ್ರೀಡೆಗಳನ್ನು ಮತ್ತು ಪಂದ್ಯಾಟಗಳನ್ನು ಪ್ರೋತ್ಸಾಹಿಸುವುದಕ್ಕಾಗಿಯೂ" ಎಂಬ ಪದಗಳ ಬದಲು "ಕ್ರೀಡೆ, ಗೇಮ್ಸ್, ಇ-ಕ್ರೀಡೆ ಮತ್ತು ಕ್ರೀಡಾ ಸಂಪತ್ತು ಇತ್ಯಾದಿಯನ್ನು ಪ್ರೋತ್ಸಾಹಿಸುವುದಕ್ಕಾಗಿಯೂ" ಎಂಬ ಪದಗಳನ್ನೂ ಚಿಹ್ನೆಗಳನ್ನೂ ಸೇರಿಸತಕ್ಕದ್ದು.

4. ಪೀಠಿಕೆಯ ತಿದ್ದುಪಡಿ.—ಪ್ರಧಾನ ಅಧಿನಿಯಮದ ಪೀಠಿಕೆಯಲ್ಲಿ "ಕ್ರೀಡೆಗಳನ್ನು ಮತ್ತು ಪಂದ್ಯಾಟಗಳನ್ನು ಪ್ರೋತ್ಸಾಹಿಸುವುದಕ್ಕಾಗಿಯೂ" ಎಂಬ ಪದಗಳ ಬದಲು "ಕ್ರೀಡೆ, ಗೇಮ್ಸ್, ಇ-ಕ್ರೀಡೆ ಮತ್ತು ಕ್ರೀಡಾ ಸಂಪತ್ತನ್ನು ಪ್ರೋತ್ಸಾಹಿಸುವುದಕ್ಕಾಗಿಯೂ" ಎಂಬ ಪದಗಳನ್ನೂ ಚಿಹ್ನೆಗಳನ್ನೂ ಸೇರಿಸತಕ್ಕದ್ದು.

5. ವಿಭಾಗ 2ರ ತಿದ್ದುಪಡಿ.—ಪ್ರಧಾನ ಅಧಿನಿಯಮದ 2ನೇ ವಿಭಾಗದಲ್ಲಿ,—

(i) ಖಂಡ (vi)ರ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(viಎ) "ಇ-ಕ್ರೀಡೆ" ಅಂದರೆ, ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನು ಉಪಯೋಗಿಸಿ ವ್ಯಕ್ತಿಗಳು ತಮ್ಮೊಳಗೋ ಟೀಮುಗಳು ತಮ್ಮೊಳಗೊ ಸ್ಪರ್ಧಾತ್ಮಕ ತಳಹದಿಯಲ್ಲಿ ಆನ್‌ಲೈನಾಗಿ ಆಡುವುದು ಮತ್ತು ಪರಿಣತಿ ಮತ್ತು ದೈಹಿಕ ಸದೃಢತೆ ಒಳಗೊಳ್ಳುವ ಮತ್ತು ಕಾನೂನುಬದ್ಧವಾಗಿ ಅಂಗೀಕರಿಸಲ್ಪಟ್ಟ ಇಲೆಕ್ಟ್ರೋನಿಕ್ ರೂಪದಲ್ಲಿರುವ ಕ್ರೀಡೆ ಎಂದರ್ಥ;"'.

(ii) ಖಂಡ (xiii)ರ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xiiiಎ) "ಅನುಸೂಚಿ" ಅಂದರೆ, ಈ ಅಧಿನಿಯಮದಲ್ಲಿ ಅನುಬಂಧವಾಗಿ ಸೇರಿಸಿರುವ ಅನುಸೂಚಿ ಎಂದರ್ಥ;"'.

6. ವಿಭಾಗ 3ರ ತಿದ್ದುಪಡಿ.—ಪ್ರಧಾನ ಅಧಿನಿಯಮದ 3ನೇ ವಿಭಾಗದ ಉಪ-ವಿಭಾಗ (3)ರಲ್ಲಿ "ಪದನಿಮಿತ್ತ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ (ಬಿ) ಐಟಮ್‌ನ ನಂತರ ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬಿಎ) ಗೃಹ ಇಲಾಖಾ ಕಾರ್ಯದರ್ಶಿ;

(ಬಿಬಿ) ಉನ್ನತ ಶಿಕ್ಷಣ ಇಲಾಖಾ ಕಾರ್ಯದರ್ಶಿ;

(ಬಿಸಿ) ಸಾರ್ವಜನಿಕ ಶಿಕ್ಷಣ ಇಲಾಖಾ ಕಾರ್ಯದರ್ಶಿ;

(ಬಿಡಿ) ಸ್ಥಳೀಯ ಸ್ವಯಂ ಆಡಳಿತ ಇಲಾಖಾ ಕಾರ್ಯದರ್ಶಿ;

(ಬಿಇ) ಪ್ರವಾಸೋದ್ಯಮ ಇಲಾಖಾ ಕಾರ್ಯದರ್ಶಿ;

(ಬಿಎಫ್) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖಾ ಕಾರ್ಯದರ್ಶಿ;

(ಬಿಜಿ) ಆರೋಗ್ಯ ಕುಟುಂಬ ಕಲ್ಯಾಣ ಇಲಾಖಾ ಕಾರ್ಯದರ್ಶಿ;".

7. ವಿಭಾಗ 4ರ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 4ರ ಉಪ-ವಿಭಾಗ (1)ರ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) ಸರಕಾರವು, ಕ್ರೀಡಾ ಯುವಜನ ವ್ಯವಹಾರ ಡೈರೆಕ್ಟರರನ್ನು ರಾಜ್ಯ ಕ್ರೀಡಾ ಕೌನ್ಸಿಲಿನ ಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.".

8. ವಿಭಾಗ 5ರ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 5ರ ಉಪ-ವಿಭಾಗ (2)ರಲ್ಲಿ,—

(i) ಖಂಡ (ಎ) ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಎ) ರಾಜ್ಯದಲ್ಲಿ ಇ-ಕ್ರೀಡೆಯನ್ನು ನಿಗದಿಪಡಿಸಬಹುದಾದ ರೀತಿಯಲ್ಲಿ ಸಂಘಟಿಸುವುದು, ಕ್ರಮಬದ್ಧಗೊಳಿಸುವುದು ಮತ್ತು ಅಭಿವೃದ್ಧಿಪಡಿಸುವುದು ಮಾಡುವುದು;".

(ii) ಖಂಡ (ಬಿ)ಯಲ್ಲಿ "ಸರ್ಕಸ್ ತರಬೇತಿ ಕೇಂದ್ರಗಳು," ಎಂಬ ಪದಗಳ ಮತ್ತು ಚಿಹ್ನೆಯ ನಂತರ "ಕ್ರೀಡಾ ಇನ್‌ಸ್ಟಿಟ್ಯೂಟ್, ಪಾರಾಲಿಂಬಿಕ್ ಕೇಂದ್ರಗಳು, ಕ್ರೀಡಾ ಶಾಲೆಗಳು" ಎಂಬ ಪದಗಳನ್ನೂ ಚಿಹ್ನೆಗಳನ್ನೂ ಸೇರಿಸತಕ್ಕದ್ದು.

(iii) ಖಂಡ (ಬಿ) ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬಿಎ) ಸ್ಟೇಡಿಯಂ, ಆಟದ ಮೈದಾನ, ಈಜುಕೊಳ, ಕ್ರೀಡಾ ಹಾಸ್ಟೆಲುಗಳು, ಇತರ ಕ್ರೀಡಾ ಸೌಲಭ್ಯಗಳು ಮುಂತಾದ ಮೂಲಭೂತ ಸೌಲಭ್ಯಗಳ ನಿರ್ಮಾಣ, ಆಧುನೀಕರಣ, ಪಾಲನೆ ಇತ್ಯಾದಿ, ಪ್ರತಿಯೊಂದು ವಿಶೇಷ ವಿಷಯವನ್ನು ತಳಹದಿಯನ್ನಾಗಿಸಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಿಂದ ಒಂದು 'ಸ್ಪೆಷಲ್ ಪರ್ಪಸ್ ವೆಹಿಕಲ್' ಮುಖೇನ ನಡೆಸುವುದು;

This is a digitally signed Gazette.
Authenticity may be verified through https://compose.kerala.gov.in/

3

വിവരണം:—ഈ ഖണ്ഡത്തിന്റെ ആവശ്യത്തിനായി "സ്പെഷൽ പർപ്പസ് വെഹിക്കിൾ" എന്നതിന് 2013ലെ കമ്പനികൾ നിയമം (2013ലെ 18ാം കേന്ദ്ര നിയമം)ന്റെ വകുപ്പുകൾ പ്രകാരം രൂപീകരിച്ച "ക്രീഡാ കേരള ഫൗണ്ടേഷൻ" എന്നർത്ഥം;".

(iv) ഖണ്ഡം (ഇ) നു ശേഷം, ഈ താഴെപ്പറയുന്ന ഖണ്ഡങ്ങൾ കൂട്ടിച്ചേർക്കുന്നതും, അതായത്:—

"(ഇഎ) കേരള സ്റ്റാർട്ടപ്പ് മിഷനുമായി സഹകരിച്ച് 'ക്രീഡാ ഇന്നോവേഷൻ സോൺ' സ്ഥാപിക്കുന്നതും;

(ഇബി) ക്രീഡാ മെഡിസിൻ, ക്രീഡാ എഞ്ചിനീയറിംഗ്, ക്രീഡാ സയൻസ് എന്നീ വിഭാഗങ്ങൾ പ്രോത്സാഹിപ്പിക്കുന്നതും;

(ഇസി) ക്രീഡാ ലീഗുകൾ നിശ്ചിത രീതിയിൽ സംഘടിപ്പിക്കുന്നതും;

(ഇഡി) വാർഷിക സാമ്പത്തിക ക്രീഡാ സർവ്വേ നിശ്ചിത രീതിയിൽ നടത്തുന്നതും;

(ഇഇ) വിദ്യാഭ്യാസ സ്ഥാപനങ്ങളുമായി സഹകരിച്ച് ക്രീഡാ കേരള സ്കൂൾ ഗെയിംസ്, ക്രീഡാ കേരള അന്തർ സർവ്വകലാശാല ഗെയിംസ് തുടങ്ങിയവ സംഘടിപ്പിക്കുന്നതും;

(ഇഎഫ്) വിദ്യാഭ്യാസ സ്ഥാപനങ്ങളുമായി സഹകരിച്ച് സ്കൂൾ തലത്തിലുള്ള മത്സരങ്ങളിൽ നിന്ന് ക്രീഡാ പ്രതിഭകളെ കണ്ടെത്തുന്നതിനുള്ള നിശ്ചിത രീതിയിൽ ഒരു സംവിധാനം രൂപീകരിക്കുന്നതും;

(ഇജി) അന്താരാഷ്ട്ര പരിശീലകർ, ജഡ്ജുമാർ തുടങ്ങിയവരുടെ സേവനം ക്രീഡാപ്രതിഭകൾക്ക് ലഭ്യമാക്കുന്നതിനുള്ള നടപടികൾ സ്വീകരിക്കുന്നതും;

(ഇഎച്) ക്രീഡാ അരീനകൾ, ക്രീഡാ ടർഫുകൾ, വെൽനസ് സെന്ററുകൾ തുടങ്ങിയവയ്ക്ക് നിലവിൽ പ്രാബല്യത്തിലുള്ള മറ്റേതെങ്കിലും നിയമത്തിന്റെ വ്യവസ്ഥകൾക്ക് വിരുദ്ധമല്ലാത്ത നിശ്ചിത രീതിയിൽ നിർമ്മാണത്തിനും, പ്രവർത്തനത്തിനുമുള്ള മാനദണ്ഡങ്ങൾ നിശ്ചയിക്കുന്നതും;

(ഇഐ) എല്ലാ ക്രീഡാ ഇനങ്ങളിലും വൈജ്ഞാനിക പരിശീലനം നൽകുന്നതിനുള്ള ക്രമീകരണങ്ങൾ നടത്തുന്നതും;

(ഇജെ) ക്രീഡാപ്രതിഭകൾക്ക് ആവശ്യമായ നിർദ്ദേശങ്ങൾ നൽകുന്നതിനായി ക്രീഡാ സംഘാടകർ, അനലിസ്റ്റുകൾ, ന്യൂട്രീഷൻ സ്പെഷലിസ്റ്റുകൾ എന്നിവരടങ്ങുന്ന ഒരു ടീമിനെ രൂപീകരിക്കുന്നതും;

(ഇകെ) ക്രീഡാ അടിസ്ഥാന സൗകര്യങ്ങൾ പരമാവധി വ്യക്തികൾക്ക് ഉപയോഗിക്കാൻ സാധ്യമാകുന്ന നിശ്ചിത രീതിയിൽ സ്റ്റേറ്റ് ക്രീഡാ ഗ്രിഡിനെ അഭിവൃദ്ധിപ്പെടുത്തുന്നതും;

(ഇഎൽ) ക്രീഡാപ്രതിഭകളുടെ പുരോഗതിയും കഴിവും വിലയിരുത്തുന്നതിനായി 'ക്രീഡാ ടാലന്റ് ഐഡന്റിഫിക്കേഷൻ പ്രോട്ടോക്കോൾ' സംവിധാനം നിശ്ചിത രീതിയിൽ ഏർപ്പെടുത്തുന്നതും;

(ഇഎം) എല്ലാ ക്രീഡാപ്രതിഭകളെയും തുടർച്ചയായി വിലയിരുത്തുന്നതിനായി 'ക്രീഡാ ടാലന്റ് കണ്ടിന്യുവസ് ഇവാലുവേഷൻ' നടപ്പിലാക്കുന്നതും;

(ഇഎൻ) അന്താരാഷ്ട്രതല മത്സരങ്ങളിൽ പങ്കെടുക്കുന്ന ക്രീഡാപ്രതിഭകൾക്ക് പരിശീലനം നൽകുന്നതിനായി ദേശീയ അക്കാദമികളുടെ ഒരു ശൃംഖല സ്ഥാപിക്കുന്നതും;

(ഇഒ) പരിശീലകർ, കോച്ചുമാർ തുടങ്ങിയവരുടെ കഴിവുകൾ വിലയിരുത്തുന്നതിനുള്ള സംവിധാനം നിശ്ചിത രീതിയിൽ ഏർപ്പെടുത്തുന്നതും;

(ഇപി) ക്രീഡാ കലണ്ടർ നിശ്ചിത രീതിയിൽ തയ്യാറാക്കുന്നതും;

(ഇക്യൂ) ക്രീഡാപ്രതിഭകളുടെ പരിക്കുകൾ കൈകാര്യം ചെയ്യുന്നതിനുള്ള പരിക്ക് പരിഹാര സംവിധാനം നിശ്ചിത രീതിയിൽ തയ്യാറാക്കുന്നതും;

(ഇആർ) വിദ്യാഭ്യാസ സ്ഥാപനങ്ങളിലെ ക്രീഡാ പാഠ്യപദ്ധതി തയ്യാറാക്കുന്നതിനുള്ള അഭിപ്രായങ്ങളും നിർദ്ദേശങ്ങളും നിശ്ചിത രീതിയിൽ നൽകുന്നതും;

(ഇഎസ്) ക്രീഡാ അടിസ്ഥാന സൗകര്യങ്ങൾ, ക്രീഡാ മേളകൾ, അക്കാദമികൾ തുടങ്ങിയവയിൽ നിക്ഷേപം നടത്താൻ സംരംഭകരെ പ്രോത്സാഹിപ്പിക്കുന്നതും;

This is a digitally signed Gazette.
Authenticity may be verified through https://compose.kerala.gov.in/

4

(ಇಟಿ) ಮೂಲ ಸೌಕರ್ಯ ಅಭಿವೃದ್ಧಿ, ಕ್ರೀಡಾ ಉಪಕರಣಗಳ ನಿರ್ಮಾಣ, ತರಬೇತಿ ಮುಂತಾದವುಗಳಿಗೆ ಸಂಬಂಧಿಸಿದ ಸ್ಟಾರ್ಟಪ್‌ಗಳಿಗೆ, ನಿಗದಿಪಡಿಸಬಹುದಾದ ರೀತಿಯಲ್ಲಿ ಅನುದಾನಗಳ ಅಥವಾ ನಿಧಿಗಳ ಮುಖೇನ ನೆರವು ನೀಡುವುದು;

(ಇಯು) ದೈಹಿಕ ಸಾಮರ್ಥ್ಯ ವ್ಯಾಯಾಮ ಪ್ರಚಾರ ಕಾರ್ಯಕ್ರಮಗಳನ್ನು ನಡೆಸುವುದು;

(ಇವಿ) ಸಾರ್ವಜನಿಕ ಆರೋಗ್ಯಕ್ಕಾಗಿ ಕ್ರೀಡಾ ಸಾಮರ್ಥ್ಯವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಜಿಲ್ಲಾ ಕ್ರೀಡಾ ಕೌನ್ಸಿಲ್‌ನ, ಕಾರ್ಪರೇಶನ್ ಕ್ರೀಡಾ ಕೌನ್ಸಿಲ್‌ನ, ಮುನಿಸಿಪಲ್ ಕ್ರೀಡಾ ಕೌನ್ಸಿಲ್‌ನ, ಅಥವಾ ಗ್ರಾಮ ಕ್ರೀಡಾ ಕೌನ್ಸಿಲ್‌ನ ಮುಖೇನ ಶಿಕ್ಷಣ ಸಂಸ್ಥೆಗಳಲ್ಲಿನ ಆಟದ ಮೈದಾನಗಳ ಬಳಕೆಯನ್ನು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಮತ್ತು ಶಿಕ್ಷಣ ಸಂಸ್ಥೆಗಳೊಂದಿಗೆ ಸಹಕರಿಸುತಾ, ನಿಗದಿಪಡಿಸಬಹುದಾದ ರೀತಿಯಲ್ಲಿ ಕ್ರಮಬದ್ಧಗೊಳಿಸುವುದು;

(ಇಡಬ್ಲ್ಯೂ) ಶಿಕ್ಷಣ ಸಂಸ್ಥೆಗಳ ಸಹಕಾರದಿಂದ ಇಂಟರ್ ಸ್ಕೂಲ್, ಇಂಟರ್ ಕಾಲೇಜು, ಇಂಟರ್ ಯೂನಿವರ್ಸಿಟಿ ಚಾಂಪ್ಯನ್‌ಶಿಪ್‌ಗಳನ್ನು, ನಿಗದಿಪಡಿಸಬಹುದಾದ ರೀತಿಯಲ್ಲಿ ಸಂಘಟಿಸುವುದು;

(ಇಎಕ್ಸ್) 2011ರ ನ್ಯಾಶನಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಕೋಡ್ ಒಫ್ ಇಂಡಿಯಾದ ಉಪಬಂಧಗಳನ್ನು, ಅವಶ್ಯಕವಾದ ತಿದ್ದುಪಡಿಗಳೊಂದಿಗೆ ಜಾರಿಗೊಳಿಸುವುದು;

(ಇವೈ) ಮಹಿಳೆಯರಿಗೂ, ವಿಭಿನ್ನ ಸಾಮರ್ಥ್ಯದ ಕ್ರೀಡಾಪಟುಗಳಿಗಾಗಿ ವಿಶೇಷ ಆಟದ ಮೈದಾನಗಳನ್ನು ಸಿದ್ಧಪಡಿಸುವುದು;

(ಇಝಡ್) ಕಮ್ಯುನಿಟಿ ಫಿಸಿಕಲ್ ಆಕ್ಟಿವಿಟಿ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ನಿಗದಿಪಡಿಸಬಹುದಾದ ರೀತಿಯಲ್ಲಿ ಅಭಿವೃದ್ಧಿಪಡಿಸುವುದು;

(ಇಝಡ್ಎ) ಕ್ರೀಡಾ ಐಟಮ್‌ಗಳ ಮೆಡಲ್ ಸಾಧ್ಯತೆ ಅನುಸರಿಸಿ ಮತ್ತು ಪ್ರಚಾರಕ್ಕೆ ಅನುಸರಿಸಿ ಕ್ರೀಡಾ ಐಟಮ್‌ಗಳ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸುವುದು;

(ಇಝಡ್ಬಿ) ವಿಶ್ವ ಪ್ರಸಿದ್ಧವಾದ ಅಕಾಡೆಮಿಗಳಿಂದಿರುವ ಹೂಡಿಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿ 'ಕ್ರೀಡಾ ಕೇರಳ ಎಲೈಟ್ ಅಕಾಡೆಮಿಗಳನ್ನು' ರಚಿಸುವುದು;

(ಇಝಡ್ಸಿ) ಬಿಲಿಯರ್ಡ್ಸ್, ಸ್ನೂಕರ್, ಸ್ಕ್ವಾಶ್ ಮತ್ತು ಗ್ರೀನ್ ಕ್ರೀಡಾ ವಿಭಾಗಕ್ಕೊಳಪಡುವ ಗೋಲ್ಡ್ ಮುಂತಾದವನ್ನು ಸಂಘಟಿಸುವುದು;

(ಇಝಡ್ಡಿ) ಪ್ರವಾಸೋದ್ಯಮ ಇಲಾಖೆಯೊಂದಿಗೆ ಸಹಕರಿಸುತಾ ಟ್ರಕ್ಕಿಂಗ್, ರೋಕ್ ಕ್ಲೈಂಬಿಂಗ್, ಪಾರಾಗ್ಲೈಡಿಂಗ್, ವಾಟರ್ ರಫ್ಟಿಂಗ್, ಕಯಾಕಿಂಗ್, ಕನೋಯಿಂಗ್, ಸೈಲಿಂಗ್, ವಿಂಡ್ ಸರ್ಫಿಂಗ್, ಸ್ಕ್ಯೂಬಡೈವಿಂಗ್ ಮುಂತಾದವುಗಳನ್ನು ಸಂಘಟಿಸುವುದು;

(ಇಝಡ್ಇ) ಕ್ರೀಡಾ ಸ್ಕೂಲ್, ಕ್ರೀಡಾ ಡಿವಿಷನ್ ಮುಂತಾದೆಡೆಗಳಲ್ಲಿ ಕ್ರೀಡಾ ಆಧರಿತವಾದ ವಿಶೇಷ ಪಠ್ಯ ಯೋಜನೆಯನ್ನು ಸಿದ್ಧಪಡಿಸುವುದಕ್ಕಿರುವ ಅಭಿಪ್ರಾಯಗಳನ್ನೂ, ನಿರ್ದೇಶಗಳನ್ನೂ ನೀಡುವುದು;

(ಇಝಡ್ಎಫ್) ಶಿಕ್ಷಣ ಸಂಸ್ಥೆಗಳೊಂದಿಗೆ ಸಹಕರಿಸುತಾ ಪ್ರಸ್ತುತ ಸಂಸ್ಥೆಗಳಲ್ಲಿನ ಕ್ರೀಡಾ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವುದು;

(ಇಝಡ್ಜಿ) ಕ್ರೀಡಾ ಅಕಾಡೆಮಿಗಳ ಅಕ್ರಿಡಿಟೇಶನನ್ನೂ, ರೇಟಿಂಗನ್ನೂ ನಿಗದಿಪಡಿಸಬಹುದಾದ ರೀತಿಯಲ್ಲಿ ನೀಡುವುದು;

(ಇಝಡ್ಎಚ್) ಕ್ರೀಡಾ ಮೂಲ ಸೌಕರ್ಯಗಳ, ತರಬೇತಿ ಕೇಂದ್ರಗಳ, ಕ್ರೀಡಾ ಸ್ಪರ್ಧೆಗಳ, ಗ್ರಾಮೀಣ ಕ್ರೀಡಾಮೇಳ ಮುಂತಾದವುಗಳ ಮಾಹಿತಿ ಸಂಗ್ರಹಿಸುವುದು;

(ಇಝಡ್ಐ) ಕ್ರೀಡಾ ಚಲನಚಿತ್ರ ಮೇಳಗಳನ್ನು ಸಂಘಟಿಸುವುದು;

(ಇಝಡ್ಜೆ) ಕಾರ್ಮಿಕರು, ಕೃಷಿಕರು, ಪೊಲೀಸು, ಅಬಕಾರಿ, ಅರಣ್ಯ, ಸರಕಾರಿ ನೌಕರರು ಮುಂತಾದ ವಿಭಾಗದವರಿಗಿರುವ ಕ್ರೀಡಾ ಸ್ಪರ್ಧೆಗಳನ್ನು ಸಂಬಂಧಪಟ್ಟ ಇಲಾಖೆಗಳ ಸಹಕಾರದಿಂದ ನಡೆಸುವುದು;".

(v) ಖಂಡ (ಎಚ್)ನ ನಂತರ, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಚ್ಎ) ರೆಫರಿಗಳಿಗಾಗಿ ಕ್ಲಿನಿಕುಗಳನ್ನೂ, ಕಾರ್ಯಗಾರಗಳನ್ನೂ ಸಂಘಟಿಸುವುದು;

(ಎಚ್ಬಿ) ಮೂಲ ಸೌಕರ್ಯಗಳು, ಅಕಾಡೆಮಿಗಳು, ಕ್ರೀಡಾ ಮೇಳಗಳು ಇತ್ಯಾದಿಗಳಲ್ಲಿ ಖಾಸಗಿ ಹೂಡಿಕೆಯನ್ನು ಸಂಗ್ರಹಿಸುವುದು ಮತ್ತು ಉದ್ಯಮಿಗಳನ್ನು ಆಕರ್ಷಿಸುವುದು;

This is a digitally signed Gazette.
Authenticity may be verified through https://compose.kerala.gov.in/

5

(ಎಚ್‌ಸಿ) ಕ್ರೀಡಾ ಹೂಡಿಕೆ ಸಭೆಗಳನ್ನು ನಡೆಸುವುದು;

(ಎಚ್‌ಡಿ) ಸಹಕಾರಿ ಕ್ಷೇತ್ರದೊಂದಿಗೆ ಸಹಕರಿಸುತಾ ಕ್ರೀಡಾ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದಕ್ಕಿರುವ ಕ್ರಮಗಳನ್ನು ಕೈಗೊಳ್ಳುವುದು;".

(vi) ಖಂಡ (ಎಂ)ನ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಂ) ಕ್ರೀಡೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಶೇಖರಿಸುವುದು, ಕ್ರೀಡಾ ಇನ್‌ಫೋರ್‌ಮೇಶನ್ ಕೇಂದ್ರವನ್ನು ಅಥವಾ ಅಂಕಿ ಅಂಶಗಳನ್ನು ಶೇಖರಿಸುವ ಮತ್ತು ಕ್ರೀಡೆಗೆ ಸಂಬಂಧಿಸಿದ ಮೂಲ ಮಾಹಿತಿಗಳನ್ನು ಜೋಪಾನವಾಗಿಡುವುದಕ್ಕಿರುವ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಕ್ರೀಡೆಗೆ ಸಂಬಂಧಿಸಿದ ಗ್ರಂಥಾಲಯಗಳನ್ನೂ ಮ್ಯೂಜಿಯಮ್‌ಗಳನ್ನೂ ಸ್ಥಾಪಿಸುವುದು ಮತ್ತು ನಡೆಸುವುದು;".

(vii) ಖಂಡ (ಎನ್) ಬಿಟ್ಟುಬಿಡತಕ್ಕದ್ದು;

(viii) ಖಂಡ (ಒ)ವನ್ನು ಬಿಟ್ಟುಬಿಡತಕ್ಕದ್ದು;

(ix) ಖಂಡ (ಪಿ) ನಂತರ, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಪಿಎ) ಜಿಲ್ಲಾ ಕ್ರೀಡಾ ಕೌನ್ಸಿಲಿನ ಚಟುವಟಿಕೆಗಳ ಮೇಲ್ನೋಟ ವಹಿಸುವುದು;

(ಪಿಬಿ) ಅನುಸೂಚಿಯಲ್ಲಿ ಹೇಳುವ ಕಾರ್ಯಗಳಿಗಾಗಿ ಯೋಜನೆಗಳನ್ನು ಆವಿಷ್ಕರಿಸುವುದು ಮತ್ತು ಜಾರಿಗೊಳಿಸುವುದು;".

9. ವಿಭಾಗ 10ರ ತಿದ್ದುಪಡಿ.—ಪ್ರಧಾನ ಅಧಿನಿಯಮದ 10ನೇ ವಿಭಾಗದ (2)ನೇ ಉಪ-ವಿಭಾಗದ (ಎ) ಖಂಡದಲ್ಲಿ "ಚಟುವಟಿಕೆಗಳನ್ನು ಕ್ರೋಢೀಕರಿಸುವುದು" ಎಂಬ ಪದಗಳ ಬದಲು "ಚಟುವಟಿಕೆಗಳನ್ನು ಕ್ರೋಢೀಕರಿಸುವುದು ಮತ್ತು ಅಂತಹ ಚಟುವಟಿಕೆಗಳ ಮೇಲ್ನೋಟ ವಹಿಸುವುದು" ಎಂಬ ಪದಗಳನ್ನು ಸೇರಿಸತಕ್ಕದ್ದು.

10. ವಿಭಾಗ 31ರ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 31ರ ಉಪ-ವಿಭಾಗ (1ಎ)ಯ ಖಂಡ (viii)ರಲ್ಲಿ "ಸಂಬಂಧಪಟ್ಟ ಜಿಲ್ಲೆಯವರಿಗೆ ಮಾತ್ರವಾಗಿ" ಎಂಬ ಪದಗಳ ನಂತರ "ರಾಜ್ಯ ಕ್ರೀಡಾ ಸಂಘಟನೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

11. ವಿಭಾಗ 34ಎಯ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ (34ಎ)ಯಲ್ಲಿ,—

(ಎ) ಉಪ-ವಿಭಾಗ (2)ರ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ನಿಧಿಯಲ್ಲಿ, ಕೇಂದ್ರ-ರಾಜ್ಯ ಸರಕಾರಗಳು, ಕಾರ್ಪರೇಟುಗಳು, ಅಸೋಸಿಯೇಶನುಗಳು, ಸೊಸೈಟಿಗಳು, ಬೋರ್ಡುಗಳು, ಟ್ರಸ್ಟುಗಳು ಮುಂತಾದವುಗಳಿಂದಲೋ ಕಾನೂನುಪರವಾಗಿ ಇತರ ಯಾವುದೇ ಮೂಲಗಳಿಂದಲೋ ಲಭಿಸುವ ಎಲ್ಲಾ ಗ್ರ್ಯಾಂಟುಗಳೂ, ಸಹಾಯಧನವೂ, ಕೊಡುಗೆಗಳೂ, ಯಾವುದೇ ಖಾಸಗಿ ವ್ಯಕ್ತಿಗಳಿಂದಲೋ, ಸಂಸ್ಥೆಗಳಿಂದಲೋ, ಸಹಕಾರ ಸಂಸ್ಥೆಗಳಿಂದಲೋ, ಸಾರ್ವಜನಿಕ ವಲಯ ಸಂಸ್ಥೆಗಳಿಂದಲೋ, ಸಾಮೂಹಿಕ ಸಂಘಟನೆಗಳಿಂದಲೋ, ಸರಕಾರೇತರ ಸಂಘಟನೆಗಳಿಂದಲೋ ಲಭಿಸುವ ಹೂಡಿಕೆಗಳನ್ನು ಜಮೆ ಮಾಡತಕ್ಕದ್ದು.".

(ಬಿ) ಉಪ-ವಿಭಾಗ (3)ರ, ಖಂಡ (viii)ರ ನಂತರ, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ix) ಕ್ರೀಡಾಪಟುಗಳಿಗೆ ಸ್ಕಾಲರ್‌ಶಿಪ್ ನೀಡುವುದಕ್ಕೆ;

(x) ಕ್ರೀಡಾ ಕ್ಷೇತ್ರದಲ್ಲಿ ನೂತನ ರೀತಿಗಳಿಗೆ ಸಹಾಯ ನೀಡಲು;

(xi) ಕ್ರೀಡಾ ಉದ್ದಿಮೆಗಳಿಗೆ, ನಿಗದಿಪಡಿಸಬಹುದಾದ ರೀತಿಯಲ್ಲಿ ಬಡ್ಡಿ ಸಬ್ಸಿಡಿ, ಬಂಡವಾಳ ಹೂಡಿಕೆ ಸಬ್ಸಿಡಿ ಇತ್ಯಾದಿ ನೀಡಲು;

(xii) ಕ್ರೀಡೆಯನ್ನು ಸಾಮಾನ್ಯವಾಗಿ, ವಿಶಿಷ್ಟವಾಗಿ ಪ್ರತ್ಯೇಕ ಕ್ರೀಡಾ ವಿಭಾಗಗಳನ್ನು, ಪ್ರತಿಯೊಂದು ವ್ಯಕ್ತಿಗತ ಕ್ರೀಡಾಪಟುವನ್ನು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಮರ್ಥ್ಯ ಗಳಿಸುವುದಕ್ಕಾಗಿ ಪ್ರೋತ್ಸಾಯಿಸುವುದಕ್ಕೆ;

(xiii) ಕ್ರೀಡಾ ಕ್ಷೇತ್ರದಲ್ಲಿ ನೂತನ ತಂತ್ರಜ್ಞಾನವನ್ನು ಜಾರಿಗೊಳಿಸುವುದಕ್ಕೆ;

(xiv) ಪ್ರತಿಯೊಂದು ಕ್ಷೇತ್ರದಲ್ಲೂ ತಜ್ಞರಾದ ಕೋಚ್‌ಗಳಿಗೆ ಸುಸಂಬಂಧವಾದ ಕ್ರೀಡಾ ಐಟಮ್‌ಗಳಲ್ಲಿ ವಿಶೇಷ ತರಬೇತಿ ನೀಡುವುದಕ್ಕೆ;

(xv) ಕ್ರೀಡೆ, ಕ್ರೀಡಾ ಸಯನ್ಸ್ ಎಂಬೀ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಅಧ್ಯಯನ ನಡೆಸಲು;

(xvi) ರಾಜ್ಯದಲ್ಲಿ ಹೆಚ್ಚು ಸಾಮರ್ಥ್ಯ ಪ್ರಕಟಿಸುವ ಕ್ರೀಡಾಪಟುಗಳಿಗೆ ನೂತನ ರೀತಿಯ ಕ್ರೀಡಾ ತರಬೇತಿಯನ್ನು ಏರ್ಪಡಿಸಲು;

This is a digitally signed Gazette.
Authenticity may be verified through https://compose.kerala.gov.in/

6

(xvii) ಸಾರ್ವಜನಿಕ-ಖಾಸಗಿ ಸಹಭಾಗಿತ್ವದಿಂದಿರುವ ಕ್ರೀಡಾ ಮೂಲಸೌಕರ್ಯ ಯೋಜನೆಗಳನ್ನು ವಹಿಸಿಕೊಳ್ಳುವುದು, ನಿಗದಿಪಡಿಸಬಹುದಾದ ರೀತಿಯಲ್ಲಿ ನಿರ್ಮಾಣ ಚಟುವಟಿಕೆಗಳನ್ನು ನಡೆಸುವುದು ಮತ್ತು ಅಂತಹ ಚಟುವಟಿಕೆಗಳನ್ನು ಪರಿಪಾಲಿಸುವುದು.''.

(ii) ಉಪ-ವಿಭಾಗ (4)ರಲ್ಲಿ,—

(ಎ) ಐಟಮ್ (i)ರಲ್ಲಿ ''ಕ್ರೀಡಾ ಸಚಿವರು'' ಎಂಬ ಪದಗಳ ಬದಲು ''ಮುಖ್ಯಮಂತ್ರಿಯವರು'' ಎಂಬ ಪದವನ್ನು ಸೇರಿಸತಕ್ಕದ್ದು;

(ಬಿ) ಐಟಮ್ (i)ರ ನಂತರ, ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(iಎ)	ಕ್ರೀಡಾ ಇಲಾಖಾ ಸಚಿವರು	..	ವೈಸ್-ಚೇರ್‌ಮನ್ (ಪದನಿಮಿತ್ತ)
(iಬಿ)	ವೈಸ್-ಚೇರ್‌ಪರ್ಸನ್, ಕೇರಳ ರಾಜ್ಯ ಆಯೋಜನ ಮಂಡಳಿ	..	ಸದಸ್ಯ (ಪದನಿಮಿತ್ತ)
(iಸಿ)	ಕಾರ್ಯದರ್ಶಿ, ಕಾನೂನು ಇಲಾಖೆ	..	ಸದಸ್ಯ (ಪದನಿಮಿತ್ತ)
(iಡಿ)	ಸರಕಾರಿ ಕಾರ್ಯದರ್ಶಿ, ಹಣಕಾಸು (ಸಂಪನ್ಮೂಲ) ಇಲಾಖೆ	..	ಸದಸ್ಯ (ಪದನಿಮಿತ್ತ)

12. ಹೊಸ ಅನುಸೂಚಿಯ ಸೇರ್ಪಡೆ.—ಪ್ರಧಾನ ಅಧಿನಿಯಮದ 49ನೇ ವಿಭಾಗದ ನಂತರ, ಈ ಕೆಳಗಿನ ಅನುಸೂಚಿಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಅನುಸೂಚಿ

(ವಿಭಾಗ 5ರ ಉಪ-ವಿಭಾಗ (2)ರ ಖಂಡ (ಪಿಬಿ)ಯನ್ನು ನೋಡಿರಿ)

ಯೋಜನೆಯಲ್ಲಿ ಉಪಬಂಧಿಸಬಹುದಾದ ಕಾರ್ಯಗಳು

1. ಸರ್ಫಿಂಗ್, ಪಾರಾಸೈಲಿಂಗ್, ಬಿಲ್ಲುಗಾರಿಕೆ ಮುಂತಾದ ಕ್ರೀಡಾ ಐಟಮ್‌ಗಳಲ್ಲಿ ಮೀನುಗಾರರು, ಪರಿಶಿಷ್ಟಜಾತಿ ಪರಿಶಿಷ್ಟ ಗೋತ್ರ ಪಂಗಡ ವಿಭಾಗದವರು ಮುಂತಾದವರಿಂದಿರುವ ಪ್ರತಿಭಾನ್ವಿತ ವ್ಯಕ್ತಿಗಳನ್ನು ಕಂಡುಹಿಡಿಯುವುದು ಮತ್ತು ಅವರನ್ನು ಪ್ರೋತ್ಸಾಹಿಸಲಿರುವ ಕಾರ್ಯಗಳು.

2. ಶಾಲಾ-ಕಾಲೇಜು ವಿದ್ಯಾರ್ಥಿಗಳ ಮಾನವ ಸಂಪನ್ಮೂಲವನ್ನು ಉತ್ತಮಗೊಳಿಸುವುದಕ್ಕಿರುವ ಕಾರ್ಯಗಳು.

3. ರಾಷ್ಟ್ರೀಯ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಹೆಚ್ಚು ಮೆಡಲ್ ಸಾಧ್ಯತೆಯಿರುವ ಕ್ರೀಡಾ ಐಟಮ್‌ಗಳ ಟೂರ್ನಮೆಂಟ್, ನಿರ್ವಹಣೆ, ತರಬೇತಿ ಕೇಂದ್ರಗಳು ಇತ್ಯಾದಿಗಳಿಗೆ ಸಂಬಂಧಿಸಿದ ಕಾರ್ಯಗಳು.

4. ಶಿಕ್ಷಣ ಸಂಸ್ಥೆಗಳ ಸಹಕಾರದಿಂದ ಶಾಲಾ-ಕಾಲೇಜು ಮಕ್ಕಳ ಸ್ಪರ್ಧಾ ಸಾಮರ್ಥ್ಯವನ್ನು ಉತ್ತಮಗೊಳಿಸುವುದಕ್ಕಾಗಿ 'ಕೇರಳ ಗ್ರ್ಯಾಂಡ್ ಪ್ರಿ' ಸಂಬಂಧಿಸಿದ ಕಾರ್ಯಗಳು.

5. ಕ್ರೀಡಾಪಟುಗಳ ಕಲ್ಯಾಣಕ್ಕಿರುವ ಕಾರ್ಯಗಳು.

6. ಯಾತನೆ ಅನುಭವಿಸುವ ಕ್ರೀಡಾಪಟುಗಳ ಕಲ್ಯಾಣಕ್ಕಿರುವ ಕಾರ್ಯಗಳು.

7. ಯೋಜನೆಯಲ್ಲಿ ಉಪಬಂಧಿಸಬೇಕಾದುದೋ ಅಲ್ಲದಿದ್ದಲ್ಲಿ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಅವಶ್ಯಕವಾದುದೋ ಯುಕ್ತವಾದುದೋ ಆದ ಇತರ ಯಾವುದೇ ವಿಷಯಕ್ಕೆ.''.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 58/ಲೆಗ್. ಸಿ3/2024/ಕಾನೂನು. ತಿರುವನಂತಪುರಂ, *2024 ನವೆಂಬರ್ 1,* / *1200 ತುಲಾ 16/* / *1946 ಕಾರ್ತಿಕ 10.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದ ಮಸೂದೆಗೆ 2024 ಅಕ್ಟೋಬರ್ 31ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್‌ಕುಮಾರ್,

ಕಾನೂನು ಕಾರ್ಯದರ್ಶಿ.

2024ರ 25ನೇ ಅಧಿನಿಯಮ

2024ರ ಕೇರಳ ಕೈಗಾರಿಕೆ ಏಕಗವಾಕ್ಷಿ ಕ್ಲಿಯರೆನ್ಸ್ ಮಂಡಳಿಗಳು ಹಾಗೂ ಕೈಗಾರಿಕೆ ನಗರಪ್ರದೇಶ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ

1999ರ ಕೇರಳ ಕೈಗಾರಿಕೆ ಏಕಗವಾಕ್ಷಿ ಕ್ಲಿಯರೆನ್ಸ್ ಮಂಡಳಿಗಳು ಹಾಗೂ ಕೈಗಾರಿಕೆ ನಗರಪ್ರದೇಶ ಅಭಿವೃದ್ಧಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1999ರ ಕೇರಳ ಕೈಗಾರಿಕೆ ಏಕಗವಾಕ್ಷಿ ಕ್ಲಿಯರೆನ್ಸ್ ಮಂಡಳಿಗಳು ಹಾಗೂ ಕೈಗಾರಿಕೆ ನಗರ ಪ್ರದೇಶ ಅಭಿವೃದ್ಧಿ ಅಧಿನಿಯಮ (2000ದ 5)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಕೈಗಾರಿಕೆ ಏಕಗವಾಕ್ಷಿ ಕ್ಲಿಯರೆನ್ಸ್ ಮಂಡಳಿಗಳು ಹಾಗೂ ಕೈಗಾರಿಕೆ ನಗರಪ್ರದೇಶ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. ಕೆಲವು ಪದಪ್ರಯೋಗಗಳ ಬದಲು ಇತರ ಕೆಲವು ಪದಪ್ರಯೋಗಗಳನ್ನು ಸೇರಿಸತಕ್ಕದ್ದು.—1999ರ ಕೇರಳ ಕೈಗಾರಿಕೆ ಏಕಗವಾಕ್ಷಿ ಕ್ಲಿಯರೆನ್ಸ್ ಮಂಡಳಿಗಳು ಹಾಗೂ ಕೈಗಾರಿಕೆ ನಗರಪ್ರದೇಶ ಅಭಿವೃದ್ಧಿ ಅಧಿನಿಯಮ (2000ದ 5) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದಲ್ಲಿ,—

(i) "ಉಪಕಾನೂನು" ಎಂಬ ಪದ ಎಲ್ಲೆಲ್ಲಿ ಬರುವುದೋ ಅಲ್ಲೆಲ್ಲಾ "ಬೈಲಾ" ಎಂಬ ಪದವನ್ನು ತದನುಸಾರವಾಗಿ ಅದಕ್ಕೆ ಬದಲಾಗಿ ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ii) ''ಕೈಗಾರಿಕೆ ಉದ್ಯಮ'' ಎಂಬ ಪದ ಎಲ್ಲೆಲ್ಲಿ ಬರುವುದೋ ಅಲ್ಲೆಲ್ಲಾ ''ಕೈಗಾರಿಕೆ ಸಂಸ್ಥೆ'' ಎಂಬ ಪದವನ್ನು ತದನುಸಾರವಾಗಿ ಅದಕ್ಕೆ ಬದಲಾಗಿ ಸೇರಿಸತಕ್ಕದ್ದು.

3. 2ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 2ನೇ ವಿಭಾಗದಲ್ಲಿ (ಎ) ಖಂಡದಲ್ಲಿ ''ಕೈಗಾರಿಕೆ ಸಂಸ್ಥೆಗಳು'' ಎಂಬ ಪದದ ಬದಲು ''ಕೈಗಾರಿಕೆ ಸಂಸ್ಥೆ'' ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು (ಎಂ) ಖಂಡವನ್ನು ಬಿಟ್ಟುಬಿಡತಕ್ಕದ್ದು.

4. 4ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 4ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ''ಎರಡು ಲಕ್ಷ ರೂಪಾಯಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯನ್ನು ಹೊಂದಿರುವ ಸಣ್ಣ ಕೈಗಾರಿಕೆ ಉದ್ಯಮಗಳನ್ನು ಪ್ರಾರಂಭಿಸಲು'' ಎಂಬ ಪದಗಳ ಬದಲು ''ಹದಿನೈದು ಕೋಟಿ ರೂಪಾಯಿಯವರೆಗೆ ಬಂಡವಾಳ ಹೂಡಿಕೆಯನ್ನು ಹೊಂದಿರುವ ಕೈಗಾರಿಕೆ ಸಂಸ್ಥೆಗಳನ್ನು ಸ್ಥಾಪಿಸಲು, ಕಾರ್ಯಾಚರಿಸಲು, ವಿಪುಲಗೊಳಿಸಲು, ವೈವಿದ್ಧೀಕರಿಸಲು ಮತ್ತು ಆಧುನೀಕರಿಸಲು'' ಎಂಬ ಪದಗಳನ್ನು ಸೇರಿಸತಕ್ಕದ್ದು.

5. 5ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ, 5ನೇ ವಿಭಾಗದಲ್ಲಿ,—

(i) (1)ನೇ ಉಪ-ವಿಭಾಗದಲ್ಲಿ ''ಪ್ರಾರಂಭಿಸಲು ಮತ್ತು ಕಾರ್ಯಾಚರಿಸಲು'' ಎಂಬ ಪದಗಳ ಬದಲು ''ಸ್ಥಾಪಿಸಲು, ಕಾರ್ಯಾಚರಿಸಲು, ವಿಪುಲಗೊಳಿಸಲು, ವೈವಿದ್ಧೀಕರಿಸಲು ಮತ್ತು ಆಧುನೀಕರಿಸಲು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (2)ನೇ ಉಪ-ವಿಭಾಗದಲ್ಲಿ ''ಯಾವ ಜಿಲ್ಲೆಗಾಗಿ ಅದನ್ನು ರೂಪಿಸುವುದೋ ಆ ಜಿಲ್ಲೆಯ'' ಎಂಬ ಪದಗಳ ಬದಲು ''ಯಾವ ಕೈಗಾರಿಕೆ ಪ್ರದೇಶಕ್ಕಾಗಿ ಅದನ್ನು ರೂಪಿಸುವುದೋ ಆ ಕೈಗಾರಿಕೆ ಪ್ರದೇಶದ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) (6)ನೇ ಉಪ-ವಿಭಾಗದ ನಂತರ ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಆದರೆ, ಕೈಗಾರಿಕೆ ಪ್ರದೇಶವೆಂದು ಘೋಷಿಸಲ್ಪಟ್ಟ ಖಾಸಗಿ ಪಾರ್ಕಿನ ವಿಷಯದಲ್ಲಿ, ಸಂಬಂಧಪಟ್ಟ ಖಾಸಗಿ ಪಾರ್ಕಿನ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಒಬ್ಬ ವಿಶೇಷ ಆಹ್ವಾನಿತರಾಗಿರತಕ್ಕದ್ದು.'' .

6. 7ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ, 7ನೇ ವಿಭಾಗದ, (1)ನೇ ಉಪವಿಭಾಗದಲ್ಲಿ,—

(i) ''ಪ್ರಾರಂಭಿಸಲು'' ಎಂಬ ಪದದ ಬದಲು ''ಸ್ಥಾಪಿಸಲು ಅಥವಾ ಕಾರ್ಯಾಚರಿಸಲು ಅಥವಾ ವಿಪುಲಗೊಳಿಸಲು ಅಥವಾ ವೈವಿದ್ಧೀಕರಿಸಲು ಅಥವಾ ಆಧುನೀಕರಿಸಲು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಲೈಸೆನ್ಸುಗಳ ನವೀಕರಣೆ'' ಎಂಬ ಪದಗಳ ಬದಲು ''ಅದರ ನವೀಕರಣೆ'' ಎಂಬ ಪದಗಳನ್ನು ಸೇರಿಸತಕ್ಕದ್ದು.

7. 8ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ, 8ನೇ ವಿಭಾಗದಲ್ಲಿ,—

(i) (1)ನೇ ಉಪ-ವಿಭಾಗದಲ್ಲಿ,—

(ಎ) ''ಸ್ಥಾಪಿಸಲು ಉದ್ದೇಶಿಸುವ'' ಎಂಬ ಪದಗಳ ಬದಲು ''ಸ್ಥಾಪಿಸಲು ಅಥವಾ ಕಾರ್ಯಾಚರಿಸಲು ಅಥವಾ ವಿಪುಲಗೊಳಿಸಲು ಅಥವಾ ವೈವಿದ್ಧೀಕರಿಸಲು ಅಥವಾ ಆಧುನೀಕರಿಸಲು ಉದ್ದೇಶಿಸುವ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ''ಪ್ರಮಾಣ ಪತ್ರಗಳು ಅಥವಾ'' ಎಂಬ ಪದದ ನಂತರ ''ಅದರ ನವೀಕರಣೆ'' ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (4)ನೇ ಉಪ-ವಿಭಾಗದಲ್ಲಿ ''ಸ್ಥಾಪಿಸಲು ಅಥವಾ ಕಾರ್ಯಾಚರಿಸಲು'' ಎಂಬ ಪದಗಳ ಬದಲು ''ಸ್ಥಾಪಿಸಲು ಅಥವಾ ಕಾರ್ಯಾಚರಿಸಲು ಅಥವಾ ವಿಪುಲಗೊಳಿಸಲು ಅಥವಾ ವೈವಿದ್ಧೀಕರಿಸಲು ಅಥವಾ ಆಧುನೀಕರಿಸಲು'' ಎಂಬ ಪದಗಳನ್ನು ಸೇರಿಸತಕ್ಕದ್ದು.

8. 9ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 9ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ''ಸ್ಥಾಪಿಸಲು ಉದ್ದೇಶಿಸುವ'' ಎಂಬ ಪದಗಳ ಬದಲು ''ಸ್ಥಾಪಿಸಲು ಅಥವಾ ಕಾರ್ಯಾಚರಿಸಲು ಅಥವಾ ವಿಪುಲಗೊಳಿಸಲು ಅಥವಾ ವೈವಿದ್ಧೀಕರಿಸಲು ಅಥವಾ ಆಧುನೀಕರಿಸಲು ಉದ್ದೇಶಿಸುವ'' ಎಂಬ ಪದಗಳನ್ನು ಸೇರಿಸತಕ್ಕದ್ದು.

9. 11ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 11ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ''ಆ ರೀತಿ ಷರತ್ತುಗಳೊಂದಿಗೆ ನೀಡಲ್ಪಟ್ಟ'' ಎಂಬ ಪದಗಳ ಬದಲು ''ಆ ರೀತಿ ನಿರಾಕರಿಸುವಂತಹ ಆದೇಶ ಅಥವಾ ಆ ರೀತಿ ಷರತ್ತುಗಳೊಂದಿಗೆ ನೀಡಲ್ಪಟ್ಟ ಆದೇಶ'' ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 59/ಲೆಗ್. ಎ1/2025/ಕಾನೂನು. ತಿರುವನಂತಪುರಂ, *2025 ಮಾರ್ಚ್ 28, 1200 ಮೀನ 14/ 1947 ಚೈತ್ರ 7.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2025 ಮಾರ್ಚ್ 28ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2025ರ 2ನೇ ಅಧಿನಿಯಮ

2025ರ ಕೇರಳ ಧನವಿನಿಯೋಗ (2ನೇ ನಂಬ್ರ) ಅಧಿನಿಯಮ

2025 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಹಿಂತೆಗೆಯುವುದಕ್ಕಾಗಿ ಉಪಬಂಧಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2025 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಹಿಂತೆಗೆಯುವುದಕ್ಕಾಗಿ ಉಪಬಂಧಿಸುವುದು ಅಗತ್ಯವಾದುದರಿಂದ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು.—ಈ ಅಧಿನಿಯಮವನ್ನು 2025ರ ಕೇರಳ ಧನವಿನಿಯೋಗ (2ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2025 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 315698,94,16,000 ರೂಪಾಯಿಗಳ ಹಿಂತೆಗೆಯುವಿಕೆ.—2025 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದಲ್ಲಿ, ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ಸಂಬಂಧಿಸಿ ಉಂಟಾಗುವ ವಿವಿಧ ಖರ್ಚುಗಳನ್ನು ಭರಿಸುವುದಕ್ಕಾಗಿ, ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವುದಕ್ಕಿಂತ ಮೀರದ ಹಾಗೂ ಒಟ್ಟು ಮೂರು ಲಕ್ಷದ ಹದಿನೈದು ಸಾವಿರದ ಆರುನೂರ ತೊಂಭತ್ತೆಂಟು ಕೋಟಿ ತೊಂಭತ್ತನಾಲ್ಕು ಲಕ್ಷದ ಹದಿನಾರು ಸಾವಿರ ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡಬಹುದಾಗಿದೆ ಹಾಗೂ ವಿನಿಯೋಗಿಸಬಹುದಾಗಿದೆ.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವ ಮೊತ್ತಗಳನ್ನು ಪ್ರಸ್ತುತ ವರ್ಷಕ್ಕೆ ಸಂಬಂಧಿಸಿದ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದಾಗಿದೆ.

G. 11/2025/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
				ಮೊರಬಾರದ ಮೊತ್ತಗಳು		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	ಒಟ್ಟು (₹)
1.	I	**ರಾಜ್ಯ ವಿಧಾನಸಭೆ**	**ಕಂದಾಯ**	**144,67,88,000**	**82,39,000**	**145,50,27,000**
2.	II	**ರಾಜ್ಯದ ಆಡಳಿತ ಮುಖ್ಯಸ್ಥರು, ಸಚಿವರುಗಳು ಹಾಗೂ ಪ್ರಧಾನ ಕಛೇರಿ ಸಿಬ್ಬಂದಿಗಳು**	**ಕಂದಾಯ**	**685,24,40,000**	**251,18,68,000**	**936,43,08,000**
3.	III	**ನ್ಯಾಯಪರಿಪಾಲನೆ**	**ಕಂದಾಯ**	**1167,06,99,000**	**207,64,37,000**	**1374,71,36,000**
4.	IV	**ಚುನಾವಣೆಗಳು**	**ಕಂದಾಯ**	**136,83,00,000**	**..**	**136,83,00,000**
5.	V	**ಸರಕು ಸೇವಾ ತೆರಿಗೆ, ಕೃಷಿ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ**	**ಕಂದಾಯ**	**475,68,97,000**	**68,25,000**	**476,37,22,000**
6.	VI	**ಭೂ ತೆರಿಗೆ**	**ಕಂದಾಯ**	**920,40,87,000**	**1,25,000**	**920,42,12,000**
7.	VII	**ಸ್ಟಾಂಪುಗಳು ಹಾಗೂ ನೋಂದಣಿ**	**ಕಂದಾಯ**	**290,15,79,000**	**..**	**290,15,79,000**
8.	VIII	ಅಬಕಾರಿ	ಕಂದಾಯ	425,77,04,000	6,00,000	425,83,04,000
9.	IX	ವಾಹನ ತೆರಿಗೆಗಳು	ಕಂದಾಯ	255,73,72,000	..	255,73,72,000
10.		ಸಾಲ ಬಾಧ್ಯತೆಗಳು	ಕಂದಾಯ	..	31943,71,79,000	31943,71,79,000
11.	X	ಖಜಾನೆಗಳು, ಲೆಕ್ಕಪತ್ರಗಳು	ಕಂದಾಯ	408,69,50,000	..	408,69,50,000
12.	XI	ಜಿಲ್ಲಾಡಳಿತ ಹಾಗು ವಿವಿಧೋದ್ದೇಶಗಳು	ಕಂದಾಯ	943,43,05,000	1,59,25,000	945,02,30,000
13.	XII	ಪೋಲೀಸು	ಕಂದಾಯ	5174,03,48,000	9,78,36,000	5183,81,84,000
			ಬಂಡವಾಳ	53,49,00,000	..	53,49,00,000
14.	XIII	ಜೈಲುಗಳು	ಕಂದಾಯ	217,76,07,000	..	217,76,07,000
15.	XIV	ಸ್ಟೇಷನರಿ, ಮುದ್ರಣ ಹಾಗೂ ಇತರ ಆಡಳಿತ ಸೇವೆಗಳು	ಕಂದಾಯ	678,47,67,000	5,01,000	678,52,68,000
			ಬಂಡವಾಳ	8,23,28,000	..	8,23,28,000
16.	XV	ಸಾರ್ವಜನಿಕ ಕಾಮಗಾರಿ	ಕಂದಾಯ	2113,28,26,000	2,98,96,000	2116,27,22,000
			ಬಂಡವಾಳ	3002,84,84,000	40,50,01,000	3043,34,85,000
17.	XVI	ಪಿಂಚಣಿ ಹಾಗೂ ವಿವಿಧೋದ್ದೇಶ	ಕಂದಾಯ	42532,29,74,000	9,11,77,000	42541,41,51,000

This is a digitally signed Gazette.
Authenticity may be verified through https://compose.kerala.gov.in/

3

(1)	(2)		(3)		
18. XVII	ಶಿಕ್ಷಣ, ಕ್ರೀಡೆ, ಕಲೆ	ಕಂದಾಯ	26167,64,11,000	30,00,000	26167,94,11,000
	ಹಾಗೂ ಸಂಸ್ಕೃತಿ	ಬಂಡವಾಳ	471,52,01,000	..	471,52,01,000
19. XVIII	ವೈದ್ಯಕೀಯ ಹಾಗೂ	ಕಂದಾಯ	10137,93,96,000	4,57,000	10137,98,53,000
	ಸಾರ್ವಜನಿಕ ಆರೋಗ್ಯ	ಬಂಡವಾಳ	293,74,05,000	2,000	293,74,07,000
20. XIX	ಕುಟುಂಬ ಕಲ್ಯಾಣ	ಕಂದಾಯ	446,24,40,000	1,000	446,24,41,000
21. XX	ನೀರು ಸರಬರಾಜು	ಕಂದಾಯ	416,92,41,000	..	416,92,41,000
	ಹಾಗೂ ಶುಚೀಕರಣ	ಬಂಡವಾಳ	881,99,00,000	..	881,99,00,000
22. XXI	ಗೃಹ ನಿರ್ಮಾಣ	ಕಂದಾಯ	80,92,32,000	15,00,000	81,07,32,000
		ಬಂಡವಾಳ	65,60,01,000	..	65,60,01,000
23. XXII	ನಗರಾಭಿವೃದ್ಧಿ	ಕಂದಾಯ	1908,10,53,000	1,000	1908,10,54,000
		ಬಂಡವಾಳ	141,61,01,000	..	141,61,01,000
24. XXIII	ವಾರ್ತಾ ಪ್ರಸಾರ	ಕಂದಾಯ	114,87,47,000	..	114,87,47,000
	ಹಾಗೂ ಪ್ರಚಾರ	ಬಂಡವಾಳ	3,30,00,000	..	3,30,00,000
25. XXIV	ಕಾರ್ಮಿಕತೆ, ಕಾರ್ಮಿಕ ಕಲ್ಯಾಣ	ಕಂದಾಯ	1032,03,13,000	..	1032,03,13,000
	ಹಾಗೂ ಅನಿವಾಸಿ ಕಲ್ಯಾಣ	ಬಂಡವಾಳ	190,55,02,000	..	190,55,02,000
26. XXV	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/	ಕಂದಾಯ	2285,30,14,000	2,000	2285,30,16,000
	ಇತರ ಹಿಂದುಳಿದ ವರ್ಗಗಳು/	ಬಂಡವಾಳ	1202,61,39,000	1,000	1202,61,40,000
	ಅಲ್ಪಸಂಖ್ಯಾತರ ವಿಭಾಗಗಳು				
	ಮೊದಲಾದವರ ಕಲ್ಯಾಣ				
27. XXVI	ಪ್ರಕೃತಿ ವಿಕೋಪದಿಂದುಂಟಾಗುವ	ಕಂದಾಯ	1989,58,00,000	..	1989,58,00,000
	ನಷ್ಟ ಪರಿಹಾರಕ್ಕೆ				
28. XXVII	ಸಹಕಾರ	ಕಂದಾಯ	499,95,47,000	..	499,95,47,000
		ಬಂಡವಾಳ	84,30,00,000	..	84,30,00,000
29. XXVIII	ವಿವಿಧ ಆರ್ಥಿಕ ಸೇವೆಗಳು	ಕಂದಾಯ	255,17,41,000	..	255,17,41,000
		ಬಂಡವಾಳ	5293,51,10,000	..	5293,51,10,000
30. XXIX	ಕೃಷಿ	ಕಂದಾಯ	3121,34,21,000	5,78,000	3121,39,99,000
		ಬಂಡವಾಳ	475,04,04,000	..	475,04,04,000
31. XXX	ಆಹಾರ	ಕಂದಾಯ	2028,48,23,000	1,000	2028,48,24,000
		ಬಂಡವಾಳ	37,92,00,000	..	37,92,00,000
32. XXXI	ಮೃಗಸಂರಕ್ಷಣೆ	ಕಂದಾಯ	1024,84,34,000	..	1024,84,34,000
		ಬಂಡವಾಳ	27,35,00,000	..	27,35,00,000
33. XXXII	ಹೈನುಗಾರಿಕೆ	ಕಂದಾಯ	173,70,68,000	..	173,70,68,000
		ಬಂಡವಾಳ	40,70,00,000	..	40,70,00,000

This is a digitally signed Gazette.
Authenticity may be verified through https://compose.kerala.gov.in/

4

(1)	(2)		(3)		
34. XXXIII	ಮೀನುಗಾರಿಕೆ	ಕಂದಾಯ	449,34,27,000	..	449,34,27,000
		ಬಂಡವಾಳ	277,59,62,000	..	277,59,62,000
35. XXXIV	ಅರಣ್ಯ	ಕಂದಾಯ	822,12,88,000	3,02,000	822,15,90,000
		ಬಂಡವಾಳ	96,80,02,000	..	96,80,02,000
36. XXXV	ಪಂಚಾಯತು	ಕಂದಾಯ	670,07,48,000	..	670,07,48,000
		ಬಂಡವಾಳ	534,61,02,000	..	534,61,02,000
37. XXXVI	**ಗ್ರಾಮಾ**ಭಿವೃದ್ಧಿ	ಕಂದಾಯ	5407,24,49,000	1,000	5407,24,50,000
		ಬಂಡವಾಳ	1537,40,00,000	..	1537,40,00,000
38. XXXVII	ಕೈಗಾರಿಕೆಗಳು	ಕಂದಾಯ	896,55,08,000	..	896,55,08,000
		ಬಂಡವಾಳ	1165,75,03,000	1,000	1165,75,04,000
39. XXXVIII	ನೀರಾವರಿ	ಕಂದಾಯ	468,63,03,000	2,29,000	468,65,32,000
		ಬಂಡವಾಳ	413,75,03,000	55,00,000	414,30,03,000
40. XXXIX	ವಿದ್ಯುಚ್ಛಕ್ತಿ ಯೋಜನೆಗಳು	ಕಂದಾಯ	108,33,30,000	..	108,33,30,000
		ಬಂಡವಾಳ	13,11,00,000		13,11,00,000
41. XL	ಬಂದರುಗಳು	ಕಂದಾಯ	76,78,15,000	..	76,78,15,000
		ಬಂಡವಾಳ	85,02,00,000		85,02,00,000
42. XLI	ಸಾರಿಗೆ	ಕಂದಾಯ	100,57,61,000	86,12,87,000	186,70,48,000
		ಬಂಡವಾಳ	1706,90,90,000	1,000	1706,90,91,000
43. XLII	ಪ್ರವಾಸೋದ್ಯಮ	ಕಂದಾಯ	243,49,06,000	..	243,49,06,000
		ಬಂಡವಾಳ	215,53,00,000	..	215,53,00,000
44. XLIII	ನಷ್ಟ ಪರಿಹಾರ ಹಾಗೂ ಹಕ್ಕು ವರ್ಗಾವಣೆ	ಕಂದಾಯ	15980,48,50,000	..	15980,48,50,000
45.	ಸಾರ್ವಜನಿಕ ಸಾಲ ಮರುಪಾವತಿ	ಬಂಡವಾಳ	..	114960,88,94,000	114960,88,94,000
46. XLV	ವಿವಿಧ ಸಾಲಗಳು ಹಾಗೂ ಮುಂಗಡಗಳು	ಬಂಡವಾಳ	669,06,81,000	..	669,06,81,000
47. XLVI	ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ	ಕಂದಾಯ	15641,17,67,000	1000	15641,17,68,000
		ಬಂಡವಾಳ	75,29,54,000	..	75,29,54,000
	ಒಟ್ಟು		**168182,60,48,000**	**147516,33,68,000**	**315698,94,16,000**

PUBLISHED BY THE SUPERINTENDENT OF GOVERNMENT PRESSES
AT THE GOVERNMENT CENTRAL PRESS, THIRUVANANTHAPURAM, 2025.

This is a digitally signed Gazette.
Authenticity may be verified through https://compose.kerala.gov.in/

Digitally signed by VEERAN T
Date:2025.11.18 03:21:01 +05:30